# ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 20

ಅಕ್ಟೋಬರ್ 14, 2007

ಕನ್ನಡ ವಾರಪತ್ರಿಕೆ

ರೂ. 5/-


## ಕರ್ನಾಟಕದ ರಾಜಕೀಯ ತಿರುವುಗಳು ಹಾಗೂ ಇಂದಿನ ಕಬ್ಬಾಟ




ಪೇಜ್ 8

ಪೇಜ್ 9




## ನೆರೆ ಹಾವಳಿಗೆ ನಲುಗಿದ ಜನತೆ

## ಗೋಧಿ ಆಮದು ಹಗರಣದ ವಾಸನೆ



ಪೇಜ್ 7

## ಪೌರಸಂಸ್ಥೆ ಚುನಾವಣೆ: ಹೊಸ ನಿರೀಕ್ಷೆ

## 'ಕೃಷ್ಣ'ನಿಂದ ನಿರಾಸೆ



## ಸರ್ಕಾರದ ಪತನ ಸನ್ನಿಹಿತ

## ಇದ್ದದ್ದು ಇದ್ಹಾಂಗ

"ರಾಮಸೇತು ನಾಶಪಡಿಸಬೇಕೆಂಬುದು ತಮ್ಮ ಅಭಿಪ್ರಾಯವಲ್ಲ. ಸೇತುಸಮುದ್ರಂ ಕಡಲ್ಗಾಲುವೆ ಯೋಜನೆ ಅನುಷ್ಠಾನವಾಗಬೇಕೆಂಬುದೇ ನಮಗೆ ಮುಖ್ಯ. ಸೇತು ಒಡೆದಾದರೂ ಸರಿ. ಒಡೆಯದೇ ಆದರೂ ಸರಿ ಯೋಜನೆ ಅನುಷ್ಠಾನಗೊಳ್ಳಬೇಕು"

**ಕರುಣಾನಿಧಿ**
ತಮಿಳುನಾಡು ಮುಖ್ಯಮಂತ್ರಿ

★

**ಜನಚಳುವಳಿಯ ದಮನ**

'ನ್ಯಾಯಾಂಗ ತನ್ನ ಮಿತಿಯಲ್ಲಿರಬೇಕು'

**- ತಮಿಳುನಾಡಿನ ಡಿ.ಪಿ.ಎ ಒಕ್ಕೂಟದ ಹೇಳಿಕೆ** - ಬಂದ್ ನಿಷೇಧದ ಬಗ್ಗೆ

★

ಪ್ರತಿಯೊಬ್ಬ ನ್ಯಾಯಾಧೀಶರು ಸರಿಯಾಗಿ ತೀರ್ಪು ನೀಡುತ್ತಿದ್ದಿದ್ದರೆ? ಮೇಲ್ಮನವಿಗೆ ಅವಕಾಶ ಇರುವುದಾದರೂ ಯಾಕೆ?

**- ಟಿ.ಆರ್.ಬಾಲು,** ಕೇಂದ್ರದ ಹಡಗುಯಾನ ಸಚಿವ

★

'ಸಾರ್ವಜನಿಕ ಪ್ರತಿಭಟನೆಗಳನ್ನು ಈ ರೀತಿಯಾಗಿ ನ್ಯಾಯಾಲಯ ದಮನಿಸಲು ಸಾಧ್ಯವಿಲ್ಲ ಒತ್ತಾಯಪೂರ್ವಕವಾಗಿ ಬಂದ್ ಹೇರುವುದನ್ನು ನಾವು ವಿರೋಧಿಸುತ್ತೇವೆ. ಒತ್ತಾಯ ಹಾಗೂ ಸಾರ್ವಜನಿಕ ಹಿತಾಸಕ್ತಿಗಳ ನಡುವೆ ವ್ಯತ್ಯಾಸ ಗುರುತಿಸಬೇಕು'

**- ಸೀತಾರಾಮ ಯೆಚೂರಿ,** ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರು

★

'ಮುಂಬೈ ಕೋಮುಗಲಭೆ ಸಂಬಂಧ ಶಿವಸೇನಾ ಬಿಜೆಪಿ ನೇತೃತ್ವದ ಸರ್ಕಾರ ....1371 ಪ್ರಕರಣಗಳ ಪೈಕಿ 1259 ಪ್ರಕರಣಗಳನ್ನು ಮುಚ್ಚಿ ಹಾಕಿತು. ಇನ್ನುಳಿದ ಕೇವಲ 112 ಪ್ರಕರಣಗಳನ್ನು ವಿಶೇಷ ಕಾರ್ಯಾಪಡೆ (ಎಸ್‌ಟಿಎಫ್) ಮರು ತನಿಖೆ ನಡೆಸಿತು.
ಕೋಮು ಗಲಭೆಗೆ ಬಾಳಠಾಕ್ರೆ ಹಾಗೂ ಅವರ ಸಂಗಡಿಗರು ಪ್ರಚೋದನೆ ನೀಡಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಯೋಗ ಹೇಳಿದ ಹೊರತಾಗಿಯೂ ಕಾಂಗ್ರೆಸ್ ಎನ್‌ಸಿಪಿ ಸರ್ಕಾರ ಕ್ರಮ ಜರುಗಿಸಲು ವಿಫಲವಾಗಿದೆ'

**- ಸುಪ್ರಿಂಕೋರ್ಟ್‌ನಲ್ಲಿ ವಿವಿಧ ಸಂಘಟನೆಗಳ ಹೇಳಿಕೆ**

★

**ವಂಶಪಾರಂಪರ್ಯ ಆಡಳಿತ**

'ರಾಹುಲ್‌ಗಾಂಧಿಯವರನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಮಾಡಿದಾಗ ಅದನ್ನು ವಿರೋಧಿಸಿ ಬಿಜೆಪಿಯಲ್ಲಿ ಯಾರೋ ಮೆಲ್ಲಗೆ ದನಿ ಎತ್ತಿದರು. ಆ ಪಕ್ಷದ ಅಧ್ಯಕ್ಷ ರಾಜನಾಥಸಿಂಗ್ ತಮ್ಮ ಮಗನನ್ನೇ ಉತ್ತರ ಪ್ರದೇಶದಲ್ಲಿ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷರನ್ನಾಗಿ ಮಾಡಿದ ಸುದ್ದಿ ಹೊರಬೀಳುತ್ತಿದ್ದಂತೆಯೇ ಆ ದನಿಯೂ ಅಡಗಿ ಹೋಯಿತು. ರಾಜನಾಥಸಿಂಗ್ ಅವರನ್ನು ದನಿ ಏರಿಸಿ ಕೇಳುವ ಸ್ಥಿತಿಯಲ್ಲಿ ಆ ಪಕ್ಷದಲ್ಲಿಯೂ ಯಾರೂ ಇಲ್ಲ....
ಸಂಸದರಿರಲಿ ಶಾಸಕರಾಗಿರಲಿ ಅವಕಾಶ ಸಿಕ್ಕಿದರೆ ಮಕ್ಕಳನ್ನು ರಾಜಕೀಯ ಉತ್ತರಾಧಿಕಾರಿಗಳಾಗಿ ಮಾಡಲು ಯಾರೂ ಹಿಂಜರಿಯಲಾರರು. ಇದಕ್ಕೆ ಅಪವಾದ ಎಡಪಕ್ಷಗಳು ಮಾತ್ರ. ಹುಡುಕಿದರೂ ವಂಶಪರಂಪರೆಯ ಒಂದೇ ಒಂದು ಉದಾಹರಣೆ ಶಾಸಕರ ಮಟ್ಟದಲ್ಲಿಯೂ ದೊರೆಯಲಾರದು. ಚುನಾವಣೆಗೆ ಅಭ್ಯರ್ಥಿಯ ಆಯ್ಕೆಯಲ್ಲಿ ಪಕ್ಷದ ನಿರ್ಧಾರವೇ ಅಂತಿಮ'

**- ದಿನೇಶ್ ಅಮಿನ್‌ಮಟ್ಟು**
ಪ್ರಜಾವಾಣಿಯ 'ದೆಹಲಿನೋಟ' ಅಂಕಣದಲ್ಲಿ

★

**ಆಂತರಿಕ ವ್ಯವಹಾರ**

'ಭಾರತದ ಕಮ್ಯುನಿಸ್ಟ್ ಪಕ್ಷಗಳ ಜತೆಗೆ ನಮಗೆ ಸೌಹಾರ್ದ ಸಂಬಂಧಗಳಿದ್ದರೂ ನಾವು ಇನ್ನೊಂದು ದೇಶದ ಆಂತರಿಕ ವ್ಯವಹಾರದಲ್ಲಿ ಎಂದಿಗೂ ತಲೆ ಹಾಕುವುದಿಲ್ಲ'

**ಸಿಪಿಸಿ - ಚೀನಾದ ಕಮ್ಯುನಿಸ್ಟ್ ಪಕ್ಷ,**
ಅಮೆರಿಕಾ-ಭಾರತ ಅಣುಒಪ್ಪಂದದ ವಿವಾದದ ಹಿನ್ನೆಲೆಯಲ್ಲಿ

★

**ಅತಿಥಿ ಗೃಹದಲ್ಲೇ ಉಳಿದರು...**

"ಮಂಗಳೂರಿನಲ್ಲಿ ಕೋಮುಗಲಭೆ ಸಂಭವಿಸಿದಾಗ ಮುಖ್ಯಮಂತ್ರಿ , ಉಪಮುಖ್ಯಮಂತ್ರಿ ವಿಜಾಪುರ ಪ್ರವಾಸದಲ್ಲಿ ಇದ್ದರು. ತಕ್ಷಣ ಅಲ್ಲಿಗೆ ತೆರಳಿ ಕೊಲೆಯಾಗಿರುವ ಇಬ್ಬರ ಕುಟುಂಬ ವರ್ಗದವರನ್ನು ಭೇಟಿ ಮಾಡಿ ಸಾಂತ್ವನ ಹೇಳಿ ಎಂದು ದೂರವಾಣಿ ಮೂಲಕ ಸೂಚಿಸಿದೆ. ಮಂಗಳೂರಿಗೆ ಇಬ್ಬರೂ ಭೇಟಿ ನೀಡಿದರು. ಆದರೆ ಮೃತರ ನಿವಾಸಕ್ಕೆ ಮುಖ್ಯಮಂತ್ರಿ ಮಾತ್ರ ಭೇಟಿ ನೀಡಿದರು. ಯಡಿಯೂರಪ್ಪ ಅತಿಥಿಗೃಹದಲ್ಲೇ ಉಳಿದರು. ನಾನು ಮುಖ್ಯಮಂತ್ರಿ ಮತ್ತು ಪ್ರಧಾನಿಆಗಿದ್ದಾಗ ಒಮ್ಮೆಯೂ ಇಂತಹ ದುರ್ಘಟನೆಗೆ ಅವಕಾಶ ನೀಡಿರಲಿಲ್ಲ."

**- ಎಚ್.ಡಿ. ದೇವೇಗೌಡ,** ಮಾಜಿ ಪ್ರಧಾನಿ ಮತ್ತು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ

★

**ಪಕ್ಷ ಒಡೆಯಲು....**

ಹಿಂದೆ ಅಧಿಕಾರಕ್ಕಾಗಿ ತಮ್ಮದೇ ಬಿಜೆಪಿ ಪಕ್ಷವನ್ನು ಒಡೆಯಲು ಬಿ.ಎಸ್.ಯಡಿಯೂರಪ್ಪ ಸಿದ್ಧರಾಗಿದ್ದರು.

**- ಎಚ್.ಡಿ.ಕುಮಾರಸ್ವಾಮಿ**

## ಚುಚ್ಚುಮದ್ದು

■ 'ನಮ್ಮದೆ ನೈಜ ಗರೀಬಿ ಹಟಾವೋ' - ಬಿಜೆಪಿ

→ ಅಂದರೆ ನಿಮ್ಮ ಬಡತನ ನಿವಾರಣೆಯಾ?

★

■ 'ಭಾರತ ಪಾಕಿಸ್ಥಾನ ಇರಾನ್ ಅನಿಲ ಪೈಪ್‌ಲೈನ್ ಯೋಜನೆಗೆ ಸಂಬಂಧಿಸಿ ಸಮಾಲೋಚನೆಯ ಮೂಲಕವಲ್ಲ ವಿಘ್ನಗಳನ್ನು ನಿವಾರಿಸಿಕೊಳ್ಳಲು ಭಾರತ ಮುಂದೆ ಬರುವುದು ಎಂಬ ವಿಶ್ವಾಸವಿದೆ.'

- ಇರಾನ್ ತೈಲ ಸಚಿವರ ವಿಶೇಷ ಪ್ರತಿನಿಧಿ **ಹೊಜ್ಜಾ ತೊಲ್ಲಾ ಘನಿ ಮಿಫಾರ್ಡ್**

→ ದೊಡ್ಡಣ್ಣ ಜಾರ್ಜ್‌ಬುಷ್ ಬುಸ್ ಬುಸ್ ಅಂತೀದೀರಲ್ಲ. ಈ ಸರ್ಕಾರ ಹೇಗೆ ಮುಂದೆ ಬರುತ್ತೆ ಸ್ವಾಮಿ.

★

■ "ಗೋಮೂತ್ರ ಸಂಶೋಧನೆಗೆ ರೂ.25 ಲಕ್ಷ " - ಸುದ್ದಿ

→ ಸಗಣಿ ಬಗ್ಗೆ ಸಂಶೋಧನೆಗೆ ಎಷ್ಟು 50 ಲಕ್ಷವಾ -ಒಂದು ಕೋಟಿಯಾ ?

★

■ "ಪರಮಾಣು ವಿಚಾರದಲ್ಲಿ ಅಂತರಾಷ್ಟ್ರೀಯ ಸಹಕಾರದ ಸಾಧ್ಯತೆ ಹೆಚ್ಚಿಸಲು ಭಾರತ ಯತ್ನಿಸುತ್ತಿದೆ. ಅಮೆರಿಕದ ಜತೆಗಿನ ಒಪ್ಪಂದದಿಂದ ಭಾರತಕ್ಕೆ ಧಕ್ಕೆ ಇಲ್ಲ"

- ಅಣುಶಕ್ತಿ ಆಯೋಗದ ಅಧ್ಯಕ್ಷ **ಕಾಕೋಡ್‌ಕರ್** .

→ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳುವುದಕ್ಕೆ ನಿಮ್ಮಕಡೆ ಸಹಕಾರ ಅಂತಾರೆಯೇ?

## ಸಾಹಿತಿ ವಿ.ಚಿಕ್ಕವೀರಯ್ಯನವರ ನಿಧನಕ್ಕೆ ಸಂತಾಪ

ಪ್ರಗತಿಪರ ಚಿಂತಕ, ಸಾಹಿತಿ ಹಾಗೂ ಜನಪರ ಚಳುವಳಿಯಲ್ಲಿ ನಿರಂತರವಾಗಿ ಗುರುತಿಸಿಕೊಂಡಿದ್ದ ವಿ.ಚಿಕ್ಕವೀರಯ್ಯನವರ ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಮಾರ್ಕ್ಸ್‌ವಾದಿ ಚಿಂತನೆಗಳಿಂದ ಪ್ರಭಾವಿತರಾದ 'ವೀಚಿ'ಯವರು ರಾಜಕೀಯ ಪ್ರವೇಶಿಸಿ, ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು ತುಮಕೂರು ನಗರ ಸಭೆ ಅಧ್ಯಕ್ಷರಾಗಿದ್ದರು. ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿಯಾಗಿ ಶಾಸಕ ಸ್ಥಾನಕ್ಕೂ ಸ್ಪರ್ಧಿಸಿದ್ದರು.

ವೀಚಿಯವರ ಸಾವು ಸಾಹಿತ್ಯವಲಯಕ್ಕೆ ಹಾಗೂ ಎಡಚಿಂತನೆ, ಜನಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಆ ಚಿರಂತನ ಸ್ಪೂರ್ತಿಯನ್ನು ಜೀವಂತವಾಗಿ ಇಡಬೇಕಾಗಿದೆ.

ಈ ಸಂದರ್ಭದಲ್ಲಿ ವೀಚಿಯವರ ಕುಟುಂಬವರ್ಗಕ್ಕೆ ಹಾಗೂ ಹಿತೈಷಿಗಳ ದುಃಖದಲ್ಲಿ ಸಿಪಿಐ(ಎಂ) ಭಾಗಿಯಾಗಿದೆ ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಇದು ನಿಮಗೆ ಗೊತ್ತ?

ರಿಲಯನ್ಸ್ ಗುಂಪಿನ ಅಧ್ಯಕ್ಷರಾದ ಮುಖೇಶ್ ಅಂಬಾನಿಯವರ ಈಗಿನ ಒಟ್ಟು ಆಸ್ತಿ ಮೌಲ್ಯ ಎಷ್ಟು ಗೊತ್ತ 2 ಲಕ್ಷ ಕೋಟಿಯಂತೆ.

ಇತ್ತೀಚೆಗೆ ಷೇರುಪೇಟೆ ಸೂಚ್ಯಂಕ ಏರಿದ್ದರಿಂದ ಇವರ ಆಸ್ತಿ ಮೌಲ್ಯ ಈ ಮಟ್ಟಕ್ಕೆ ಏರಿದೆಯಂತೆ.

ಇಂತಹ ಶುಭ ಸಮಾಚಾರಗಳ ನಡುವೆ ಅಗತ್ಯ ವಸ್ತು ಬೆಲೆ ಯಾವ ರೀತಿ ಏರುತ್ತಿದೆ ಎಂದೂ, ಜನರ ಮೇಲೆ ತೆಂಗೆ ಭಾರ ಯಾವ ರೀತಿ ಏರುತ್ತಾ ಇದೇ ಅಂತಲೂ ಕೇಳಬಾರದಂತೆ. ಇದೇ ರೀತಿ ಬಡವರ ಸಂಖ್ಯೆಯೂ ಏರುತ್ತಿದೆಯೇ ಎಂಬ ಬಗ್ಗೆ ಯಾರೂ ಯೋಚಿಸಲೇಬಾರದು ಎಂದು ಅಮೇರಿಕಾ, ಅಣು ಒಪ್ಪಂದ ಇನ್ನು ಅಂತಿಮ ಆಗದೇ ಇರುವುದರಿಂದ ಇನ್ನೂ ಆದೇಶ ಹೊರಡಿಸಿಲ್ಲವಂತೆ.

## ಹ...ಹ್ಹಾ...ಹ್ಹಾ...

ನಾಡಿಗೆ ಭೀಕರ ಬರಗಾಲ ಬಂತು. ಊರಿನ ಕೆರೆ, ಕುಂಟೆಗಳೆಲ್ಲಾ ಬತ್ತಿ ಹೋದವು. ಕ್ರಮೇಣ ಬಾವಿಗಳಲ್ಲಿ ನೀರು ಬತ್ತಲಾರಂಭಿಸಿತು. ಆ ಊರಿನ ಬ್ರಾಹ್ಮಣರ ಕೇರಿ- ಅಗ್ರಹಾರದಲ್ಲಿದ್ದ ಬಾವಿಯಲ್ಲಿಯೂ ನೀರು ಬತ್ತಿಹೋಯಿತು.

ಆದರೆ ದಲಿತರ ಕೇರಿಯ ಬಾವಿಯಲ್ಲಿ ಮಾತ್ರ ನೀರು ಇಂಗಲಿಲ್ಲ. ಮಳೆ ಬೆಳೆ ಚೆನ್ನಾಗಿದ್ದಾಗ 'ಸಾಮಾನ್ಯವಾಗಿ' ಬ್ರಾಹ್ಮಣರು ದಲಿತ ಕೇರಿಗೆ ಬರುವವರಲ್ಲ. ಮತ್ತೊಂದೆಡೆ ಹೊಲಸು, ಕಸ ತೆಗೆಯುವ ಕೆಲಸಕ್ಕಾಗಿ ಬಿಟ್ಟರೆ ದಲಿತರಿಗೆ ಊರೊಳಕ್ಕೆ ಪ್ರವೇಶವಿರಲಿಲ್ಲ.

ಪುರೋಹಿತರು ನೀರಿಗಾಗಿ ಕೊಡ ಹಿಡಿದು ದಲಿತ ಕೇರಿಯ ಬಾವಿ ಬಳಿ ಬಂದಾಗ ಮುಗ್ಧ ದಲಿತರಿಗೆ ಗಾಬರಿ. ತಮ್ಮ ಕೇರಿಯ ನೀರನ್ನು ದೈವಾಂಶ ಸಂಭೂತ ಬ್ರಾಹ್ಮಣರು ಕುಡಿಯಬಹುದೇ? ಪುರೋಹಿತರು ನೀರು ತೆಗೆದುಕೊಂಡರು. ದಲಿತರು ತಮ್ಮ ಮುಗ್ಧ ಆತಂಕ ತೋಡಿಕೊಂಡರು. ಪುರೋಹಿತರು ಸಮಾಧಾನ ಹೇಳಿದರು.

ಅಸ್ಪೃಶ್ಯರು ಸವರ್ಣೀಯರ ಬಾವಿಯಲ್ಲಿ ನೀರು ತೆಗೆದುಕೊಳ್ಳುವುದು ತಪ್ಪು. ಅಪರಾಧ. ಆದರೆ ಬ್ರಾಹ್ಮಣರು ದಲಿತ ಕೇರಿಯ ಬಾವಿಯಿಂದ ನೀರು ಪಡೆಯಬಹುದು. ಅದರಿಂದ ಮೈಲಿಗೆ ಇಲ್ಲ. ಏಕೆಂದರೆ ಬ್ರಾಹ್ಮಣರ ಸ್ಪರ್ಶ ಮಾತ್ರದಿಂದಲೇ ದಲಿತ ಕೇರಿಯ ಬಾವಿ ನೀರು ಪವಿತ್ರವಾಗಿ ಬಿಡುತ್ತದೆ.!

ಜನಶಕ್ತಿ
ಚಂದಾದಾರರಾಗಿ
ವಾರ್ಷಿಕ ರೂ. 250
ಅರ್ಧವಾರ್ಷಿಕ ರೂ. 125
ಸಂಪರ್ಕಕ್ಕಾಗಿ
9448230114, 9448505789

## ಸಂಪಾದಕೀಯ

# ನಿಶ್ಚಿತ ಪತನ

ಕರ್ನಾಟಕದ ರಾಜಕೀಯದಲ್ಲಿ ಅತ್ಯಂತ ಮಿಂಚಿನ ಸಂಚಾರದ ವಿದ್ಯಮಾನಗಳು ಜರುಗುತ್ತಿವೆ. ಜಾತ್ಯಾತೀತ ಜನತಾದಳ ಮತ್ತು ಬಿಜೆಪಿ ಪಕ್ಷಗಳ ನಡುವೆ ಈ 20 ತಿಂಗಳ ಹಿಂದೆ ಏರ್ಪಟ್ಟ ಮೈತ್ರಿ ಮುರಿದು ಬಿದ್ದಿದೆ. ಬಿಜೆಪಿ ಮತ್ತು ಜೆಡಿ(ಎಸ್) ನಡುವೆ ಉದ್ಭವಿಸಿದ ಬಿಕ್ಕಟ್ಟು ಬಹಿರಂಗ ವಾಗ್ವಾದವಾಗಿ ಮಾರ್ಪಟ್ಟು ಬಳಿಕ ಅದು ದೆಹಲಿಗೂ ತಲುಪಿ ಈಗ ಬಿಜೆಪಿ ಕೇಂದ್ರ ನಾಯಕತ್ವ ಮೈತ್ರಿ ಕೂಟದಿಂದ ಹೊರಬರಲು ಬೆಂಬಲ ವಾಪಸ್ಸು ಪಡೆಯಲು ನಿರ್ಧರಿಸಿರುವುದು ಈ ಕ್ಷಣದ ಬೆಳವಣಿಗೆ. ಪ್ರಕಟಿತವಾದಂತೆ ಬಿಜೆಪಿಯು ಈ ಸರ್ಕಾರಕ್ಕೆ ನೀಡಿರುವ ಬೆಂಬಲ ವಾಪಸ್ಸು ಪಡೆದ ಬಗ್ಗೆ ರಾಜ್ಯಪಾಲರಿಗೆ ಭಾನುವಾರ ಪತ್ರ ನೀಡಿದರೆ ಪತನದ ಪ್ರಕ್ರಿಯೆ ಪೂರ್ಣಗೊಂಡಂತೆ.

ಈ ಕೆಡಿಎಫ್ ಸರ್ಕಾರದ ರಚನೆಯೇ ಅತ್ಯಂತ ಸಂದರ್ಭ ಸಾಧಕ, ಅನೈತಿಕ. ದಕ್ಷಿಣ ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ರಾಜ್ಯ ಸರ್ಕಾರದ ಅಧಿಕಾರದಲ್ಲಿ ಪಾಲು ಪಡೆದ ಬಿಜೆಪಿಯು ಸಂಘ ಪರಿವಾರದ ಅಜೆಂಡಾ ಜಾರಿಗೆ ತನ್ನನ್ನು ಬದ್ಧವೆಂದು ಆರಂಭದಲ್ಲೇ ಘೋಷಿಸಿತು. ಅದಕ್ಕಾಗಿ ವಿವಿಧ ಹಂತಗಳಲ್ಲಿ ಸರ್ಕಾರದ ಯಂತ್ರವನ್ನು ಬಳಸುತ್ತಾ ಬಂದಿದೆ ಎಂಬುದನ್ನು ಈ ಉದ್ದಕ್ಕೂ ಗಮನಿಸಬಹುದು. ಇನ್ನು ಹೇಗಾದರೂ ಒಪ್ಪಂದಂತೆ 20 ತಿಂಗಳ ಬಳಿಕ ಮುಖ್ಯಮಂತ್ರಿ ಸ್ಥಾನ ಒಳಗೊಂಡೇ ಪ್ರಮುಖ ಆಯಕಟ್ಟಿನ ಖಾತೆಗಳನ್ನು ಹೊಂದಿ ತನ್ನ ಆಟ ಆಡಲು ಹವಣಿಸಿತು. ಈ ಹವಣಿಕೆಗೆ ಅವಕಾಶ ದೊರೆಯಲಾರದ ಬೆಳವಣಿಗೆ ಒಂದು ಮಟ್ಟದಲ್ಲಿ ಸ್ವಾಗತಾರ್ಹ.

ಇತ್ತೀಚಿಗಿನ ದಿನಗಳಲ್ಲಿ ಈ ಎರಡು ಪಕ್ಷಗಳ ನಡುವಿನ ಘರ್ಷಣೆ ಹೆಚ್ಚುತ್ತಾ, ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶದ ಬಳಿಕ ಸ್ಫೋಟಗೊಂಡಿತು. ಈ ನಡುವೆ ಬಿಜೆಪಿಗೆ ಸೇರಿದ ಸಚಿವ ಸಂಪುಟದ ಸದಸ್ಯ ಶ್ರೀರಾಮುಲು ಮುಖ್ಯಮಂತ್ರಿಗಳ ಮೇಲೆಯೇ ಕೊಲೆ ಸಂಚಿನ ಆರೋಪ ಮಾಡಿದಾಗ, ಬಿಜೆಪಿ ನಾಯಕತ್ವ ಅದನ್ನು ವಿರೋಧಿಸಲು ಅಥವಾ ತನ್ನ ನಿಲುವು ಸ್ಪಷ್ಟಪಡಿಸಿ, ಅಗತ್ಯ ಕ್ರಮವಹಿಸಲು ನಿರಾಕರಿಸಿದ್ದು ಸಂಘರ್ಷ ತೀವ್ರಗೊಳ್ಳಲು ಕಾರಣವಾಗಿದೆ. ನಂತರವೂ ಅಧಿಕಾರ ವರ್ಗಾವಣೆಯ ಪೂರ್ವಭಾವಿ ಮಾತುಕತೆಗಳಲ್ಲಿ ಜೆಡಿ(ಎಸ್) ನಾಯಕರ ಕೇಳಿಕೆ, ಆತಂಕಗಳಿಗೆ ಬಿಜೆಪಿ ಸೂಕ್ತವಾಗಿ ಸ್ಪಂದಿಸದೆ ಒತ್ತಡದ ತಂತ್ರವಾಗಿ ಬಿಜೆಪಿ ಸಚಿವರೆಲ್ಲಾ ರಾಜೀನಾಮೆ ಸಲ್ಲಿಸಿದ್ದು ಪರಿಸ್ಥಿತಿಯನ್ನು ಹದಗೆಡಿಸಿತು. ಕೋಮುವಾದಿ ಬಿಜೆಪಿಯ ಬಗ್ಗೆ ಜೆಡಿ(ಎಸ್) ನಾಯಕರು ವಿವಿಧ ಕಡೆಗಳಲ್ಲಿ ಮಾತನಾಡಿದಾಗ ಬಹಿರಂಗಗೊಳಿಸಿದ ಸಂಗತಿಗಳು ಕೋಮುವಾದಿ ಅಜೆಂಡಾದ ಜಾರಿಯ ಪ್ರಯತ್ನಗಳನ್ನು ಬಯಲುಗೊಳಿಸಿವೆ.


ಹುತಾತ್ಮಪಟ್ಟದಿಂದ ಲಾಭ ಹೊಡೆಯಬಹುದೆಂಬ ಲೆಕ್ಕಾಚಾರವೂ ಸೇರಿದಂತೆ ಇಂದು ಬಿಜೆಪಿ ಬೆಂಬಲ ವಾಪಸ್ಸು ತೆಗೆದುಕೊಂಡದ್ದರಿಂದ ಸರ್ಕಾರದ ಪತನ ನಿಶ್ಚಿತವಾಗಿದೆ. ಮುಂದೇನು ಎಂಬ ಪ್ರಶ್ನೆ ಇದೆ.

ಒಟ್ಟಾರೆ ಕೋಮುವಾದಿ ಬಿಜೆಪಿಗೆ ಅಧಿಕಾರದ ಚುಕ್ಕಾಣಿ ನೀಡಬಾರದು ಎಂಬ ಪ್ರಗತಿಪರರು, ಜಾತ್ಯಾತೀತ ಶಕ್ತಿಗಳ ಸತತ ಆಗ್ರಹಗಳು ಸರಿಯಾದುದೇ. ಜನರನ್ನು ದಿವಾಳಿ ಏಳಿಸುವ ಆರ್ಥಿಕ ನೀತಿಗಳನ್ನೇ ಪ್ರತಿಪಾದಿಸಿ ಜಾರಿಗೆ ತರುವ, ಕೋಮು ವಿಭಜನೆ ತರುವುದೇ ತನ್ನ ಗುರಿಯಾಗಿಸಿರುವ ಫ್ಯಾಸಿಸ್ಟ್ ಮನೋಭಾವದ ಪಕ್ಷಕ್ಕೆ ಮಾತಿನಂತೆ ಅಧಿಕಾರ ವರ್ಗಾವಣೆ ಮಾಡಬೇಕೆಂಬ ಕೆಲವರ ವಾದ ಅರ್ಥಹೀನವಾದುದು. ಮೈತ್ರಿಯೇ ಅನೈತಿಕ, ಅಪಾಯಕಾರಿಯಾಗಿರುವಾಗ ಅಧಿಕಾರ ಹಸ್ತಾಂತರಕ್ಕೆ ಏನರ್ಥವಿದೆ.

ಈ ಎಲ್ಲಾ ಗೊಂದಲ, ಕಾದಾಟಗಳಲ್ಲಿ ಮುಳುಗಿ ಜನರಿಗಿತ್ತ ವಚನ ಪಾಲಿಸಲಾಗಿದೆಯೇ? ಎಂದು ಯಾರೂ ಗಂಭೀರವಾಗಿ ಯೋಜಿಸುತ್ತಿಲ್ಲ. ಅವರ ಸಮಸ್ಯೆಗಳತ್ತ ಗಮನವಿಲ್ಲ, ಇವರತ್ತ ಕಾಳಜಿಯೇ ಇಲ್ಲದಿರುವುದು ಈ ಪಕ್ಷಗಳ ನಿಜ ಕಾಳಜಿಯನ್ನು ತೋರಿಸುತ್ತದೆ.

ಈಗಾಗಲೇ ಇದೇ ಅಕ್ಟೋಬರ್ 18 ರಂದು ವಿಧಾನಸಭೆಯ ಅಧಿವೇಶನ ಕರೆಯಲಾಗಿದ್ದು ರಾಜಕೀಯ ವಿದ್ಯಮಾನಗಳ ಕುತೂಹಲಕರ ತಿರುವು ಪಡೆಯಬಹುದು. ಮತ್ತೆ ಅತಿಹೆಚ್ಚಿನ ಬಲದೊಂದಿಗೆ ಅಧಿಕಾರಹಿಡಿಯಬೇಕೆಂಬ ಬಿಜೆಪಿಯ ಬಯಕೆಗೆ ತಕ್ಕ ಉತ್ತರ ಹೇಳಬೇಕಿದೆ.

# ಅವಕಾಶಕ್ಕಾಗಿ ಕಾದಿರುವ ರಣಹದ್ದುಗಳು




ಎಷ್ಟು ವಾರಗಳು ಉರುಳಿ ಹೋದವು, ಇನ್ನೇನು ಸರ್ಕಾರವೇ ಉರುಳಿ ಹೋಗಬಹುದು ಎಂಬ ದಿನಗಳೂ ಬಂದವು. ಆದರೆ ಸಾರಿಗೆ ಬಸ್ಸೊಂದಕ್ಕೆ ಬೆಂಕಿ ಇಟ್ಟು ಇಬ್ಬರನ್ನು ಸಜೀವ ದಹನ ಮಾಡಿದ ಕೊಲೆಗಾರರು ಪತ್ತೆಯಾಗಲಿಲ್ಲ! ಪತ್ತೆಯಾದರೂ ಅವರ ಮೇಲೆ ಕೊಲೆಯ ಕೇಸ್ ದಾಖಲಾಗಿಲ್ಲ. ಒಬ್ಬ ಮುಖ್ಯಮಂತ್ರಿ ಮಗಳ ಮನೆ ಮೇಲೆ ರಾಜಾರೋಷವಾಗಿ ಕಲ್ಲು ತೂರಿ ಧಾಳಿ ಮಾಡಿದರೂ ಅಲ್ಲಿಯೂ ಕಾನೂನು ನಿಷ್ಠುರವಾಗಿ ವರ್ತಿಸಲಿಲ್ಲ. ನಿಜವಾದ ಅಪರಾಧಿಗಳ ಹೆಸರು ಗೊತ್ತಾದರೂ ಅದು ಬಹಿರಂಗಗೊಳ್ಳಲಿಲ್ಲ. ಅವರನ್ನು ಛೂ ಬಿಟ್ಟು ನಾಯಕರು, ಸಂಘಟನೆಗಳು ಹೆಸರೂ ಅಷ್ಟೇ... ಸೇತು ಸಮುದ್ರಂ ಯೋಜನೆ. ರಾಮನ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯುವರು

ಎರಡು ಮುಗ್ದ ಜೀವಿಗಳ ಬಲಿ



ಹೇಳಿದರೆನ್ನಲಾದ ಹೇಳಿಕೆಯನ್ನು ವಿರೋಧಿಸಿ ತಮಿಳುನಾಡಿಗೆ ಹೊರಟಿದ್ದ ಬಸ್‌ಗೆ ಆರ್.ಎಸ್.ಎಸ್. ಭಜರಂಗದಳದ ಕಾರ್ಯಕರ್ತರು ಬೆಂಕಿ ಹಾಕಿದರು. ಕರುಣಾನಿಧಿ ಮಗಳ ಮನೆ ಮೇಲೂ ಬೆಂಗಳೂರಿನಲ್ಲಿ ಕಲ್ಲು ತೂರಿದ್ದರು. ಈ ಕೃತ್ಯದಲ್ಲಿ ಭಾಗಿಯಾದವರು ಕೈಗೆ ಸಿಕ್ಕರೂ ಅವರ ಮೇಲೆ ಕ್ರಮ ಜರುಗಿಸದಂತೆ, ತಾಕೀತು ಮಾಡಲಾಗಿತ್ತು. ಅವರು ಯಾವ ಸಂಘಟನೆಗಳಿಗೆ ಸೇರಿದವರೆಂದು ಬಹಿರಂಗಗೊಳಿಸಬಾರದೆಂದು ಆದೇಶಿಸಲಾಗಿತ್ತು. ಹಾಗೆಯೇ ಪೋಲೀಸ್ ಇಲಾಖೆಯು ಅಂತಹವರನ್ನು ಬಹಿರಂಗಗೊಳಿಸಲಿಲ್ಲ. ಮುಖ್ಯಮಂತ್ರಿ ಕುಮಾರಸ್ವಾಮಿ ಬಿಜೆಪಿಯ ಕೃತ್ಯಗಳ ಬಗ್ಗೆ 'ದೋಷರೋಪಣಾ ಪಟ್ಟಿ' ಬಿಡುಗಡೆ ಮಾಡುವವರೆಗೂ... ವಿಷಯ ಗೊತ್ತಾಗಲಿಲ್ಲ! ಹೂಡಲಾದ ಮೊಕದ್ದಮೆಯೂ ಪೆಟ್ಟಿ ಕೇಸ್‌ಗಳನ್ನುವಂತಹವು.

ಆದರೆ ಕಾರ್ಮಿಕರ ವರ್ಗ, ಅದರ ಸಂಘಟನೆಗಳು ಹೋರಾಟ ನಡೆಸಿದರೆ ಸರ್ಕಾರ ಹೇಗೆ ನಡೆದುಕೊಳ್ಳುತ್ತದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಹಿಂದೆ ಬಿಪಿಎಲ್ ಕಾರ್ಮಿಕರಿದ್ದ ವಾಹನವೊಂದಕ್ಕೆ ಯಾರೋ ಬೆಂಕಿ ಹಚ್ಚಿದರೆಂದು ಆ ಹೊತ್ತಿನಲ್ಲಿ ಮುಷ್ಕರದಲ್ಲಿದ್ದ ಬಿಪಿಎಲ್ ಕಾರ್ಮಿಕರ ಸಂಘಟನೆಯ ಮುಖ್ಯಪದಾಧಿಕಾರಿಗಳು, ಕಾರ್ಯಕರ್ತರ ಮೇಲೆ ಕೊಲೆ ಮೊಕದ್ದಮೆ ಹೂಡಿ ಜೈಲಿಗಟ್ಟಲಿಲ್ಲವೇ? ಸಮರ್ಥ ವಾದ, ಮಾಹಿತಿಗಳು ಇದ್ದರೂ ಅವರಿಗೆ ಜೀವಾವಧಿ ಶಿಕ್ಷೆ ನೀಡಲಿಲ್ಲವೇ? ಇದು ಸಾಲದು ಎಂದು ಆಡಳಿತವರ್ಗ ಕಾರ್ಮಿಕ ನಾಯಕರನ್ನು ನೇಣಿಗೇರಿಸಬೇಕೆಂದು ಮೇಲ್ಮನವಿ ಸಲ್ಲಿಸಿಲ್ಲವೇ?

ಇಲ್ಲಿ, ಆಳುವ ವರ್ಗಗಳ ಪಕ್ಷಪಾತ, ಪ್ರಜಾಸತ್ತಾತ್ಮಕ ಚಳುವಳಿಗಳ ದಮನ ಕುರಿತು ಮತ್ತೊಮ್ಮೆ ಮಾತನಾಡಬಹುದು. ಇಂದಿನ ಗಂಭೀರ ಪ್ರಶ್ನೆ, ಸಂಘಪರಿವಾರದ ಫಾಶಿಸ್ಟ್ ಸ್ವರೂಪದ ಹಿಂದುತ್ವದ ಅಜೆಂಡಾಕ್ಕೆ ಕಟಿಬದ್ಧರೆಂದು ಘೋಷಿಸುತ್ತಲೇ ಇರುವ ಬಿಜೆಪಿ ನಾಯಕತ್ವಕ್ಕೆ ಅತಿ ಹೆಚ್ಚಿನ ಹಾಗೂ ಆಯಕಟ್ಟಿನ ಮುಖ್ಯಮಂತ್ರಿ, ಗೃಹಮಂತ್ರಿಯಂತಹ ಸ್ಥಾನಗಳು ದೊರೆತರೆ ಏನಾದೀತು? ಇನ್ನೂ ಅಂತಹ ಸ್ಥಾನ ವರ್ಗಾವಣೆಯಾಗಿಲ್ಲ. ಈ ಮೊದಲೇ ಜೀವಂತ ದಹನ, ಆಕ್ರಮಣಗಳು, ಆರಂಭಗೊಂಡಿದ್ದು ಏನನ್ನು ಸೂಚಿಸುತ್ತವೆ. ಅಂದು ಒರಿಸ್ಸಾದಲ್ಲಿ ಜನರ ಸೇವೆಗೆಂದಿದ್ದ ಕ್ರೈಸ್ತ ಪಾದ್ರಿ, ಗ್ರಹಂ ಸ್ಟೇನ್ಸ್ ಮತ್ತು ಮಕ್ಕಳನ್ನು ಜೀವಂತ ಸುಟ್ಟು ಕೊಂದ ಕೃತ್ಯಗಳ ಮುಂದುವರಿಕೆಯಲ್ಲವೇ? ಇಷ್ಟು ನಡೆದುದಾದರೂ ಯಾಕಾಗಿ? ಕರುಣಾನಿಧಿ ಅಥವಾ ಯಾರೇ ಆಗಲಿ, ಅವರ ಅಭಿಪ್ರಾಯ ಹೇಳಲು ಹಕ್ಕಿಲ್ಲವೇ? ತಮಗೆ ತೋಚಿದಂತೆ ಆಧಾರ ರಹಿತ, ಅರ್ಥಹೀನ ಹೇಳಿಕೆ ಪುಂಖಾನುಪುಂಖವಾಗಿ ಸಾರಲು ಅವಕಾಶವಿರುವ ಅದೂ ಕೋಟ್ಯಾಂತರ ಜನರ ಚುನಾಯಿತ ಪ್ರತಿನಿಧಿಯಾಗಿರುವಾಗ... ಕರುಣಾನಿಧಿ ಹೇಳಿದ್ದಾದರೂ ಏನು? ರಾಮಸೇತು ಎನ್ನಲಾಗುವುದನ್ನು ರಾಮನಾಗಲಿ... ವಾನರರಾಗಲಿ ಕಟ್ಟಿದ್ದಲ್ಲ. ಪುರಾಣ ಕಾವ್ಯದಲ್ಲಿ ಹೇಳುವಂತಹ ರಾಮ ಒಂದು ಕಾಲ್ಪನಿಕ ಎಂದು. ಇದೇ ಅಭಿಪ್ರಾಯವನ್ನು ವಿಜ್ಞಾನಿಗಳು, ಇತಿಹಾಸ ಸಂಶೋಧಕರು ಅನೇಕ ಬಾರಿ ಹೇಳಿದ್ದಾರೆ. ರಾಮಾಯಣದ ಕುರಿತೇ ಹಲವಾರು ಹೊಸ ವ್ಯಾಖ್ಯಾನಗಳ ಕಾವ್ಯ ಕಥನಗಳು ಸೃಷ್ಟಿಯಾಗಿವೆ. ರಾಮನು ಪಿತೃವಾಕ್ಯಪರಿಪಾಲಿಸಲು ಹಿಮಾಲಯಕ್ಕೆ ಹೋಗುತ್ತಾನೆ. ದಶರಥ ಜಾತಕದಲ್ಲಿ ಆತ ವಾರಣಾಸಿ ರಾಜನ ಮಗ. ರಾವಣ ಸೀತೆಯನ್ನು ಅಪಹರಿಸುವುದಿಲ್ಲ.

ಇದಲ್ಲದೇ ರಾವಣನನ್ನೇ ಮುಖ್ಯ ನಾಯಕನನ್ನಾಗಿಸಿದ ರಾಮಾಯಣಗಳೂ ಇವೆ. ತಮ್ಮ ಊರಿನಲ್ಲೇ ರಾಮ ಹುಟ್ಟಿದನೆಂಬ ನಂಬಿಕೆಗಳೂ ಇವೆ. ಇವೆಲ್ಲವನ್ನು ನಿರಾಕರಿಸಿ ಪುರಾಣದ ನಂಬಿಕೆಗಳನ್ನೇ ಪರಮ ಶ್ರೇಷ್ಠ ಹಾಗೂ ಪ್ರಶ್ನಾತೀತ ಎಂದು ಸಂಘ ಪರಿವಾರ ಹೇಳುವುದರಲ್ಲಿ ಏನರ್ಥವಿದೆ? ಇಂತಹ 'ಕಲ್ಪನೆ' 'ನಂಬಿಕೆ' ಗಳನ್ನೇ ಸತ್ಯವೆಂದು ಪ್ರತಿಪಾದಿಸುತ್ತಾ ಅದರ ನೆಲೆಯಲ್ಲೇ ಧಾರ್ಮಿಕ ಭಾವನೆಗಳನ್ನು ಕೆದಕಿ ಧರ್ಮ, ದೇವರುಗಳನ್ನು ರಾಜಕೀಯ ಅಧಿಕಾರದ ಮೆಟ್ಟಿಲುಗಳನ್ನಾಗಿಸುವ ಕುತಂತ್ರವಿದೆ ಅಷ್ಟೇ.

ಪುಟ 15 ಕ್ಕೆ

## ಆಡಳಿತದಲ್ಲಿ ಕೋಮುವಾದಿ ಶಕ್ತಿಗಳ ಅಪಾಯ ಬಹಿರಂಗ

ಅ.4 ರಂದು ವಿವಿದೆಡೆಗಳಲ್ಲಿ ಮಾತನಾಡಿದ ರಾಜ್ಯದ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಜೆಡಿ(ಎಸ್) ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ಆಡಳಿತದಲ್ಲಿ ಬಿಜೆಪಿಯ ಪಾತ್ರದ ಬಗ್ಗೆ ಕೆಲವು ಅಪಾಯಕಾರಿ ಸಂಗತಿಗಳನ್ನು ಬಹಿರಂಗಪಡಿಸಿದ್ದಾರೆ. ಮತ್ತು ಕೆಲವು ಪ್ರಮುಖ ಪ್ರಶ್ನೆಗಳನ್ನು ಎತ್ತಿದ್ದಾರೆ. ಕರುಣಾನಿಧಿಯವರ ಮಗಳ ಮನೆಯ ಮೇಲಿನ ದಾಳಿ ಹಾಗೂ ಹೊಸೂರು ರಸ್ತೆಯಲ್ಲಿ ಬಸ್ ಸುಟ್ಟ ಬಗ್ಗೆ ಮತ್ತು ಇಬ್ಬರ ಹತ್ಯೆಯ ಪ್ರಕರಣಗಳಲ್ಲಿ ಬಿಜೆಪಿ ನಾಯಕರ ಪಾತ್ರ , ಬಾಬಾ ಬುಡನ್‌ಗಿರಿ ಬಗ್ಗೆ ಸಂಪುಟದ ತೀರ್ಮಾನಕ್ಕೆ ಯಡಿಯೂರಪ್ಪ ವಾರಗಟ್ಟಲೆ ಸಹಿಹಾಕದೆ ಸತಾಯಿಸಿದ್ದು, ಮಂಗಳೂರಿನ ಕೋಮುಗಲಭೆಗಳ ಸಂದರ್ಭದಲ್ಲಿ ಮುಖ್ಯಮಂತ್ರಿ -ಉಪಮುಖ್ಯಮಂತ್ರಿ ಇಬ್ಬರೂ ಒಟ್ಟಾಗಿ ಹತ್ಯೆಗೊಳಗಾದವರ ಮನೆಗೆ ಭೇಟಿ ನೀಡಬೇಕೆಂಬ ಪ್ರಸ್ತಾವವನ್ನು ಉಪಮುಖ್ಯಮಂತ್ರಿಯವರು ತಿರಸ್ಕರಿಸಿದ್ದು, ಇತ್ಯಾದಿಗಳು ರಾಜ್ಯದ ಜನರಿಗೆ ಹೊಸದಾಗಿ ಬಹಿರಂಗವಾಗಿರುವ ಸಂಗತಿಗಳು.

ಇವುಗಳ ಜೊತೆಗೆ ಬಿಜೆಪಿಗೆ ಆರ್‌ಎಸ್‌ಎಸ್ ಮತ್ತು ಬಜರಂಗ ದಳಕ್ಕೆ ಕಡಿವಾಣ ಹಾಕುವ ಶಕ್ತಿ ಇದೆಯೇ? ರಾಜ್ಯದಲ್ಲಿ ರಕ್ತದೋಕುಳಿ ನಡೆಯಬಹುದಾದ ಪರಿಸ್ಥಿತಿಯ ಬಗ್ಗೆ ಗಂಭೀರ ಪ್ರಶ್ನೆ ಎತ್ತಿದ್ದಾರೆ.ಬಿಜೆಪಿಯಂತಹ ಕೋಮುವಾದಿ ಶಕ್ತಿಗೆ ರಾಜ್ಯದ ಆಡಳಿತದಲ್ಲಿ ಭಾಗವಹಿಸಲು ಅವಕಾಶ ನೀಡಬಾರದು ಎಂದು ಈ ಮೈತ್ರಿಯ ಮಾತು ಆರಂಭವಾದಂದಿನಿಂದ ಸಿಪಿಐ(ಎಂ) ಹಾಗೂ ಇತರ ಜಾತ್ಯಾತೀತ ಶಕ್ತಿಗಳು ಮಾಡಿದ ಪ್ರತಿಪಾದನೆಗೆ ಸಮರ್ಥನೆ ಒದಗಿಸಿದಂತಾಗಿದೆ.

ಇಂದಿಗೂ ಕೂಡ ಪೊಲೀಸ್ ಅಧಿಕಾರಿಗಳು ಹಾಗೂ ಸರ್ಕಾರ ಬಸ್ ಸುಟ್ಟ ಪ್ರಕರಣದ ಅಪರಾಧಿಗಳು ಯಾವ ಸಂಘಟನೆಗಳಿಗೆ ಸೇರಿದವರು ಎಂಬುದನ್ನು ಬಹಿರಂಗಪಡಿಸಿಲ್ಲ ಇದನ್ನು ಗಮನಿಸಿದರೆ ಕೋಮುವಾದಿಗಳ ಅಪಾಯ ಮತ್ತಷ್ಟು ಮನವರಿಕೆಯಾಗುತ್ತದೆ. ಇಂತಹ ಅನೇಕ ಕುತಂತ್ರಗಳು ಬಿಜೆಪಿಯಿಂದ ಜರುಗಿವೆ.ಆದ್ದರಿಂದ ರಾಜ್ಯ ಆಡಳಿತಯಂತ್ರವನ್ನು ಕೋಮುವಾದಿ ಶಕ್ತಿಗಳ ಹುನ್ನಾರಕ್ಕೆ, ಅನುಗುಣವಾಗಿ ಒಗ್ಗಿಸಿಕೊಳ್ಳಲು ಬಿಜೆಪಿ ಮಾಡಿದ ಎಲ್ಲಾ ಪ್ರಯತ್ನಗಳನ್ನು ಹಾಗೂ ಆಡಳಿತ ಯಂತ್ರದ ಕೋಮುವಾದೀಕರಣವ'ನ್ನು ಬಹಿರಂಗಗೊಳಿಸಬೇಕು. ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಇದೇ ಪ್ರಧಾನ ಅಜೆಂಡಾ ಆಗಬೇಕು. ಕರ್ನಾಟಕದ ಜನತೆಗೆ ಕೋಮುವಾದಿಗಳ ಅಪಾಯದ ಅರಿವಾಗಬೇಕು ಎಂದು ಸಿಪಿಐ(ಎಂ) ಪಕ್ಷವು ಒತ್ತಾಯಿಸಿದೆ.

# 'ಮನುಶಾಸ್ತ್ರ'ದಲ್ಲಿ ಮಹಿಳೆ - ಒಂದು ಚಿಂತನೆ

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಕೊಟ್ಟಿರುವ ಸ್ಥಾನಮಾನವನ್ನು ಜಗತ್ತಿನ ಬೇರೆ ಯಾವ ಸಂಸ್ಕೃತಿಯೂ ಕೊಟ್ಟಿಲ್ಲವೆಂದು 'ಭಾರತೀಯ ಸಂಸ್ಕೃತಿ' ಯ ಸ್ವಯಂ ಘೋಷಿತ ವಕ್ತಾರರು ಡಂಗೂರ ಸಾರುತ್ತಾರೆ. ಎಲ್ಲಿ ಮಹಿಳೆಗೆ ಗೌರವ ನೀಡಲಾಗುತ್ತದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆಂಬ ಅರ್ಥದ ಸಂಸ್ಕೃತ ಶ್ಲೋಕವನ್ನು ಈ ಉದ್ದಾಮ ಪಂಡಿತರು ಏನು ಉದುರಿಸಿಯೇ ಉದುರಿಸುತ್ತಾರೆ. ಆದರೆ ಇದೇ ಶ್ಲೋಕಗಳ ಹಿಂದೆ ಮುಂದೆ ಇರುವ ಶ್ಲೋಕಗಳನ್ನೇ ಇವರು ಮರೆತುಬಿಡುತ್ತಾರೆ. ಇದೊಂದು ಬಗೆಯ ಜಾಣ ಮರೆವು. ಇನ್ನೂ ವಿಷಾದದ ವಿಚಾರವೆಂದರೆ ಇವರು ಶ್ಲೋಕ, ಗ್ರಂಥಗಳಿಂದ ಯಾವುದೋ ಕೆಲವು ಬೇಕಾದ ಭಾಗವನ್ನು ಆಯ್ದುಕೊಂಡು ಉದುರಿಸುವುದನ್ನು ಮಾಡುತ್ತಾರೆಯೇ ಹೊರತು, ನಿಜ ಜೀವನದಲ್ಲಿ ಯಾವುದು ಜಾರಿಯಲ್ಲಿದೆ. ವಾಸ್ತವವಾಗಿ ಮಹಿಳೆಯ ಪರಿಸ್ಥಿತಿ ಏನಿದೆ ಎಂಬುದನ್ನು ಅಪ್ಪಿತಪ್ಪಿಯೂ ಹೇಳಲು ಬಯಸುವುದಿಲ್ಲ. ಯಾರಾದರೂ ಚರ್ಚೆಗೆ ಇಳಿದರೆ ಗಾರ್ಗಿ, ಮೈತ್ರೇಯಿಯಂತಹ ಕೆಲವು ಪ್ರಾಚೀನ ಕಾಲದ ಮಹಿಳೆಯರ ಹೆಸರು ಹೇಳಿ ಬಾಯಿ ಬಡಿಯಲು ನೋಡುತ್ತಾರೆ. ಎಲ್ಲ ವಿಚಾರಗಳಿಗೂ ಕೆಲವೊಮ್ಮೆ ಅಪವಾದಗಳಿರುತ್ತದೆ. ಗಾರ್ಗಿ, ಮೈತ್ರೇಯಿರಾದರೂ ಏನೇನು ನಿರ್ಬಂಧ, ದಬ್ಬಾಳಿಕೆಗಳನ್ನು ಎದುರಿಸಿ ತಾವು ಇತಿಹಾಸದಲ್ಲಿ ತಮ್ಮ ಹೆಸರು ದಾಖಲಾಗುವಂತಹ ಸಾಧನೆ ಮಾಡಿದರೋ? .

ಸನಾತನವಾದಿಗಳ ದೊಡ್ಡ ಸಮಸ್ಯೆ.ಏನೆಂದರೆ ಅವರು ತಮ್ಮ ವಿತಂಡವಾದಗಳು ಮೊಂಡುತನದಿಂದ ಇತರರನ್ನು ಮಾತ್ರ ವಂಚಿಸುವುದಿಲ್ಲ. ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಾರೆ. ಅದು ದುರಂತ. ಮನುಸ್ಮೃತಿಯಲ್ಲಿನ ಮಹಿಳೆಯರ ಕುರಿತಾದ ಕೆಲವು ಶ್ಲೋಕಗಳು ಇಲ್ಲಿವೆ. ನೀವೇ ತೀರ್ಮಾನಿಸಿ ಇದರಲ್ಲಿರುವ ಯಾವ ಮೌಲ್ಯಗಳು ನಮ್ಮಲ್ಲಿ ಜಾರಿಯಲ್ಲಿವೆ, ಯಾವುದು ಜಾರಿಯಲ್ಲಿಲ್ಲ ಎಂದು.

★

ಕಾಮ-ಕ್ರೋಧಗಳಿಗೆ ವಶನಾದ ಮನುಷ್ಯನನ್ನು ಅವನು ಪಂಡಿತನೇ ಇರಲಿ, ಪಾಮರನೇ ಇರಲಿ ದಾರಿ ತಪ್ಪಿಸಲು ಸ್ತ್ರೀಯರು ಸಮರ್ಥರಾಗಿರುತ್ತಾರೆ

★

ಪುರುಷರ ಮನಸ್ಸನ್ನು ಕೆಡಿಸುವುದೇ ನಾರಿಯರ ಸ್ವಭಾವವಾಗಿದೆ. ಆದ್ದರಿಂದ ತಿಳಿವಳಿಕೆಯುಳ್ಳ ಪ್ರಾಜ್ಞರು ಸ್ತ್ರೀಯರ ವಿಷಯದಲ್ಲಿ ಎಚ್ಚರತಪ್ಪಿ ನಡೆಯುವುದಿಲ್ಲ.

★

ಯಾವ ಸ್ತ್ರೀಗೆ ಸಹೋದರನಿಲ್ಲವೋ, ಯಾವ ಕನ್ಯೆಗೆ ತಂದೆ ಯಾರೆಂದು ತಿಳಿಯದೋ ಅವಳ ಹುಟ್ಟಿನ ಬಗ್ಗೆ ಸಂಶಯವುಂಟಾಗುವುದರಿಂದ ಇಂಥ ಹೆಣ್ಣನ್ನು ಮದುವೆಯಾಗಕೂಡದು.

★

ದ್ವಿಜಾತಿಯರಿಗೆ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಮೊದಲ ವಿವಾಹದಲ್ಲಿ ತಮ್ಮ ತಮ್ಮ ಜಾತಿಯ ಕನ್ಯೆಯೇ ಆಗಬೇಕು. ದೇಹಸುಖಕ್ಕಾಗಿ ನಂತರ ಮಾಡಿಕೊಳ್ಳುವ ವಿವಾಹದಲ್ಲಿ ಬೇಕಾದ ಜಾತಿಯವಳನ್ನು ಮದುವೆಯಾಗಬಹುದು.

★


ಎಂಥ ಅನಿವಾರ್ಯವಾದ ಸಂದರ್ಭದಲ್ಲೂ ಬ್ರಾಹ್ಮಣ ಹಾಗೂ ಕ್ಷತ್ರಿಯ ವರಗಳು (ಗಂಡುಗಳು) ಶೂದ್ರ ಸ್ತ್ರೀಯನ್ನು ಪ್ರಥಮ ಹೆಂಡತಿ ಎಂದು ವಿವಾಹ ಮಾಡಿಕೊಳ್ಳಬಾರದು. (ಇಂಥ ಉದಾಹರಣೆಯ ವೃತ್ತಾಂತವು ಎಲ್ಲಿಯೂ ಇಲ್ಲ)

★

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಗಳವರು ಮೋಹದ ಆವೇಶದಲ್ಲಿ ಹೀನ ಜಾತಿಯ (ಶೂದ್ರ) ಸ್ತ್ರೀಯನ್ನು ಪ್ರಥಮ ಹೆಂಡತಿ ಎಂದು ಮದುವೆಮಾಡಿಕೊಂಡರೆ ತಮ್ಮ ಕುಲ ಸಂತಾನಗಳೊಡನೆ ತಿರೋಹಿತರಾಗಿ ಶೂದ್ರತ್ವವನ್ನು ಹೊಂದುತ್ತಾರೆ,

★

ಎಲ್ಲಿ ಸ್ತ್ರೀಯರಿಗೆ ಗೌರವ ಸನ್ಮಾನಗಳು



ದೊರೆಯುತ್ತವೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ ಅಲ್ಲಿ ಮಾಡುವ ಎಲ್ಲ ಯಜ್ಞ-ಪೂಜೆಗಳು ನಿಷ್ಫಲವಾಗುತ್ತವೆ.

★

ಬಾಲ್ಯದಲ್ಲಿ ಸ್ತ್ರೀಯು ತಂದೆಯ ವಶದಲ್ಲಿ, ಯೌವನದಲ್ಲಿ ಗಂಡನ ಆಧೀನದಲ್ಲಿ, ಗಂಡಸತ್ತ ನಂತರ ಪುತ್ರರ ಅಧೀನದಲ್ಲಿ ಬಾಳಬೇಕಲ್ಲದೇ ತಾನೇ ಸ್ವತಂತ್ರವಾಗಿ ವ್ಯವಹರಿಸಬಾರದು

★

ತಂದೆ ಅಥವಾ ಅಣ್ಣ ತನ್ನನ್ನು ಯಾರಿಗೆ ಮದುವೆ ಮಾಡಿಕೊಡುವರೋ ಆ ಪತಿಯು ಬದುಕಿರುವಾಗ ಶ್ರದ್ಧೆಯಿಂದ ಅವನ ಸೇವೆ ಮಾಡಬೇಕು. ಅವನು ಸತ್ತನಂತರವೂ ಸಹ ಅವನಿಗೆ ದ್ರೋಹ ಮಾಡುವಂತೆ ವರ್ತಿಸಬಾರದು

★

ಈ ಸ್ತ್ರೀಯರಿಗೆ ಮಂಗಲವಾಗಲಿ ಎಂಬ, ಉದ್ದೇಶದಿಂದ ವಿವಾಹದಲ್ಲಿ ಸ್ವಸ್ತಿವಾನವೂ ಪ್ರಜಾಪತಿ ಹೋಮವೂ ವಿಧಿಸಲ್ಪಟ್ಟಿದೆ. ವಿವಾಹದಲ್ಲಿ ಕನ್ಯಾದಾನ ಮಾಡುವದೆಂದರೆ ಪತಿಗೆ ಅವಳ ಮೇಲೆ ಒಡೆತನವನ್ನು ಅಧಿಕಾರವನ್ನು ನೀಡುವುದಾಗಿದೆ.

★

ಪತಿಯ ನಡತೆಯು ಚೆನ್ನಾಗಿರದಿದ್ದರೂ, ಕಾಮಾತುರನಾಗಿ ಅವನು ಅನ್ಯಹೆಂಗಸರಲ್ಲಿ ಮನಸ್ಸಿಟ್ಟರೂ, ದುರ್ಗುಣಿಯಾಗಿದ್ದರೂ ಸಹ ಸಾಧ್ವಿಯಾದ ಹೆಂಡತಿಯು ತನ್ನ ಪತಿಯನ್ನು ದೇವರೆಂದೇ ಭಾವಿಸಿ ಸೇವೆ ಮಾಡಬೇಕು

ಇಲ್ಲಿ ಕೊಡಲಾಗಿರುವ ಶ್ಲೋಕಗಳಲ್ಲಿ ನಾಲ್ಕು ಮತ್ತು 'ಐದನೇ ಶ್ಲೋಕಗಳನ್ನು ಗಮನಿಸಿ. ದ್ವಿಜರು ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಯ ಪುರುಷರು ತಮ್ಮ ಮೊದಲ ಮದುವೆಗೆ ತಮ್ಮ ಜಾತಿಯ ಸ್ತ್ರೀಯರನ್ನೇ ಆರಿಸಿಕೊಳ್ಳಬೇಕು. ಯಾಕೆ? ನಂತರ 'ದೇಹ ಸುಖ'ಕ್ಕಾಗಿ ಆಗುವ ಮದುವೆಯಲ್ಲಿ ಬೇಕಾದರೆ ಶೂದ್ರ ಮಹಿಳೆಯನ್ನು ವಿವಾಹವಾಗಬಹುದಂತೆ. ಆಕಸ್ಮಾತ್ ಮೊದಲ ಹೆಂಡತಿಯಾಗಿ ಶೂದ್ರ ಸ್ತ್ರೀಯರ ಸ್ವೀಕರಿಸಿದರೆ ಆತನೂ ಶೂದ್ರತ್ವವನ್ನು ಹೊಂದುವನಂತೆ. ಇದು ಯಾಕೆ.

ಈ ಪ್ರಶ್ನೆಯ ಮೂಲ ಇರುವುದು ಆಸ್ತಿ ಸಂಬಂಧಗಳಲ್ಲಿ. ಮೊದಲ ಹೆಂಡತಿ ಎಂದರೆ ಅಧಿಕೃತ ಸಂಬಂಧ. ಈಕೆಯ ಮಕ್ಕಳಿಗೆ ಆಸ್ತಿಯ ಹಕ್ಕುಂಟು. ಈ ಸಂಬಂಧಕ್ಕೆ ಸ್ವಜಾತಿಯ ಮಹಿಳೆಯೇ ಬೇಕು. ಆಸ್ತಿಯನ್ನು ಕೊಡಬೇಕಾಗಿಲ್ಲದ, 'ದೇಹ ಸುಖ'ಕ್ಕಾಗಿ ಮಾಡಿಕೊಳ್ಳುವ ಮದುವೆಯಲ್ಲಿ ಬೇಕಾದರೆ ಕೆಳಜಾತಿಯ ಮಹಿಳೆಯನ್ನು ಮದುವೆಯಾಗಬಹುದು! ಏನು ಬುದ್ಧಿವಂತಿಕೆ. ಒಂದೊಮ್ಮೆ ಈ ನಿಯಮ ಉಲ್ಲಂಘಿಸಿದರೆ ಪುರುಷ ಶೂದ್ರನಾಗುತ್ತಾನೆ. ಅಂದರೆ ಏನರ್ಥ? ಶೂದ್ರನಿಗೆ ಆಸ್ತಿಯ ಹಕ್ಕಿಲ್ಲ. ಒಟ್ಟಿನಲ್ಲಿ ಆಸ್ತಿಯು 'ದ್ವಿಜ'ರಲ್ಲಿ ಅಂದರೆ ಮೇಲ್ಜಾತಿಯವರ ಕೈಯಲ್ಲೇ ಇರಬೇಕು. ಜಾತಿ ವ್ಯವಸ್ಥೆಯ ಮೂಲ ಏನು? ಸಂಸ್ಕೃತಿ, ಸ್ತ್ರೀ ಸ್ಥಾನಮಾನಗಳ ಅರ್ಥ ಏನು? 'ಅರ್ಥ'ವೇ ಅದರ ಅರ್ಥ. ಎಷ್ಟೋ ಜನ ಅರ್ಥಶಾಸ್ತ್ರಪಂಡಿತರಿಗೂ, 'ಸಂಸ್ಕೃತಿ'ಯ ಗುತ್ತಿಗೆದಾರರಿಗೂ ಇದು ಯಾಕೋ ಅರ್ಥವೇ ಆಗುವುದಿಲ್ಲ.

ಸಂಗ್ರಹ : **ಕೆ.ಎಸ್. ವಿಮಲಾ**

# 'ಸ್ವಲ್ಪನಾದ್ರೂ ಸೀರಿಯಸ್‌ನೆಸ್ಸೇ ಇಲ್ವಲ್ಲ ನಿನಗೆ'

ನಿನ್ನೆ ಗಾಂಧಿ ಬಂದಿದ್ರು. ಯಾವ ಗಾಂಧಿ ಅಂದ್ರಾ? ಅದೇ ಕಣ್ರೀ ಮುನ್ನಾಭಾಯಿ ಸಿನಿಮಾದಲ್ಲಿ ಬರ್ತಾರಲ್ಲ ನೋಟ್‌ವಾಲ ಅವ್ರೇ.

ಹ್ಯಾಪಿ ಬರ್ತ್‌ಡೆ ಟೂ ಯೂ, ಹ್ಯಾಪಿ ಬರ್ತ್‌ಡೆ ಟೂ ಯು, ಹ್ಯಾಪಿ ಬರ್ತ್‌ಡೇ ಟು ಅವರ್ ಗಾಂಧೀಜಿ. ಹ್ಯಾಪಿ ಬರ್ತ್‌ಡೇ ಟೂ ಯು ಎಂದು ಹಾಡಿದೆ.

'ಥ್ಯಾಂಕ್ಯೂ, ಥ್ಯಾಂಕ್ಯೂ, ಎನಪ್ಪ ನನ್ನನ್ನು ಕಂಡ್ರೆ ಅಷ್ಟು ಪ್ರೀತಿನಾ' ಎಂದು ಕೇಳಿದರು ಗಾಂಧೀಜಿ.

'ಹೌದು ನಿಮ್ಮ ಬರ್ತ್‌ಡೇಗೆ ರಜ ಸಿಗುತ್ತಲ್ಲ ಅದಕ್ಕೆ ಖುಷಿ' ಎಂದೆ.

'ಥತ್ ನಿನ್ನಂಥ ಸೋಮಾರಿಗಳಿಂದಲೇ ಈ ದೇಶ ಹೀಗಾಗಿರೋದು' ಎಂದು ಗದರಿದರು ಗಾಂಧೀಜಿ.

'ಆದ್ರೂ ಗಾಂಧೀಜಿ ನಿಮ್ಮನ್ನು ಫಾಲೋ ಮಾಡೋರು ಈಗ್ಲೂ ಇದಾರಲ್ಲ ನೀವು ನಿಜವಾಗ್ಲೂ ಗ್ರೇಟ್ ಕಣ್ರೀ'

ಗಾಂಧೀಜಿಗೆ ಬಹಳ ಆಶ್ಚರ್ಯವಾಯಿತು 'ಹ್ಞಾ ಇನ್ನೂ ಇದಾರ? ಯಾರು? ಎಲ್ಲಿ' ಅಂತ ಗಾಬರಿಯಿಂದ ಕೇಳಿದರು.

'ಸಿನಿಮಾ ನಟೀಮಣಿಯರು ಕಣ್ರೀ, ನೀವು ಸೊಂಟದಿಂದ ಮೊಣಕಾಲವರೆಗೆ ಮಾತ್ರ ಬಟ್ಟೆ ಧರಿಸುತ್ತೀರಲ್ಲ? ಅವರು ಇನ್ನೂ ಕನಿಷ್ಠ ಬಟ್ಟೆ ಧರಿಸುತ್ತಾರೆ. ಸೊಂಟದಿಂದ ಬಹಳ ಕೆಳಗೆ ಮೊಣಕಾಲಿನ ಬಹಳ ಮೇಲ್ ಮಟ್ಟದವರೆಗೆ ಬಟ್ಟೆ ಧರಿಸುತ್ತಾರೆ' ಎಂದೆ. ಗಾಂಧೀಜಿ ಕೋಲು ತಗೊಂಡು ಹೊಡೆಯೋಕೆ ಅಟ್ಟಿಸಿಕೊಂಡು ಬಂದರು.

'ಯಾಕ್ರಿ ಯಾಕ್ರೀ ನಂಗೆ ಹೊಡೆಯೋಕೆ ಬರ್ತೀದೀರ ಅಹಿಂಸಾವಾದಿಯಾದ ನೀವು ಹೀಗೆ ಮಾಡ್ಬೋದ' ಎಂದೆ.

'ನಾನು ಅಂದ್ರೆ ನಿಮ್ಗೆಲ್ಲ ಭಾಳ ಸದರ ಆಗೋಗಿದೆ. ಸ್ಕೂಲು ಕಾಲೇಜಿನಲ್ಲಿ ಒಳ್ಳೆ ಹುಡುಗರನ್ನು ಗಾಂಧಿ ಅಂತ ಆಡ್ಕೋತಿರ. ಸಿನಿಮಾ ಟಾಕೀಸ್‌ನಲ್ಲಿ ಕಡಿಮೆ ದರ್ಜೆ ಸೀಟಿಗೆ ಗಾಂಧಿ ಸೀಟ್ ಅಂತೀರ. ನನ್ನ ಹೆಸರು ಹೇಳ್ಕೊಂಡು ಮಾಡಬಾರದ ಕೆಲಸ ಮಾಡೋ ರಾಜಕಾರಣಿಗಳ ಜತೆಗೆ ನನ್ನನ್ನು ಗೇಲಿಮಾಡೋ ನೀವು ಬೇರೆ' ಎಂದರು ಗಾಂಧಿ ಕೋಪದಿಂದ.

'ಏ ಕೋಪ ಮಾಡ್ಕೊಬೇಡ್ರೀ ನಿಮ್ಮನ್ನು ಕಂಡ್ರೆ ಅಷ್ಟು ಪ್ರೀತಿ. ಅಷ್ಟು ಸಲಿಗೆ. ತಾತನನ್ನು ಕಂಡ್ರೆ ಮೊಮ್ಮಕ್ಕಳಿಗೆ ಇರುತ್ತಲ್ಲ ಪ್ರೀತಿ ಹಾಗೆ. ಅದಕ್ಕೆ ಕೋಪ ಮಾಡ್ಕೋಬೇಡಿ. ಪ್ಲೀಸ್' ಎಂದೆ.

'ಆಯ್ತು ಬಿಡಪ್ಪ, ಈ ವರ್ಷ ನನ್ನ ಹುಟ್ಟಿದ ಹಬ್ಬಕ್ಕೆ ವಿಶೇಷ ಏನು?' ಎಂದರು ಗಾಂಧೀಜಿ.

'ಏ ಪ್ರತಿವರ್ಷ ಏನು ವಿಶೇಷ ಇರುತ್ರೀ? 59 ವರ್ಷ, 100 ವರ್ಷ, 125 ವರ್ಷ, 150 ವರ್ಷ ಹೀಗೆನಾದ್ರೂ ಆದಾಗ ಸ್ಪೆಷಲ್ ಬಜೆಟ್ ಸ್ಯಾಂಕ್ಷನ್ ಆಗುತ್ತೆ. ಅವಾಗ ಎಲ್ರಿಗೂ 'ವಿಶೇಷ' ಇರುತ್ತೆ. ಇಲ್ದಿದ್ರೆ ಬರೀ ಚಾಕಲೇಟನಲ್ಲಿ ಮುಗಿದು ಹೋಗುತ್ತೆ. ಊರು ತುಂಬ ಕಟೌಟು ಬ್ಯಾನರು ಹಾಕಿ ಹುಟ್ಟಿದ ಹಬ್ಬ ಆಚರಿಸೋಕೆ ನೀವೇನು ಪುಢಾರಿ ಏನ್ರಿ'? ಎಂದೆ.

'ಸ್ವಲ್ಪನಾದ್ರೂ ಸೀರಿಯಸ್‌ನೆಸ್ಸೇ ಇಲ್ವಲ್ಲ ನಿಂಗೆ. ಬರೀ ತಲೆ ಹರಟೆ' ಅಂತ ಬಯ್ದರು ಗಾಂಧೀಜಿ.

'ಏ ಯಾಕ್ರೀ ಹಿಂಗೆ ಕೋಪ ಮಾಡ್ಕೋತೀರ? ನಮ್ಮ ರಾಜಕಾರಣಿಗಳೇ ವಾಸಿ. ಅಧಿಕಾರಕ್ಕೋಸ್ಕರ ಎಂತೆಂಥ ಅವಮಾನಗಳನ್ನ ಬಾಯಿ ಮುಚ್ಚಿಕೊಂಡು ಸಹಿಸ್ಕೋತಾರೆ. ಬೇರೆಯವರು ಹೇಳುವ ಮುಂಚೆ ತಾವೇ ತಮ್ಮ ಮಂಗಾಟಗಳನ್ನೆಲ್ಲ 'ತೆರಿಗೆ ರಹಿತ ಮನರಂಜನೆ', 'ಪುಕ್ಕಟೆ ಮನರಂಜನೆ' ಅಂತ ಹೇಳ್ಕೋತಾರೆ. ಯಾರು ಏನೋ ಛೀ, ಥೂ ಅಂದ್ರೂ ಅಷ್ಟು ಹಲ್ಲು ಬಿಟ್ಟು ನಗ್ತಿರ್ತಾರೆ. ಅಂಥದ್ರಲ್ಲಿ ನೀವ್ಯಾಕ್ರೀ ಸ್ವಲ್ಪ ತಮಾಷೆ ಮಾಡಿದ್ರೆ ಕೋಪ ಮಾಡ್ಕೋತೀರಾ?' ಎಂದೆ.

'ಸಾಕು ಸಾಕು ನಿನ್ನ ಭಾಷಣ ನಾನಿನ್ನು ಬರ್ತೀನಿ' ಎಂದು ಹೊರಟರು ಗಾಂಧೀಜಿ.

'ಏಳ್ರೀ, ಸಂಪಾದಕರು ಫೋನ್ ಮಾಡಿದ್ದಾರೆ ನಿಮ್ಮ ಸೋಮಾರಿ ಗಂಡ ಇನ್ನೂ ಎದ್ದಿಲ್ವ? ಅಂತ ಕೇಳ್ತಿದ್ದಾರೆ' ಎಂದು ಸುಪ್ರಭಾತ ಹೇಳಿದಳು ಮಡದಿ.

ಎಚ್ಚರಗೊಂಡು ಅದೇ ಕನಸನ್ನು ಯಥಾವತ್ತಾಗಿ ಬರೆದು ಸಂಪಾದಕರಿಗೆ ಕಳಿಸಿದೆ.

**ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಕಳೆದುಕೊಂಡವರು ಯಾರು, ಗಳಿಸಿಕೊಂಡವರು ಯಾರು? ಈ ಚುನಾವಣಾ ಫಲಿತಾಂಶದ ಅರ್ಥವೇನು?**

# ಪೌರಸಂಸ್ಥೆ ಚುನಾವಣೆಗಳು

# ಹೊಸ ನಿರೀಕ್ಷೆಗಳು

ನಿತ್ಯಾನಂದಸ್ವಾಮಿ

ರಾಜ್ಯದಲ್ಲಿ ಅಧಿಕಾರ ಹಸ್ತಾಂತರದ ಅನಿಶ್ಚಿತತೆಯ ನಡುವೆ ರಾಜ್ಯದ 209 ಪೌರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಿಂದ ಸಾಕಷ್ಟು ಆಶ್ಚರ್ಯಕರ ಫಲಿತಾಂಶವು ಹೊರಬಿದ್ದಿದೆ. ಮಾತ್ರವಲ್ಲ ಪೌರ ಮತದಾರರ ಹೊಸ ನಿರೀಕ್ಷೆಗಳನ್ನು ಬಯಲು ಮಾಡಿದೆ. ಜೆಡಿ(ಎಸ್) ಪಕ್ಷದ ಅದ್ಭುತ ಸಾಧನೆ ಈ ಚುನಾವಣಾ ಫಲಿತಾಂಶದ ಗಮನಾರ್ಹ ಅಂಶವಾಗಿದೆ. 2001ರಲ್ಲಿ ಚುನಾವಣೆ ನಡೆದ ಒಟ್ಟು 218 ಪೌರ ಸಂಸ್ಥೆಗಳ ಒಟ್ಟು 4967 ಸ್ಥಾನಗಳ ಪೈಕಿ ಕೇವಲ 415 ಸ್ಥಾನಗಳನ್ನು ಪಡೆದಿದ್ದ ಜೆಡಿ(ಎಸ್) ಈ ಸಲ ಒಟ್ಟು 5007 ಸ್ಥಾನಗಳ ಪೈಕಿ 1502 ಸ್ಥಾನಗಳನ್ನು ಗೆದ್ದುಕೊಂಡಿದೆ. ಇದುವರೆಗೆ ಕೇವಲ ಗ್ರಾಮೀಣ ಪ್ರದೇಶದಲ್ಲಿ ಪ್ರಭಾವವನ್ನು ಹೊಂದಿರುವ ಪಕ್ಷ ಎಂದು ಪರಿಗಣಿಸಲ್ಪಡುತ್ತಿದ್ದ ಜೆಡಿ(ಎಸ್) ಈಗ 12 ನಗರಸಭೆಗಳಲ್ಲಿ, 28 ಪುರಸಭೆಗಳಲ್ಲಿ ಮತ್ತು 16 ಪಟ್ಟಣ ಪಂಚಾಯ್ತಿಗಳಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವ ಮೂಲಕ ಪ್ರಥಮ ಸ್ಥಾನವನ್ನು ಪಡೆದಿದೆ. ಅತಂತ್ರ ಸ್ಥಿತಿಯಲ್ಲಿರುವ ಇನ್ನೂ ಕೆಲವು ಪೌರ ಸಂಸ್ಥೆಗಳಲ್ಲಿ ಇತರರ ಬೆಂಬಲದೊಂದಿಗೆ ಜೆಡಿ(ಎಸ್) ಅಧಿಕಾರವಹಿಸಿಕೊಳ್ಳುವ ಸಾಧ್ಯತೆ ಇದೆ. ಇದುವರೆಗೆ ದಕ್ಷಿಣ ಕರ್ನಾಟಕದ ಹಾಸನ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಸೀಮಿತವಾಗಿದ್ದ ಜೆಡಿ(ಎಸ್) ಪ್ರಭಾವವನ್ನು ಈ ಜಿಲ್ಲೆಗಳಲ್ಲಿ ಗಟ್ಟಿಗೊಳಿಸಿಕೊಂಡಿದೆ ಮಾತ್ರವಲ್ಲ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೂ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿದೆ.


**ಬಿಜೆಪಿ - ಹೆಚ್ಚಿದ ಸ್ಥಾನ, ಆದರೆ.......**

ಬಿಜೆಪಿಯ ಸಾಧನೆಯೂ ಗಮನಾರ್ಹವಾಗಿದೆ. ಒಟ್ಟು 5007 ಸ್ಥಾನಗಳ ಪೈಕಿ ಕೇವಲ 1180 ಸ್ಥಾನಗಳನ್ನು ಗೆದ್ದು ಬಿಜೆಪಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದರೂ ಅದು 2001ರ ಚುನಾವಣೆಯಲ್ಲಿ ಗೆದ್ದ ಸ್ಥಾನ (562)ಗಳನ್ನು ದ್ವಿಗುಣಗೊಳಿಸಿಕೊಂಡಿದೆ. ಒಟ್ಟು 9 ನಗರಸಭೆ, 15 ಪುರಸಭೆ ಹಾಗೂ 11 ಪಟ್ಟಣ ಪಂಚಾಯ್ತಿಗಳಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಒಟ್ಟು 7 ಮಹಾನಗರ ಪಾಲಿಕೆಗಳ ಪೈಕಿ ಬಳ್ಳಾರಿ, ಮಂಗಳೂರು ಮತ್ತು ದಾವಣಗೆರೆ ನಗರ ಪಾಲಿಕೆಗಳಲ್ಲಿ ಅದು ಜಯಭೇರಿ ಬಾರಿಸಿದ್ದು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಯಲ್ಲಿ ಅದು ಅಧಿಕಾರವಹಿಸಿಕೊಳ್ಳುವುದು ಬಹುತೇಕ ಖಚಿತವಾಗಿದೆ. 3 ನಗರ ಪಾಲಿಕೆಗಳಲ್ಲದೆ 9 ನಗರಸಭೆ 15 ಪುರಸಭೆ ಮತ್ತು 11 ಪಟ್ಟಣ ಪಂಚಾಯ್ತಿಗಳಲ್ಲಿ ಅದು ಬಹುಮತವನ್ನು ಪಡೆಯುವ ಮೂಲಕ 2ನೇ ಸ್ಥಾನದಲ್ಲಿದೆ.

ಈ ಚುನಾವಣೆಯಲ್ಲಿ ತೀವ್ರ ಹಿನ್ನಡೆ ಅನುಭವಿಸಿದ್ದು ಕಾಂಗ್ರೆಸ್ ಪಕ್ಷ. ಒಟ್ಟು 5007 ಸ್ಥಾನಗಳಲ್ಲಿ ಅದು 1606 ಸ್ಥಾನಗಳನ್ನು ಗೆಲ್ಲುವ ಮೂಲಕ ಒಂದನೇ ಸ್ಥಾನ ಪಡೆದಿದ್ದರೂ 2001ರ ಚುನಾವಣೆಯಲ್ಲಿ ಅದರ ಸಾಧನೆಯನ್ನು ಗಮನಿಸಿದರೆ, ಈ ಸಲ ಕಾಂಗ್ರೆಸ್ 716 ಸ್ಥಾನಗಳನ್ನು ಕಳೆದುಕೊಂಡು ಗಣನೀಯ ಹಿನ್ನಡೆ ಕಂಡಿದೆ. ಅದು ಅಧಿಕಾರದಲ್ಲಿದ್ದ ಮಂಗಳೂರು, ಗುಲ್ಬರ್ಗಾ, ದಾವಣಗೆರೆ ಮತ್ತು ಹುಬ್ಬಳ್ಳಿ ಧಾರವಾಡ, ಮಹಾನಗರಪಾಲಿಕೆಗಳಲ್ಲಿ ಈ ಸಲ ಅಧಿಕಾರ ಕಳೆದುಕೊಂಡಿದೆ. ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಅಂತಹ ಕಾಂಗ್ರೆಸ್ ಪಕ್ಷದ ಘಟಾನುಘಟಿಗಳು ಪ್ರತಿನಿಧಿಸುವ ಕ್ಷೇತ್ರಗಳಲ್ಲಿಯೇ ಕಾಂಗ್ರೆಸ್ ಪಕ್ಷಕ್ಕೆ ತೀವ್ರ ಮುಖಭಂಗವಾಗಿದೆ. ಮೈಸೂರು ಮಹಾನಗರಪಾಲಿಕೆಯಲ್ಲಿ ಕಳೆದ ಸಲ 34 ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆಸ್ ಈ ಸಲ ಸಿದ್ದರಾಮಯ್ಯ ಅವರ ಸೇರ್ಪಡೆಯಿಂದ ಇನ್ನೂ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇತ್ತು. ಆದರೆ ಈ ಸಲ ಕೇವಲ 22 ಸ್ಥಾನಗಳನ್ನು ಗೆಲ್ಲುವ ಮೂಲಕ ಪಕ್ಷದ ಟಿಕೆಟ್ ಹಂಚಿಕೆಯಲ್ಲಿ ಮೇಲುಗೈ ಹೊಂದಿದ್ದ ಸಿದ್ದರಾಮಯ್ಯ ತೀವ್ರ ಮುಖಭಂಗ ಅನುಭವಿಸಿದಂತಾಗಿದೆ.

ಇನ್ನುಳಿದಂತೆ ಸಮಾಜವಾದಿ ಪಕ್ಷ 26, ಬಿಎಸ್‌ಪಿ 20, ಸಿಪಿಐ(ಎಂ)16, ಜೆಡಿ(ಯು)14, ಜನತಾಪಕ್ಷ 5, ವಾಟಾಳ್‌ಪಕ್ಷ 5, ಸಿಪಿಐ 2, ರೈತ ಸಂಘ 2 ಸ್ಥಾನಗಳನ್ನು ಪಡೆದಿದ್ದು ಸುಮಾರು 627 ಜನ ಪಕ್ಷೇತರರು ಆಯ್ಕೆಯಾಗಿದ್ದಾರೆ.

**ಜನರಿಂದ ದೂರವಾಗುತ್ತಿರುವ ಕಾಂಗ್ರೆಸ್**




2007ರ ಪೌರ ಸಂಸ್ಥೆಗಳ ಚುನಾವಣಾ ಫಲಿತಾಂಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆಗಿರುವ ಹಿನ್ನಡೆಯೇ ಅತ್ಯಂತ ಗಮನಾರ್ಹ ಬೆಳವಣಿಗೆಯಾಗಿದೆ. 2001ರ ಚುನಾವಣೆಯಲ್ಲಿ ಎಸ್.ಎಂ.ಕೃಷ್ಣ ಸರ್ಕಾರದ ದರ್ಬಾರಿನಲ್ಲಿ, ಅದು ರಾಜ್ಯದ ಬಹುತೇಕ ಪೌರ ಸಂಸ್ಥೆಗಳನ್ನು ವಶಪಡಿಸಿಕೊಂಡಿತ್ತು. ಆದರೆ ರಾಜ್ಯಕ್ಕೆ ವಿದೇಶಿ ಬಂಡವಾಳವನ್ನು ಆಕರ್ಷಿಸುವ ತರಾತುರಿಯಲ್ಲಿ ಎಸ್.ಎಂ.ಕೃಷ್ಣ ಸರ್ಕಾರವು ವಿಶ್ವಬ್ಯಾಂಕ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮೊದಲಾದ ವಿಶ್ವ ಹಣಕಾಸು ಸಂಸ್ಥೆಗಳ ಲಾಭಕೋರ ಷರತ್ತುಗಳ ಸಾಲಕ್ಕೆ ಮೊರೆ ಹೋಯಿತು. ಸಾಲದ ಷರತ್ತುಗಳನ್ನು ಪೂರೈಸಲು ವಿದ್ಯುತ್ ರಂಗದ ಖಾಸಗೀಕರಣದತ್ತ ಹೆಜ್ಜೆ ಇಡಲಾಯಿತು. ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ಮೊದಲಾದ ಸೇವೆಗಳನ್ನು ದುಬಾರಿಗೊಳಿಸಲಾಯಿತು. ಸ್ವಯಂ ಘೋಷಿತ ತೆರಿಗೆಯ ಹೊರೆಯನ್ನು ಹೇರಲಾಯಿತು. ಅತ್ತ ಅಭಿವೃದ್ಧಿ ಹೆಸರಿನಲ್ಲಿ ಪೌರ ಸಂಸ್ಥೆಗಳಿಗೆ ಒದಗಿಸಲಾದ ಸಾಲದ ಹಣವನ್ನು ಬಹುತೇಕವಾಗಿ ದುರುಪಯೋಗಪಡಿಸಲಾಯಿತು. ಇವೆಲ್ಲದರ ಪರಿಣಾಮವಾಗಿ ರಾಜ್ಯದ ಜನತೆ ಕಾಂಗ್ರೆಸ್ ಪಕ್ಷದ ಬಗ್ಗೆ ಭ್ರಮನಿರಸನಗೊಂಡು 2004ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸುವಂತಾಯಿತು.

ಸಾರ್ವತ್ರಿಕ ಚುನಾವಣೆಯಲ್ಲಿ ಉಂಟಾದ ಸೋಲಿಗೆ ಕಾರಣಗಳನ್ನು ಹುಡುಕುವುದಕ್ಕಾಗಲಿ, ಅದರಿಂದ ಪಾಠ ಕಲಿಯುವುದಕ್ಕಾಗಲಿ ಕಾಂಗ್ರೆಸ್ ಪಕ್ಷ ಗಮನ ನೀಡಲೇ ಇಲ್ಲ. ಜೆಡಿ(ಎಸ್) ಬೆಂಬಲದೊಂದಿಗೆ ಅಧಿಕಾರ ನಡೆಸುವ ಅವಕಾಶ ದೊರೆತಾಗಲೂ ಅದು ಜನರ ಪ್ರಶ್ನೆಗಳಿಗೆ ಆದ್ಯತೆ ನೀಡುವ ಬದಲು ಅಧಿಕಾರದಲ್ಲಿ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳುವ ಕುತಂತ್ರದಲ್ಲಿಯೇ ಮುಳುಗಿ ಹೋಗಿ ಸಿಕ್ಕ ಅವಕಾಶವನ್ನು ಕಳೆದುಕೊಂಡಿತು. ಅನಂತರ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಲೂ ಅದರ ಜವಾಬ್ದಾರಿಯನ್ನು ನಿರ್ವಹಿಸದೆ ಜನರಿಂದ ಬಹುದೂರ ಹೋಗುವಂತಾಯಿತು. ಪೌರ ಸಂಸ್ಥೆಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸದಿರುವ ಆರೋಪಕ್ಕೆ ಗುರಿಯಾದ ಕಾಂಗ್ರೆಸ್ ಸ್ಥಳೀಯ ಸಂಸ್ಥೆಗಳು ತನಗೆ ಕಟ್ಟಿಟ್ಟ ಬುತ್ತಿ ಎಂದೇ ಭಾವಿಸಿದಂತೆ ಕಾಣುತ್ತದೆ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆಯಿಂದ ಪೌರ ಸಂಸ್ಥೆಗಳು ತನ್ನ ತೆಕ್ಕೆಗೇ ಬರಬಹುದೆಂಬ ಅದರ ಅತಿಯಾದ ವಿಶ್ವಾಸವೇ ಅದಕ್ಕೆ ಮುಳುವಾಯಿತು.

**ಬಿಜೆಪಿಗೆ ದಕ್ಕಿದ ಲಾಭ**

ತಾನು ಪ್ರಬಲವಾಗಿದ್ದ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗು, ಮೊದಲಾದ ಜಿಲ್ಲೆಗಳಲ್ಲಿ ಜಯ ಸಾಧಿಸುವ ಮೂಲಕ ಬಿಜೆಪಿ ತನ್ನ ನೆಲೆಯನ್ನು ಭದ್ರಗೊಳಿಸಿದೆ. ಕಾಂಗ್ರೆಸ್ ವಿಫಲತೆಯಿಂದ ಬಿಜೆಪಿಗೆ ಲಾಭವಾಗಿದೆ. ಕಾಂಗ್ರೆಸ್ ಕಳೆದುಕೊಂಡ ಸ್ಥಾನಗಳಲ್ಲಿ ಒಂದು ಭಾಗವನ್ನು ಅದು ತನ್ನ ಬುಟ್ಟಿಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ದಾವಣಗೆರೆ, ಹುಬ್ಬಳ್ಳಿ ಧಾರವಾಡ ಮತ್ತು ಮಂಗಳೂರು ಮಹಾನಗರ ಪಾಲಿಕೆಗಳನ್ನು ಕಾಂಗ್ರೆಸ್ ಕೈಯಿಂದ ಕಿತ್ತುಕೊಳ್ಳಲು ಅದಕ್ಕೆ ಸಾಧ್ಯವಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ 2001ರ ಚುನಾವಣೆಯಲ್ಲಿ ಒಟ್ಟು 127 ಸ್ಥಾನಗಳ ಪೈಕಿ ಕೇವಲ 5 ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಈ ಸಲ ಒಟ್ಟು 149 ಸ್ಥಾನ ಪೈಕಿ 38 ಸ್ಥಾನಗಳಲ್ಲಿ ಗೆದ್ದಿದೆ. ಬಾಗಲಕೋಟೆ ಜಿಲ್ಲೆಯಲ್ಲಿ 2001ರಲ್ಲಿ ಒಟ್ಟು 270 ಸ್ಥಾನಗಳಲ್ಲಿ ಕೇವಲ 9 ಸ್ಥಾನಗಳನ್ನು ಪಡೆದಿದ್ದ ಅದು ಈ ಸಲ ಒಟ್ಟು 290 ಸ್ಥಾನಗಳಲ್ಲಿ 186 ಸ್ಥಾನಗಳನ್ನು ಪಡೆದಿದೆ.ಇವೆಲ್ಲವೂ ಬಹುತೇಕವಾಗಿ ಕಾಂಗ್ರೆಸ್‌ನಿಂದ ಕಿತ್ತುಕೊಂಡ ಸ್ಥಾನಗಳೇ ಆಗಿವೆ. ಕಾಂಗ್ರೆಸ್ ಆಡಳಿತವಿದ್ದ ಬಹುತೇಕ ಪೌರ ಸಂಸ್ಥೆಗಳಲ್ಲಿನ ದುರಾಡಳಿತಕ್ಕೆ ಬೇಸತ್ತ ಜನ ಬೇರೆ ಪರ್ಯಾಯವಿಲ್ಲದೆ ಬಿಜೆಪಿಗೆ ಮತ ನೀಡಿದ್ದಾರೆ. ಕಾಂಗ್ರೆಸ್ಸಿಗೆ ಬಿಜೆಪಿ ಪರ್ಯಾಯ ಆಗಲಾರದು ಎಂಬುದು ಜನತೆಗೆ ಇನ್ನೂ ಅರ್ಥವಾಗಬೇಕಷ್ಟೆ.

ಬಿಜೆಪಿಗೆ ರಾಜ್ಯದ ಅಧಿಕಾರದ ಗದ್ದುಗೆ ಏರಲು ರಾಜ್ಯದ ಜನ ಇದುವರೆಗೂ ಅವಕಾಶ ನೀಡಿರಲಿಲ್ಲ. ಬಿಜೆಪಿಗೆ ಆ ಅವಕಾಶ ದಕ್ಕಿದ್ದೇ ಜೆಡಿ(ಎಸ್)ನಿಂದ ಅಧಿಕಾರದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡುವ ಮೂಲಕ ಬಿಜೆಪಿಗೆ ಒಂದು ಮಟ್ಟದ ಮಾನ್ಯತೆಯನ್ನು ದೊರಕಿಸಿ ಕೊಟ್ಟಂತಾಯಿತು ಮಾತ್ರವಲ್ಲ ಈ ಅವಕಾಶವನ್ನು ಬಳಸಿಕೊಂಡು ಅದರ ನೆಲೆಯನ್ನು ವಿಸ್ತರಿಸಲು ಹಾಗೂ ಗಟ್ಟಿಗೊಳಿಸಲು ಸಾಧ್ಯವಾಗುವಂತಾಯಿತು. ಮಂತ್ರಿಮಂಡಲದಲ್ಲಿ ಕೆಲವು ಪ್ರಮುಖ ಸ್ಥಾನಗಳನ್ನು ಗಿಟ್ಟಿಸಿಕೊಳ್ಳುವ ಮೂಲಕ ಬಿಜೆಪಿಗೆ ಆಡಳಿತ ಯಂತ್ರದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತಲ್ಲದೆ ಪೊಲೀಸ್ ಇಲಾಖೆಯ ಮೇಲೆಯೂ ತನ್ನ ಪ್ರಭಾವವನ್ನು ವಿಸ್ತರಿಸಲು ಅನುಕೂಲವಾಯಿತು. ಇವೆಲ್ಲದರ ಲಾಭ ಪೌರ ಸಂಸ್ಥೆಗಳ ಚುನಾವನೆಯಲ್ಲಿ ಬಿಜೆಪಿಗೆ ಹರಿದುಬರುವಂತಾಯಿತು. ಕರಾವಳಿ ಜಿಲ್ಲೆಗಳಲ್ಲಿ ಅದು ಹರಡಿದ ಕೋಮುದ್ವೇಷ ಅದರ ಓಟ್ ಬ್ಯಾಂಕ್‌ನ್ನು ಹಿಗ್ಗಿಸಿದೆ. ಎಲ್ಲಕ್ಕೂ ಹೆಚ್ಚಾಗಿ ಅದರ ಸಂಪನ್ಮೂಲಗಳ ಹರಿವು ವಿಸ್ತಾರವಾಯಿತು. ಪ್ರತಿದಿನ ನೂರಾರು ಕೋಟಿ ರೂ. ಅಕ್ರಮ ಆದಾಯವಿರುವ ಬಳ್ಳಾರಿಯ ಗಣಿ ದೊರೆಗಳ ಬೆಂಬಲವೇ ಕರ್ನಾಟಕದ ಬಿಜೆಪಿಯ ತಾಯಿ ಬೇರು ಎಂದರೆ ತಪ್ಪಾಗದು. ಬಿಜೆಪಿಯ ಪ್ರತಿಯೊಬ್ಬ ಶಾಸಕನೂ ನೂರಾರು ಕೋಟಿಗಳ ಅಧಿಪತಿ! ಮಂತ್ರಿಗಳಾಗಿದ್ದವರು ಅವರ ಅಪ್ಪಂದಿರು! ಈ ಹಣದ ಒಂದು ಭಾಗವೇ ಹೊಳೆಯಾಗಿ ಹರಿದಿತ್ತು ಈ ಸಲದ ಪೌರ ಚುನಾವಣೆಗಳಲ್ಲಿ. ಹಣ, ಹೆಂಡ ಹಂಚುವುದರಲ್ಲಿ ಕಾಂಗ್ರೆಸ್, ಜೆಡಿ(ಎಸ್) ಅಂತಹ ಪಕ್ಷಗಳನ್ನು ಹಿಂದೆ ಹಾಕಲು ಸಾಧ್ಯವಾದದ್ದು ಬಿಜೆಪಿಗೆ. ದಿನಗೂಲಿ ಆಧಾರದಲ್ಲಿ ನಿರುದ್ಯೋಗಿಗಳನ್ನು, ಕೂಲಿಕಾರರನ್ನು ನೇಮಿಸಿ ಚುನಾವಣಾ ಪ್ರಚಾರ ನಡೆಸಲಾಗುತ್ತಿತ್ತು ಮತ್ತು ಆ ಕೂಲಿ ಆಳುಗಳ ಕುಟುಂಬದ ಸದಸ್ಯರ ಓಟುಗಳನ್ನು ಕೊಂಡುಕೊಳ್ಳಲಾಗುತ್ತಿತ್ತು. ಚುನಾವಣೆಗಳಲ್ಲಿ ಮಹಿಳಾ ಮತದಾರರಿಗೆ ಸೀರೆಗಳನ್ನು ಹಂಚುವುದು ಬಿಜೆಪಿಯ ಅಧಿಕೃತ ಕಾರ್ಯಕ್ರಮವೇ ಆಗಿ ಬಿಟ್ಟಿದೆ. ಸತ್ತವರ ಹಾಗೂ ಊರಲ್ಲಿ ಇಲ್ಲದವರ ಪರವಾಗಿ ಖೊಟ್ಟಿ ಓಟುಗಳನ್ನು ಚಲಾಯಿಸುವುದು ಸರ್ವೇಸಾಮಾನ್ಯವಾಗಿತ್ತು. ಇಂತಹ ಸಾಹಸಕ್ಕೆ ಯೋಗ್ಯ ಬಹುಮಾನ ನೀಡಲಾಗುತ್ತಿತ್ತು. ಖೊಟ್ಟಿ ಮತ ಚಲಾವಣೆಯನ್ನು ವಿರೋಧಿಸಿದರೆ ಅಂತವರ ಮೇಲೆ ಹಲ್ಲೆ ಮಾಡುವ ವ್ಯವಸ್ಥೆ ಸಿದ್ಧವಾಗಿರುತ್ತಿತ್ತು. ಚುನಾವಣಾ ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿರುತ್ತಿದ್ದರು. ನಮ್ಮ ಮತದಾರರು ಇದೆಲ್ಲವನ್ನು ಸಹಿಸಿಕೊಂಡು ಹೋಗುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ದುರಂತವೇ ಆಗಿದೆ.

**ಜೆಡಿ(ಎಸ್)ನತ್ತ ಹೊಸ ಒಲವು**

ಕೆಲವೇ ಪ್ರದೇಶಗಳಿಗೆ ಸೀಮಿತವಾಗಿದ್ದ ಜೆಡಿ(ಎಸ್) ಪ್ರಭಾವ ಇದೀಗ ಉತ್ತರ ಕರ್ನಾಟಕ ಹಾಗೂ ನಗರ ಪ್ರದೇಶಗಳಿಗೂ ವ್ಯಾಪಿಸಿರುವುದನ್ನು ಈ ಚುನಾವಣಾ ಫಲಿತಾಂಶಗಳು ಬಹಿರಂಗಗೊಳಿಸಿವೆ. ಬಹುಶಃ ಈ ಗೆಲುವು ಜೆಡಿ(ಎಸ್) ನಾಯಕರಿಗೇ ಅಚ್ಚರಿ ಹುಟ್ಟಿಸಿರಬಹುದು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತದಾರರು ಅಧಿಕಾರದಲ್ಲಿರುವ ಪಕ್ಷವನ್ನೇ ಬೆಂಬಲಿಸುವುದು ಸಾಮಾನ್ಯವಾಗಿ ಕಂಡು ಬರುವ ವಿದ್ಯಮಾನ. ಆದರೆ ಈ ಚುನಾವಣೆಯಲ್ಲಿ ಮತದಾರರು ಜೆಡಿ(ಎಸ್) ಪಕ್ಷಕ್ಕೆ ನೀಡಿರುವ ಬೆಂಬಲವನ್ನು ಸುಲಭವಾಗಿ ಕಡೆಗಣಿಸಲಾಗದು. ಕಾಂಗ್ರೆಸ್ ತನ್ನ ದುರಾಡಳಿತದಿಂದ ಕಳೆದುಕೊಂಡ ಸ್ಥಾನಗಳಲ್ಲಿ ಸಿಂಹಪಾಲು ಜೆಡಿ(ಎಸ್) ಗೆ ಸಿಕ್ಕಿದೆ. ಅಧಿಕಾರರೂಢ ಪಕ್ಷವಾಗಿ ಹಣ ಬಲವನ್ನೂ ಅದು ಬಳಸಿಕೊಂಡಿದೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳ ಸ್ಪರ್ಧೆಯೂ ಹಲವಾರು ಕಡೆ ಜೆಡಿ(ಎಸ್)ಗೆ ನೆರವಾಗಿದೆ. ಹೀಗಾಗಿ ಅನೇಕ ಕಡೆಗಳಲ್ಲಿ ಕಾಂಗ್ರೆಸಿನ ಭದ್ರಕೋಟೆಗಳನ್ನು ಬೇಧಿಸಲು ಜೆಡಿ(ಎಸ್)ಗೆ ಸಾಧ್ಯವಾಗಿದೆ.

ಇವೆಲ್ಲದರ ನಡುವೆ ಜೆಡಿ(ಎಸ್) ರಾಜ್ಯದ ಪೌರ ಮತದಾರರಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟು ಹಾಕಿರುವುದು ಎದ್ದು ಕಾಣುತ್ತದೆ. ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಗ್ರಾಮವಾಸ್ತವ್ಯ ಹಾಗೂ ಜನತಾದರ್ಶನ ಕಾರ್ಯಕ್ರಮಗಳು ಪಾಪುಲಿಸ್ಟ್ ಕಾರ್ಯಕ್ರಮಗಳಾಗಿದ್ದರೂ ಜನರು ಅವುಗಳಲ್ಲಿ ಕನಸು ಕಾಣುವಂತಾಗಿದ್ದಾರೆ. ಕಾಂಗ್ರೆಸ್ ಜನರಿಂದ ದೂರಸರಿಯುತ್ತಿರುವಾಗ, ಬಿಜೆಪಿ ಜನರ ನಡುವೆ ಭೀತಿಯನ್ನು ಬಿತ್ತುತ್ತಿರುವಾಗ, ಇವರೊಬ್ಬ ಜನರ ಬಳಿಗೆ ಸಾಗುವ ಮುಖ್ಯಮಂತ್ರಿ ಎಂಬ ಭಾವನೆ ಉಂಟಾಗಿ ಅದು ಮತಗಳಲ್ಲಿ ಪರಿವರ್ತನೆ ಆಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಮುಖ್ಯಮಂತ್ರಿಯ ಗ್ರಾಮ ವಾಸ್ತವ್ಯದಿಂದ ಗ್ರಾಮಗಳ

ಪುಟ 10 ಕ್ಕೆ

# ದ.ಕ.: ಬಾಣಲೆಯಿಂದ ಬೆಂಕಿಗೆ

ಸ್ಥಳೀಯ ಸಂಸ್ಥೆ ಚುನಾವಣೆ ಮುಗಿದು ಫಲಿತಾಂಶ ಹೊರಬಿದ್ದಿದೆ. ಮಂಗಳೂರು ಮಹಾನಗರ ಪಾಲಿಕೆ ಚುನಾವಣೆಯ ಫಲಿತಾಂಶದ ಬಗ್ಗೆ ಪ್ರಜ್ಞಾವಂತ ನಾಗರೀಕರು ವ್ಯಕ್ತಪಡಿಸಿದ ಆತಂಕ ನಿಜವಾಗಿದೆ. ಕಾಂಗ್ರೆಸ್ಸಿನ 23 ವರ್ಷಗಳ ಸುದೀರ್ಘ ಆಡಳಿತದ ಭ್ರಷ್ಟಾಚಾರದ ಬೆನ್ನೇರಿ ಕೋಮುವಾದಿ ಬಿಜೆಪಿಗರು ಜಯಗಳಿಸಿದ್ದಾರೆ.

ಪುತ್ತೂರು, ಸುಳ್ಯ ಮತ್ತೆ ಬಿಜೆಪಿ ಪಾಲಾದರೆ, ಮೂಡಬಿದ್ರಿ ಪುರಸಭೆ ಜೆಡಿ(ಎಸ್), ಬಿಜೆಪಿಗೆ, ಬಂಟ್ವಾಳ ಮತ್ತು ಉಳ್ಳಾಲ ಕಾಂಗ್ರೆಸ್ ಬಹಳ ಪ್ರಯಾಸದಿಂದ ಮುನ್ನಡೆ ಕಾಯ್ದುಕೊಂಡಿದೆ.

**ಬಿಜೆಪಿಗೆ ಕಾಂಗ್ರೆಸ್‌ನ 'ಕಾಣಿಕೆ'**

ಮಂಗಳೂರು ಮಹಾನಗರಪಾಲಿಕೆಯಲ್ಲಿ ಕಳೆದ ಬಾರಿ 60ರಲ್ಲಿ 44 ಸ್ಥಾನ ಪಡೆದು ಭರ್ಜರಿ ವಿಜಯ ದಾಖಲಿಸಿದ್ದ ಕಾಂಗ್ರೆಸ್ಸಿಗರು ಮಂಗಳೂರನ್ನು ಹುರಿದು ಮುಕ್ಕಿದರು. ವಿಪಕ್ಷ ಬಿಜೆಪಿ ಕಾಂಗ್ರೆಸ್ಸಿನೊಂದಿಗೆ ಕೈಜೋಡಿಸಿ ಮಂಗಳೂರನ್ನು ಲೂಟಿ ಮಾಡಿತ್ತು. ಭ್ರಷ್ಟಾಚಾರ, ಕುಡಿಯುವ ನೀರಿನ ಸಮಸ್ಯೆ, ಕಳಪೆ ಕಾಮಗಾರಿ, ರಸ್ತೆಯ ದುರವಸ್ಥೆ, ಬಿಲ್ಡರ್‌ಗಳ ಅಟ್ಟಹಾಸ ಇವುಗಳಿಂದ ಬೇಸತ್ತ ನಾಗರೀಕರು ಬದಲಾವಣೆ ಬಯಸಿದ್ದರು. ಅದಕ್ಕೆ ಪೂರಕವಾಗಿ 5 ವರ್ಷಗಳ ಅವಧಿಯಲ್ಲಿ ಕಾರ್ಪೊರೇಟರ್‌ಗಳು ಗುಡ್ಡೆಹಾಕಿದ ಸಂಪತ್ತನ್ನು ಕಂಡು ಕಾಂಗ್ರೆಸ್ಸಿನಲ್ಲಿ ಒಂದೊಂದು ವಾರ್ಡಿಗೆ ಹತ್ತಾರು ಜನ ಟಿಕೇಟ್ ಆಕಾಂಕ್ಷಿಗಳು ಹುಟ್ಟಿಕೊಂಡಿದ್ದರು. ಕೊನೆಗೆ ಎಲ್ಲಾ ಲೆಕ್ಕಾಚಾರ ಹಾಕಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದರೂ ಬಂಡಾಯಗಾರರನ್ನು ತಡೆಯಲು ಕಾಂಗ್ರೆಸ್ಸಿಗೆ ಸಾಧ್ಯವಾಗಲಿಲ್ಲ. ಬಿಜೆಪಿಗೂ ಬಂಡಾಯಗಾರರ ಹಾವಳಿ ಇದ್ದರೂ ಕಾಂಗ್ರೆಸ್ಸಿನಷ್ಟು ಅಪಾಯವಾಗಲಿಲ್ಲ. ಕಾಂಗ್ರೆಸ್ ಕೊನೆಗಳಿಗೆಯಲ್ಲಿ ಎಂದಿನಂತೆ ಅರ್ಭಟಿಸಿದರೂ ಪರಿಸ್ಥಿತಿಯ ಲಾಭವನ್ನು ಸಂಪೂರ್ಣ ಹತೋಟಿಗೆ ತೆಗೆದುಕೊಂಡಿದ್ದ ಬಿಜೆಪಿಯ ಎದುರು ಕಾಂಗ್ರೆಸ್ ಸೋತು ಅಧಿಕಾರ ಕಳೆದುಕೊಂಡಿತು. ಒಟ್ಟು 60 ವಾರ್ಡ್‌ಗಳಲ್ಲಿ ಬಿಜೆಪಿ-34, ಕಾಂಗ್ರೆಸ್-20, ಜೆ.ಡಿ(ಎಸ್)-1, ಸಿಪಿಐ(ಎಂ)-1, ಪಕ್ಷೇತರರು-4 ಸ್ಥಾನ ಪಡೆದುಕೊಂಡರು.

ಕಾಂಗ್ರೆಸ್ ಮತ್ತು ಬಿಜೆಪಿಯ ಮಧ್ಯೆ ನೇರ ಸ್ಪರ್ಧೆ ಇದ್ದಲ್ಲಿ ಜನ ಅನಿವಾರ್ಯವಾಗಿ ಬಿಜೆಪಿಗೆ ಮತ ನೀಡಿದ್ದರೂ ಪರ್ಯಾಯ ಅಭ್ಯರ್ಥಿಗಳಿದ್ದಲ್ಲಿ ಜನ ಆ ಕಡೆಗೂ ಒಲವನ್ನು ತೋರಿದ್ದಾರೆ. ಸಿಪಿಐ(ಎಂ) ಸ್ಪರ್ಧಿಸಿದ ಕ್ಷೇತ್ರಗಳಲ್ಲಿ ಜನ ಉತ್ಸಾಹದಿಂದ ಪಕ್ಷವನ್ನು ಬೆಂಬಲಿಸಿದ್ದಾರೆ. ಬಿಜೆಪಿ, ಕಾಂಗ್ರೆಸ್ಸಿಗರು ಲಕ್ಷಾಂತರ ರೂಪಾಯಿ ದುಡ್ಡು, ಹೆಂಡದ ಹೊಳೆಯನ್ನು ಹರಿಸಿದ್ದರೂ ಈ ಬಾರಿ ಸಿಪಿಐ(ಎಂ) ಅಭ್ಯರ್ಥಿಗಳು ಉತ್ತಮ ಸಾಧನೆ ದಾಖಲಿಸಿದ್ದಾರೆ. ಬಜಾಲ್ ವಾರ್ಡಿನಲ್ಲಿ ಕಾಂಗ್ರೆಸ್ಸಿಗರ ಎಲ್ಲಾ ತಂತ್ರಗಳನ್ನು ಸೋಲಿಸಿ ಸಿಪಿಐ(ಎಂ)ನ ಜಯಂತಿ .ಬಿ.ಶೆಟ್ಟಿಯವರು ಭರ್ಜರಿ ಜಯ ದಾಖಲಿಸಿದ್ದಾರೆ. ಕಳೆದ 10 ವರ್ಷದ ನಂತರ ನಗರಪಾಲಿಕೆಗೆ ಸಿಪಿಐ(ಎಂ)ನ ಪ್ರವೇಶ ಆಗಿದೆ. ಮುಸ್ಲಿಮರು ಜಾತ್ಯತೀತ ಪಕ್ಷವಾದ ಸಿಪಿಐ(ಎಂ)ನೊಂದಿಗೆ ನಿಂತಿರುವುದೇ ಈ ಗೆಲುವಿನ ಹಿಂದಿರುವ ರಾಜಕೀಯ. ಜಪ್ಪಿನ ಮೊಗರು ವಾರ್ಡಿನಲ್ಲಿ ಪಕ್ಷದ ಮಾಜಿ ಕಾರ್ಪೊರೇಟರ್ ಆಗಿದ್ದ ಸದಾಶಿವ ಶೆಟ್ಟಿ ಅಧಿಕಾರದ ಲಾಲಸೆಯಿಂದ ಪಕ್ಷ ತೊರೆದು ಬಿಜೆಪಿಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪಕ್ಷದ ವಿರುದ್ಧ ಪ್ರಚಾರದಲ್ಲಿ ತೊಡಗಿದ್ದರೂ ಪಕ್ಷದ ಅಭ್ಯರ್ಥಿ ಅವರನ್ನು ಮೂರನೇ ಸ್ಥಾನಕ್ಕೆ ತಳ್ಳಿ ಕೇವಲ 25 ಮತಗಳಿಂದ ವಿರೋಚಿತ ಸೋಲನ್ನು ಒಪ್ಪಿಕೊಂಡರು. ಪಕ್ಷ ಪ್ರಥಮ ಬಾರಿ ಸ್ಪರ್ಧಿಸಿದ್ದ ಪಂಜಿನ ಮೊಗರು ವಾರ್ಡಿನಲ್ಲಿ 995 ಮತಗಳಿಸಿ ಕೇವಲ 113 ಮತಗಳಿಂದ ಸೋತು ದಯಾನಂದ ಶೆಟ್ಟಿಯವರು ಎಲ್ಲರನ್ನು ಅಚ್ಚರಿಗೆ ಕೆಡವಿದರು. ಇಲ್ಲಿ ಸಿಪಿಐ(ಎಂ)ನ ಬಿ.ಕೆ.ಕೃಷ್ಣಪ್ಪರವರು ಕಾಂಗ್ರೆಸ್‌ನ ಬೆಂಬಲವಿದ್ದರೂ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟರು. ಕಂಕನಾಡಿ ಮತ್ತು ಪದವು ಸೆಂಟ್ರಲ್ ವಾರ್ಡಿನಲ್ಲಿಯೂ ಪಕ್ಷದ ಅಭ್ಯರ್ಥಿಗಳು ಗಮನ ಸೆಳೆಯುವಷ್ಟು ಮತಗಳಿಸಿದ್ದಾರೆ. ಈ ಬಾರಿ ಮಂಗಳೂರು ಮಹಾನಗರಪಾಲಿಕೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಪಡೆದಿರುವ ಮತ ಪಕ್ಷದ ಕಾರ್ಯಕರ್ತರಲ್ಲಿ, ಹಿತೈಷಿ ಅಭಿಮಾನಿಗಳು ಪಡೆದಿರುವ ಉಳ್ಳಾಲ ಪುರಸಭೆಯಲ್ಲಿ ಕಳೆದ ಬಾರಿ 1 ಸ್ಥಾನ ಪಡೆದಿದ್ದ ಸಿಪಿಐ(ಎಂ) ಪಕ್ಷ ಈ ಬಾರಿ 2 ಸ್ಥಾನಗಳಿಸಿದೆ. ಮುಡಬಿದಿರೆಯಲ್ಲಿ ಕಾರ್ಮಿಕ ನಾಯಕಿ ರಮಣಿ ಜಯಗಳಿಸುವ ಮುಖಾಂತರ ಮುಡಬಿದರೆ ಪುರಸಭೆಗೆ ಪ್ರಥಮ ಬಾರಿ ಸಿಪಿಐ(ಎಂ) ಪಕ್ಷ ಪ್ರವೇಶ ಪಡೆಯಿತು. ಸುಳ್ಯ, ಬೆಳ್ತಂಗಡಿ, ಬಂಟ್ವಾಳ, ಪುತ್ತೂರಿನಲ್ಲಿ ಜಯಗಳಿಸದಿದ್ದರೂ ಪಕ್ಷದ ಅಭ್ಯರ್ಥಿಗಳು ಪ್ರಬಲ ಸ್ಪರ್ಧೆ ನೀಡಿ ಗಮನ ಸೆಳೆದಿದ್ದಾರೆ. ಪಕ್ಷ ಜಿಲ್ಲೆಯಲ್ಲಿ ಗಳಿಸಿರುವ ಮತ ಜನತೆಯ ಗಮನ ಸೆಳೆದಿದೆ.

| | | | | | | |
|---|---|---|---|---|---|---|
| **ಪಂಜಿಮೊಗರು** | | | | | | |
| ಸಿಪಿಐ(ಎಂ) | ಸಿಪಿಐ | ಬಿಜೆಪಿ | ಜೆಡಿ(ಎಸ್) | ಪಕ್ಷೇತರ | ಅಸಿಂದು | |
| 995 | 992 | 1108 | 140 | 12 | 11 | |
| **ಪದವು ಸೆಂಟ್ರಲ್** | | | | | | |
| ಸಿಪಿಐ(ಎಂ) | ಕಾಂಗ್ರೆಸ್ | ಬಿಜೆಪಿ | - | ಪಕ್ಷೇತರ | ಅಸಿಂದು | |
| 137 | 1158 | 617 | - | 1998 | 69 | |
| **ಕಂಕನಾಡಿ** | | | | | | |
| ಸಿಪಿಐ(ಎಂ) | ಕಾಂಗ್ರೆಸ್ | ಬಿಜೆಪಿ | ಜೆಡಿ(ಎಸ್) | ಪಕ್ಷೇತರ | ಅಸಿಂದು | |
| 573 | 1008 | 1759 | 40 | 444 | 30 | |
| **ಬಜಾಲ್** | | | | | | |
| ಸಿಪಿಐ(ಎಂ) | ಕಾಂಗ್ರೆಸ್ | ಬಿಜೆಪಿ | ಜೆಡಿ(ಎಸ್) | ಪಕ್ಷೇತರ | ಅಸಿಂದು | ಪಕ್ಷೇತರರು |
| 1274 | 1196 | 226 | 23 | 762 | 41 | 5 |
| **ಜಪ್ಪಿನಮೊಗರು** | | | | | | |
| ಸಿಪಿಐ(ಎಂ) | ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ | ಪಕ್ಷೇತರ | ಅಸಿಂದು | ಪಕ್ಷೇತರ |
| 1041 | 1066 | 962 | 19 | 597 | 38 | 16 |

ಗೆದ್ದ ಹೋರಾಟಗಾರ್ತಿ



ಜಯಂತಿ ಬಿ. ಶೆಟ್ಟಿ

**ಇದು ಓಲೈಕೆ ಅಲ್ಲದೆ ಮತ್ತೇನು?**

ಬಿಜೆಪಿ ಅಧಿಕಾರ ಹಿಡಿಯಲು ಎಲ್ಲಾ ರೀತಿಯ ಅಡ್ಡದಾರಿಯನ್ನು ಬಳಸಿಕೊಂಡಿದೆ. ಕಾಂಗ್ರೆಸ್ ಮುಸ್ಲಿಂರನ್ನು ತುಷ್ಟೀಕರಿಸುತ್ತಿದೆ ಎಂದು ಬೊಬ್ಬಿಡುವ ಬಿಜೆಪಿ, ಕಾಂಗ್ರೆಸ್ಸಿಗರು ನಾಚಿಸುವಂತೆ ಈ ಬಾರಿ ಓಲೈಸಿದೆ. ಮಸೀದಿಗಳಿಗೆ ಯಥೇಚ್ಛವಾಗಿ ದುಡ್ಡು ನೀಡುವುದು, ಬಿಜೆಪಿಯ ಕೋಮು ರಾಜಕೀಯದಿಂದಾಗಿ ವಿವಾದಕ್ಕೆ ತುತ್ತಾಗಿ ಅರ್ಧದಲ್ಲಿ ನಿಂತಿಂತಹ ಮಸೀದಿ, ಮದ್ರಸಗಳ ಕಟ್ಟಡ ಕೆಲಸವನ್ನು ಪೂರ್ತಿಗೊಳಿಸುವ ಭರವಸೆ, ಕಬರಸ್ತಾನಗಳಿಗೆ ಜಮೀನು, ಮಸೀದಿಗಳಿಗೆ ಜನರೇಟರ್ ವಿತರಣೆ, ಎಂಪಿ, ಎಂ.ಎಲ್.ಎ ಫಂಡ್‌ನಿಂದ ಮಸೀದಿಗಳಿಗೆ ಹಣ ನೀಡಿಕೆ, ಮುಸ್ಲಿಮರ ಮೇಲೆ ತಾವೇ ಹೂಡಿದ್ದ ದಾವೆಗಳನ್ನು ವಾಪಾಸು ಪಡೆಯುವ ಆಮಿಷಗಳನ್ನು ಒಡ್ಡಿ ಮುಸ್ಲಿಂ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಬಿಜೆಪಿ ಗೆದ್ದಿದೆ.

ಮುಸ್ಲಿಂರು ಕಡಿಮೆ ಸಂಖ್ಯೆಯಲ್ಲಿ ಇರುವ ಕಡೆ ನಾವು ಗೆದ್ದರೆ ಗಲಾಟೆಗಳನ್ನು ನಡೆಸುವುದಿಲ್ಲವೆಂಬ ಪರೋಕ್ಷ ಬೆದರಿಕೆಯನ್ನು ಒಡ್ಡಿ ಮುಸ್ಲಿಂರ ಮತಗಳನ್ನು ಬಿಜೆಪಿ ಗಳಿಸಿರುತ್ತದೆ. ಬಿಜೆಪಿಯ ಈ ರೀತಿಯ ಪೆಟ್ಟಿನಿಂದ ಕಂಗಾಲಾದ ಕಾಂಗ್ರೆಸ್ಸಿಗರು ಕೊನೆಯವರೆಗೂ ಚೇತರಿಸಿಕೊಳ್ಳಲೇ ಇಲ್ಲ.

ಹಿಂದುತ್ವವಾದಿಗಳೊಂದಿಗೆ ಪೈಪೋಟಿಗೆ ಬಿದ್ದಿರುವ ಮುಸ್ಲಿಂ ತೀವ್ರವಾದಿಗಳಾದ ಕೆಎಫ್‌ಡಿಯವರೂ ಬಿಜೆಪಿ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಅದರಲ್ಲೂ ಸಿಪಿಐ(ಎಂ) ಅಭ್ಯರ್ಥಿಗಳನ್ನು ಸೋಲಿಸಲು ಶತಾಯಗತಾಯ ಪ್ರಯತ್ನ ನಡೆಸಿ ಹಗಲು-ರಾತ್ರಿ ಕೆಲಸ ಮಾಡಿದ್ದಾರೆ. ಕೆಎಫ್‌ಡಿಯ ಈ ಕೆಲಸ ಮಂಗಳೂರಿನ ಮುಸ್ಲಿಂ ಸಮುದಾಯದ ಮಧ್ಯೆ ವ್ಯಾಪಕ ಅಸಮಾಧಾನಕ್ಕೆ ಮೂಡಿಸಿದೆ.

ಒಟ್ಟಾರೆಯಾಗಿ ಮಂಗಳೂರು ಜನತೆಯ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ. ವಿರೋಧಪಕ್ಷವಾಗಿರುವಾಗಲೇ ದುಡ್ಡು ದೋಚುವುದರಲ್ಲಿ ಹಾಗೂ ಮಂಗಳೂರನ್ನು ಮಾರುಕಟ್ಟೆಯಲ್ಲಿ ಹರಾಜಿಗಿರುವುದು ಖಚಿತ ವೇಗವಾಗಿ ಬೆಳೆಯುತ್ತಿರುವ ಮಂಗಳೂರು ನಗರಕ್ಕೆ ಉದ್ಯಮಿಗಳು, ಬಿಲ್ಡರ್‌ಗಳು ಲಗ್ಗೆ ಇಡುತ್ತಿದ್ದಾರೆ. ಇವರುಗಳ ಸೇವೆ ಮಾಡಲು ಬಿಜೆಪಿ ಈಗಾಗಲೇ ಕಾಂಗ್ರೆಸ್ ಸಮರ್ಥ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತದೆ ಎಂಬ ಭ್ರಮೆ ಮಂಗಳೂರಿನಲ್ಲಿ ಯಾರಿಗೂ ಇಲ್ಲ. ಮನೆ ಬಾಡಿಗೆ ಕಟ್ಟಲಾಗದೆ, ನಿವೇಶನವಿಲ್ಲದೆ, ಹಕ್ಕುಪತ್ರವಿಲ್ಲದೆ, ರಸ್ತೆ, ದಾರಿದೀಪ ಕುಡಿಯುವ ನೀರು ಇತ್ಯಾದಿ ಅವ್ಯವಸ್ಥೆಯಿಂದ ಕಂಗಾಲಾಗಿರುವ ಮಂಗಳೂರಿನ ಜನತೆಯನ್ನು ರಕ್ಷಿಸುವವರು ಯಾರು? ಜನಪರ ಚಳುವಳಿ, ಐಕ್ಯ ಹೋರಾಟ ಮಾತ್ರ ಮಂಗಳೂರಿನ ನಾಗರೀಕರ ಹಕ್ಕುಗಳನ್ನು ರಕ್ಷಿಸೀತು.

**ಮುನೀರ್ ಕಾಟಿಪಳ್ಳ**

# ಗುಲ್ಬರ್ಗಾ ಮಹಾನಗರ ಪಾಲಿಕೆ ಚುನಾವಣೆ: ಕೋಮುವಾದಿಗಳಿಗೆ ಜನತೆಯ ತಿರಸ್ಕಾರ

ಚುನಾವಣಾ ಪೂರ್ವದಲ್ಲಿ ಗುಲಬರ್ಗಾದ ಮಹಾನಗರಪಾಲಿಕೆ ಚುನಾವಣೆ ಬಗ್ಗೆ ಪತ್ರಿಕೆಯಲ್ಲಿ ವರದಿಯಾದಂತೆಯೇ ಚುನಾವಣಾ ಫಲಿತಾಂಶ ಹೊರಹೊಮ್ಮಿದೆ. ಗುಲಬರ್ಗಾ ಮಹಾನಗರ ಪಾಲಿಕೆಯಲ್ಲಿ ಕೋಮುವಾದಿ ಬಿಜೆಪಿ ಗುಲಬರ್ಗಾ ಮಹಾನಗರದ ಜನತೆ ಬಿಜೆಪಿ ಅಧಿಕಾರ ಹಿಡಿಯುವುದನ್ನು ತಡೆಹಿಡಿದಿದ್ದಾರೆ. ಇಲ್ಲಿ, ಜಾತ್ಯಾತೀತ ಶಕ್ತಿಗಳಿಗೆ ಜಯ ದೊರಕಿದೆ. ಅದರಂತೆ ಜಿಲ್ಲೆಯ 12 ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಂತೂ ಬಿಜೆಪಿ ಪೂರ್ತಿಯಾಗಿ ಮಣ್ಣುಮುಕ್ಕಿದೆ. ಒಟ್ಟಿನಲ್ಲಿ ಜಿಲ್ಲೆಯಾದ್ಯಂತ ಜಾತ್ಯತೀತ ಶಕ್ತಿಗಳು ಪರಿಣಾಮಕಾರಿಯಾಗಿ ಹೋರಾಡಿ ಜಯ ಸಾಧಿಸಿವೆ. ಜಿಲ್ಲೆಯಲ್ಲಿ ಒಬ್ಬ ಮಂತ್ರಿ ಮತ್ತು ಇಬ್ಬರು ಶಾಸಕರಿದ್ದರು. ಆದರೂ ಬಿಜೆಪಿಯು ಅಧಿಕಾರಕ್ಕೇರಲಾಗಲಿಲ್ಲ.

ಗುಲಬರ್ಗಾ ಮಹಾನಗರ ಪಾಲಿಕೆಯಲ್ಲಿ ಒಟ್ಟು 55 ಸದಸ್ಯ ಮಹಾನಗರ ಪಾಲಿಕೆಯಲ್ಲಿ ಕಾಂಗ್ರೆ 24 ಸ್ಥಾನ ಗಿಟ್ಟಿಸಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಬಿಜೆಪಿ 19 ಸ್ಥಾನಗಳನ್ನು ಪಡೆದಿದೆ. ಅದರಂತೆ ಜೆಡಿ(ಎಸ್) 7 ಸ್ಥಾನ ಗಳಿಸಿದೆ. ಬಿ.ಎಸ್.ಪಿ 1, ಐಯುಎಂಎಲ್ 1, 3 ಪಕ್ಷೇತರರು ಜಯಗಳಿಸಿದ್ದಾರೆ.

24 ಸ್ಥಾನಗಳಲ್ಲಿ ಜಯಗಳಿಸಿರುವ ಕಾಂಗ್ರೆ ಅಧಿಕಾರ ಹಿಡಿಯಲು ಇನ್ನೂ 4 ಸದಸ್ಯರ ಕೊರತೆಯಿದೆ. ಒಂದು ಅಂದಾಜಿನ ಪ್ರಕಾರ ಮೇಯರ್ ಸ್ಥಾನವನ್ನು ಕಾಂಗ್ರೆ ಪಡೆಯುವ ಎಲ್ಲಾ ಸಾಧ್ಯತೆಗಳು ಕಂಡುಬರುತ್ತಿವೆ.

ಇತರ 11 ಸ್ಥಳೀಯ ಸಂಸ್ಥೆಗಳಲ್ಲಿ ಗುರಮಿಠಕಲ್, ಯಾದಗೀರ, ಶಹಾಪೂರ, ಅಫಜಲಪೂರಗಳಲ್ಲಿ ಜಾತ್ಯತೀತ ಜನತಾದಳ ಸ್ಪಷ್ಟ ಬಹುಮತ ಪಡೆದಿದೆ. ಆಳಂದ, ಚಿಂಚೋಳಿಯಲ್ಲಿ ಕಾಂಗ್ರೆಗೆ ಸ್ಪಷ್ಟ ಬಹುಮತ ದೊರಕಿದೆ. ಉಳಿದ ಕಡೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಚಿತ್ತಾಪುರದಲ್ಲಿ ಕಾಂಗ್ರೆ, ಜೆಡಿ(ಎಸ್) ಸಮಬಲ ಹೊಂದಿವೆ. ಆದರೆ ಏಕೈಕ ಪಕ್ಷೇತರ ಅಭ್ಯರ್ಥಿ ನಿನ್ನೆ ಕಾಂಗ್ರೆ ಸೇರುವದರಿಂದ ಅಲ್ಲಿ ಕಾಂಗ್ರೆ ಜಯ ಖಚಿತವಾಗಿದೆ. ಸುರಪುರನಲ್ಲಿ ಕಾಂಗ್ರೆ, ಜೆಡಿ(ಎಸ್) ಸಮಬಲ ಹೊಂದಿದ್ದು ಫಲಿತಾಂಶ ಎತ್ತ ಕಡೆಗೂ ವಾಲಬಹುದು. ಜೇವರ್ಗಿಯಲ್ಲಿ ಕಾಂಗ್ರೆಗೆ ಒಂದು ಸ್ಥಾನದ ಕೊರತೆಯಿದ್ದು ಆ ಕೊರತೆಯನ್ನು ಕಾಂಗ್ರೆ ನಿಭಾಯಿಸಿದರೆ ಅಲ್ಲಿ ಕಾಂಗ್ರೆ ಅಧಿಕಾರಕ್ಕೆ ಬರಬಹುದು. ಸೇಡಂ ಮತ್ತು ಶಹಬಾದ್‌ನಲ್ಲೂ ಕಾಂಗ್ರೆ ಇದೇ ಸ್ಥಿತಿಯಲ್ಲಿದೆ.

ಇಲ್ಲಿನ ಫಲಿತಾಂಶಗಳು ರಾಜ್ಯಮಟ್ಟದಲ್ಲಿ ಬರುವ 3ರಿಂದ 4 ದಿವಸಗಳಲ್ಲಿ ಉದ್ಭವಿಸುವ ತೀವ್ರ ರಾಜಕೀಯ ಬದಲಾವಣೆಗಳ ಮೇಲೆ ಅವಲಂಭಿಸಿದ್ದು, ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜಯಗಳಿಸಿರುವ ಅಭ್ಯರ್ಥಿಗಳು ಬೆಂಗಳೂರು, ದಿಲ್ಲಿ ಕಡೆಗೆ ಬಕಪಕ್ಷಿಗಳ ಹಾಗೆ ನೋಡುತ್ತಿದ್ದಾರೆ. ರಾಜ್ಯ ರಾಜಕೀಯದ ದಿಢೀರ್ ಬೆಳವಣಿಗೆಗಳು ಸ್ಥಳೀಯ ಸಂಸ್ಥೆ ಚುನಾವಣೆಯ ನಂತರದ ಹುಮ್ಮಸ್ಸಿಗೆ ಮುಸುಕು ಹಾಕಿ ರಾಜ್ಯ ರಾಜಕೀಯ ಅದರ ಮೇಲೆ ಸವಾರಿ ಮಾಡಿದೆ.

ಗುಲಬರ್ಗಾ ಮಹಾನಗರ ಪಾಲಿಕೆಗೆ ಸಿಪಿಐ(ಎಂ) ಪಕ್ಷದಿಂದ ಸ್ಪರ್ಧಿಸಿದ್ದ ಎಲ್ಲಾ 3 ಅಭ್ಯರ್ಥಿಗಳು ಸೋತಿದ್ದಾರೆ. ಚಿಂಚೋಳಿ ಶಹಾಪೂರದಲ್ಲಿ ಕೂಡಾ ಸೋಲಾಗಿದೆ. ಚುನಾವಣೆಯಲ್ಲಿ ಬಂಡವಾಳಶಾಹಿ ಪಕ್ಷಗಳ ಅಬ್ಬರಕ್ಕೆ ತಡೆಯೊಡ್ಡಲು ಸಾಧ್ಯವಾಗಿಲ್ಲ. ಬರುವ ದಿನಗಳಲ್ಲಿ ಚಳುವಳಿ ಇನ್ನಷ್ಟು ಬಲಪಡಿಸಬೇಕಾದ ಅಗತ್ಯವಿದೆ.

**- ಗಂಗಾ**

## ಸ್ವಾತಂತ್ರ್ಯ ಭಾರತ

ಸ್ವಾತಂತ್ರ್ಯ ಭಾರತ ಅರವತ್ತು ವರುಷ
ಕೆಲವರಿಗೆ ಖಂಡಿತವು ತಂದಿಹುದು ಹರುಷ
ಈ ಇಡಿಯ ದೇಶಕ್ಕೆ ಆದವರು ಗಂಡ
ಅಂಬಾನಿ ಆ ಟಾಟಾ ಬಿರ್ಲಾಗಳ ತಂಡ

**- ವಿಡಂಬಾರಿ**

# ಗೋಧಿ ಆಮದು ಹಗರಣ

**ಗೋಧಿಯ ಬೆಲೆ ವಿಪರೀತ ಏರಿ ಜನ ತತ್ತರಿಸಿದ್ದಾರೆ. ಸರ್ಕಾರ ಕಳಪೆ ಗೋಧಿಯನ್ನು ದುಬಾರಿ ಬೆಲೆ ಕೊಟ್ಟು ತರಿಸಿಕೊಂಡಿದೆ. ಈ ಪರಿಸ್ಥಿತಿಗೆ ಕಾರಣರಾರು? ಗೋಧಿ ಆಮದು ನಿಜವಾಗಿಯೂ ಅಗತ್ಯವಾಗಿತ್ತೇ? ಗೋಧಿ ಕೊರತೆಗೆ, ಬೆಲೆ ಏರಿಕೆಗೆ ಯಾರು ಕಾರಣ? ಓದಿ.**

ಗೋಧಿ ನಮ್ಮ ದೇಶದ ಬಹುದೊಡ್ಡ ಜನ ವಿಭಾಗದ ಪ್ರಮುಖ ಆಹಾರ ಧಾನ್ಯ. ಕರ್ನಾಟಕದಲ್ಲಿ ಗೋಧಿಯು ಅಕ್ಕಿ, ರಾಗಿ, ಜೋಳದಷ್ಟು ಗೋಧಿಯ ಬಳಕೆಯು ಇಲ್ಲವಾದರೂ ಹಲವು ರೂಪಗಳಲ್ಲಿ ಜನರ ಹೊಟ್ಟೆ ತುಂಬಿಸುವ ಪಾತ್ರವನ್ನು ಗೋಧಿ ವಹಿಸುತ್ತಿದೆ. ಚಪಾತಿ ಇತ್ಯಾದಿಗಳ ರೂಪದಲ್ಲಿ ಮಾತ್ರವಲ್ಲ ರವೆ, ಗೋಧಿ ಹಿಟ್ಟಿನಿಂದ ತಯಾರಿಸಲ್ಪಡುವ ಬ್ರೆಡ್ಡು ಮತ್ತಿತರ ಹಲವು ಆಹಾರ ಪದಾರ್ಥಗಳೂ ಜನರ ಹಸಿವನ್ನು ತಣಿಸುವಲ್ಲಿ ಮಹತ್ವದ ಪಾತ್ರವನ್ನೇ ವಹಿಸುತ್ತದೆ.

ಇಂತಹ ಮಹತ್ವದ ಆಹಾರ ಧಾನ್ಯವನ್ನು ಬೆಳೆಯುವ ರೈತರ ಹಾಗೂ ಅದನ್ನು ಬಳಸುವ ಜನರ ಹಿತವನ್ನು ಕಾಯುವ ಕೆಲಸ ಸರ್ಕಾರದ ಜವಾಬ್ದಾರಿ. ಆದರೆ ಕೇಂದ್ರ ಯುಪಿಎ ಸರ್ಕಾರದ ಧೋರಣೆಗಳು ರೈತರ ಹಿತಾಸಕ್ತಿಗೆ, ಜನರ ಹಿತಾಸಕ್ತಿಗಳಿಗೆ ತದ್ವಿರುದ್ಧ ಇದೆ. ಕಾರ್ಪೊರೇಟ್ ಕಂಪನಿಗಳೂ ಹಾಗೂ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ 'ಹಿತಕರ'ವಾಗಿವೆ. ಹಲವು ಆರ್ಥಿಕ ತಜ್ಞರೂ, ಎಡಪಕ್ಷಗಳೂ ನಿರಂತರವಾಗಿ ಬೊಬ್ಬೆ ಹೊಡೆಯುತ್ತಿದ್ದರೂ ತನ್ನ ನೀತಿಯಲ್ಲಿ ಯಾವ ಬದಲಾವಣೆಯನ್ನು ಮಾಡಲು ಸಿದ್ಧವಿಲ್ಲ. ಇಂತಹ ನೀತಿಯ ಫಲವಾಗಿ ಕೇಂದ್ರ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ನಷ್ಟವಾಗಿದೆ. ಸರ್ಕಾರಕ್ಕೆ ನಷ್ಟ ಎಂದರೆ ಜನರು ಅದನ್ನು ತಾನು ತೆರಿಗೆಗಳ ಮೂಲಕ ತುಂಬಬೇಕು ತಾನೆ?

**ಆಗ ರಫ್ತು, ಈಗ ಆಮದು ಏನಿದೆ ಇದರ ಹಿಂದೆ?**

2000-01 ರಿಂದ 2004-05 ರ ಅವಧಿಯಲ್ಲಿ ಅಂದು ಅಧಿಕಾರದಲ್ಲಿದ್ದ ಎನ್‌ಡಿಎ ಸರ್ಕಾರವು ಗೋಧಿಯನ್ನು ಹೊರ ದೇಶಗಳಿಗೆ ರಫ್ತು ಮಾಡಿತು. ಅಂದರೆ ಹೊರ ದೇಶಗಳಿಗೆ ಕಳಿಸಿತ್ತು. ಆ ಅವಧಿಯಲ್ಲಿ ದೇಶದ ಹಲವು ಕಡೆ ಭೀಕರ ಬರಗಾಲ ತಾಂಡವವಾಡುತ್ತಿತ್ತು. ಎಡಪಕ್ಷಗಳು ದೇಶದಲ್ಲಿ ಕೂಲಿಗಾಗಿ ಕಾಳು ಯೋಜನೆ ಜಾರಿಗೆ ತನ್ನಿ, ಪಡಿತರ ಚೀಟಿ ಮೂಲಕ ಸಮರ್ಪಕ ಆಹಾರ ಧಾನ್ಯ ಪೂರೈಸಿ ಎಂದು ಒತ್ತಾಯಿಸಿದವು. ಈ ಒತ್ತಾಯಕ್ಕೆ ಕಿವಿಗೊಡದ ಸರ್ಕಾರ, ರೇಷನ್ ಡಿಪೋಗಳಲ್ಲಿ ಜನರಿಗೆ ನೀಡುವ ಬೆಲೆಗಿಂತಲೂ ಕಡಿಮೆ ದರಕ್ಕೆ ವಿದೇಶಗಳಿಗೆ ರಫ್ತು ಮಾಡಿತು. ಈ ಅವಧಿಯ ಇಂತಹ ರಫ್ತಿನಿಂದಾಗಿ ದೇಶಕ್ಕೆ ಒಟ್ಟು 16,245 ಕೋಟಿ ರೂಪಾಯಿಗಳು ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಎನ್‌ಡಿಎ ಸರ್ಕಾರ ಸೋತು ಸುಣ್ಣವಾಗಿ ಇದೀಗ ಯುಪಿಎ ಸರ್ಕಾರ ಅಧಿಕಾರ ನಡೆಸುತ್ತಿದೆ. ಇದೀಗ ಪರಿಸ್ಥಿತಿ ಉಲ್ಟಾ ಆಗಿದೆ. ಅಂದರೆ ಈಗ ಆಹಾರ ಧಾನ್ಯವನ್ನು ಗೋಧಿಯನ್ನು ಆಮದು ಮಾಡಿಕೊಳ್ಳಬೇಕಾಗಿ ಬಂದಿದೆ. ಇದೂ ಒಂದು ದೊಡ್ಡ ಹಗರಣವೇ. ಇದರ ಮೂಲಕವೂ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ನಷ್ಟವಾಗಿದೆ.

**ಗೋಧಿ ಆಮದು ಮಾಡಿಕೊಳ್ಳಬೇಕಾಗಿ ಬಂದಿರುವುದೇಕೆ?**

ಪ್ರತಿವರ್ಷ ಸುಗ್ಗಿಯ ಸಮಯದಲ್ಲಿ ಆಹಾರ ಧಾನ್ಯಕ್ಕೆ ಸರ್ಕಾರ ಕನಿಷ್ಟ ಬೆಂಬಲ ಬೆಲೆ ನೀಡಿ ಖರೀದಿ ನಡೆಸುವುದು. ಮತ್ತು ಹೀಗೆ ಕೊಂಡ ಆಹಾರ ಧಾನ್ಯವನ್ನು ಪಡಿತರ ಚೀಟಿಗಳ ಮೂಲಕ ವಿತರಿಸುವುದು. ಇದು ಇತ್ತೀಚಿನವರೆಗೆ ನಡೆದು ಬಂದ ಕ್ರಮ.

ಇದರಿಂದ ಹಲವು ಬಗೆಯ ಪ್ರಯೋಜನವಿದೆ. ಸುಗ್ಗಿಯ ಸಮಯದಲ್ಲಿ ಬೆಲೆ ಕುಸಿತದಿಂದ ಕಂಗಾಲಾಗುವ ರೈತ ಸಮುದಾಯಕ್ಕೆ ಕನಿಷ್ಟ ಬೆಂಬಲ ಬೆಲೆ ನೀಡುವುದರಿಂದ ರೈತರನ್ನು ರಕ್ಷಿಸಿದಂತಾಗುತ್ತದೆ. ಮತ್ತು ಪಡಿತರ ವ್ಯವಸ್ಥೆಯ ಮೂಲಕ ರಿಯಾಯಿತಿ ದರದಲ್ಲಿ ಆಹಾರ ನೀಡುವುದರಿಂದ ಬಡ ಜನವಿಭಾಗಗಳಿಗೆ ಆಹಾರ ದೊರೆಯುವಂತಾಗುತ್ತದೆ. ಅಷ್ಟು ಮಾತ್ರವಲ್ಲ, ಲಾಭಕೋರ ಶಕ್ತಿಗಳು 'ಮುಕ್ತ' ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಸಿ ಜನರನ್ನು ಲೂಟಿ ಮಾಡುವ ಕ್ರಮಗಳಿಗೆ ನಿಯಂತ್ರಣ ಹೇರಲು ಸಾಧ್ಯವಾಗುತ್ತದೆ.

ಜಾಗತೀಕರಣದ ಭಾಗವಾಗಿ ಜಾರಿಯಾಗುತ್ತಿರುವ ನೀತಿಗಳು ಸರ್ಕಾರ ಈ ವಿಷಯಗಳಲ್ಲಿ ಇಷ್ಟೊಂದು ಪಾತ್ರ ವಹಿಸಬೇಕಾಗಿಲ್ಲ ಎನ್ನುತ್ತವೆ.

ಇತ್ತೀಚಿನ ವರ್ಷಗಳಲ್ಲಿ ಸುಗ್ಗಿ ಸಮಯದಲ್ಲಿ ಆಹಾರ ಧಾನ್ಯ ಖರೀದಿಸುವ ಜವಾಬ್ದಾರಿಯನ್ನು ಸರ್ಕಾರ ಖಾಸಗಿ ಕಂಪನಿಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಬಿಟ್ಟಿದೆ.

ಈ ವರ್ಷ ಏನಾಯ್ತು, ಸುಗ್ಗಿ ಕಾಲದಲ್ಲಿ ಗೋಧಿಗೆ ಟನ್‌ಗೆ 8000 ರೂಪಾಯಿ ಕನಿಷ್ಟ ಬೆಂಬಲ ಬೆಲೆ ಘೋಷಿಸಿತು. ಬೆಂಬಲ ಬೆಲೆ ಹೆಚ್ಚಿಸಬೇಕೆಂದು ಸಿಪಿಐ(ಎಂ) ಮುಂತಾದ ಎಡಪಕ್ಷಗಳು ಎಷ್ಟು ಒತ್ತಾಯಿಸಿದರೂ ಕೇಳಲಿಲ್ಲ. ದೊಡ್ಡ ಕಂಪನಿಗಳು ಖರೀದಿಗೆ ಇಳಿದವು. ಅವು ರೈತರಿಗೆ 8500 ರೂಪಾಯಿ ಬೆಲೆ ನೀಡಿದವು. ಹೀಗಾಗಿ ದೊಡ್ಡ ಪ್ರಮಾಣದ ಗೋಧಿಯು ಬೃಹತ್ ಕಾರ್ಪೊರೇಟ್ ಕಂಪನಿಗಳ ಕೈ ಸೇರಿತು. ಸರ್ಕಾರಕ್ಕೆ ನಿರೀಕ್ಷಿತ ಪ್ರಮಾಣದ ಗೋಧಿ ಸಂಗ್ರಹ ಮಾಡಲಾಗಲಿಲ್ಲ. ಇದರ ಪರಿಣಾಮ ಏನು ಗೊತ್ತೆ? ನಮ್ಮ ರೈತರು ಬೆಳೆದದ್ದಕ್ಕಿಂತ ಕೆಟ್ಟ ಗೋಧಿಯನ್ನು ಟನ್ ಒಂದಕ್ಕೆ 16,000 ನೀಡಿ ಆಸ್ಟ್ರೇಲಿಯಾದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ!!

ಕೃಷಿ ಬಿಕ್ಕಟ್ಟಿನಿಂದ ನಲುಗಿ ನಮ್ಮ ರೈತರಿಗೆ ಜೀವನಾಧಾರವಾಗಿ ಬರಬಹುದಾದ ಬೆಂಬಲ ಬೆಲೆ ಕೊಡಲೂ ಸರ್ಕಾರಕ್ಕೆ ಮನಸ್ಸಿಲ್ಲ. ಆಹಾರ ಧಾನ್ಯಗಳ ಅಕ್ರಮ ಸಂಗ್ರಹ ಮಾಡಿ, ಕೃತಕವಾಗಿ ಬೆಲೆ ಏರಿಸಿ ಜನರ ಜೀವ ಹಿಂಡುವ ಕಾರ್ಪೊರೇಟ್ ಕಂಪನಿಗಳ ದಾಸ್ತಾನು ಪತ್ತೆಹಚ್ಚಿ ಕ್ರಮಕೈಗೊಳ್ಳುವ ಇಚ್ಛಾಶಕ್ತಿಯೂ ಇಲ್ಲ.

ಆಸ್ಟ್ರೇಲಿಯಾದಿಂದಲೋ, ಅಮೆರಿಕಾದಿಂದಲೋ ಆಮದು ಮಾಡಿಕೊಂಡು ಬಿಡುವುದು ಬಹಳ ಸುಲಭ. ಯಾರ ಯಾರ ಬಾಯಿಗೆ ಎಷ್ಟೆಷ್ಟು ದಕ್ಕುತ್ತದೋ ಮುಕ್ಕುವವರಿಗೆ ಮಾತ್ರ ಹಬ್ಬ.

## ಹಗರಣದ ಕಮಟು ವಾಸನೆ

2007 ಮಾರ್ಚ್29 ರಂದು ಕೇಂದ್ರ ಸರ್ಕಾರದ ಮಂತ್ರಿಮಂಡಲದಲ್ಲಿ 5 ಮಿಲಿಯನ್ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳಲು ತೀರ್ಮಾನ ಮಾಡಲಾಗಿತ್ತು. ನಮ್ಮ ದೇಶದಲ್ಲಿ ಬೆಳೆಕೊಯ್ಲು ನಡೆಯುವುದೇ ಏಪ್ರಿಲ್ ಮಧ್ಯಭಾಗದ ನಂತರ.ಗೋಧಿ ಆಮದಿನ ಬಗೆಗೆ ತೀರ್ಮಾನಿಸಿದ್ದು ಯಾಕೆ, ಇಲ್ಲಿ ಏನು ನಡೆದಿದೆ.

ಏಪ್ರಿಲ್ 30ಕ್ಕೆ 10 ಲಕ್ಷ ಟನ್ ಗೋಧಿ ಆಮದಿಗೆ ಟೆಂಡರ್ ಕರೆಯುವ ಬಗೆಗೆ ತೀರ್ಮಾನಿಸಲಾಗಿದೆ. ಆದರೆ ಆ ಹಂತದಲ್ಲಿ 3.06 ಲಕ್ಷಟನ್ ಮಾತ್ರ ಆಮದು ಮಾಡಿಕೊಳ್ಳಲಾಗಿದೆ. ಕಾರಣ ಚಿಕಾಗೊ ಬೋರ್ಡ್ ಆಫ್ ಟ್ರೇಡ್ ಮತ್ತು ಆಹಾರ ಧಾನ್ಯಗಳ ಅಂತರ್‌ರಾಷ್ಟ್ರೀಯ ಮಂಡಳಿಯು ಗೋಧಿ ಬೆಲೆ ಕಡಿಮೆಯಾಗಬಹುದು ಎಂದು ನೀಡಿದ ಮಾಸಿಕ ವರದಿ ಆಧಾರದಲ್ಲಿ ಹೀಗೆ ಮಾಡಲಾಯಿತಂತೆ.

ಆದರೆ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿತು. ಅದು ನಿಜವಾಗಿಯೂ 'ಮುಕ್ತ' ಮಾರುಕಟ್ಟೆಯಾಗಿದಿದ್ದರೆ ಬೆಲೆ ಇಳಿಯುತ್ತಿತ್ತೇನೊ. ಆ ಮಾರುಕಟ್ಟೆಯ ಸ್ಟೇರಿಂಗ್ ಹಿಡಿದು ತಿರುಗಿಸುವವರು ಯಾರು? ನಮ್ಮನ್ನಾಳುವವರಿಗೆ ಗೊತ್ತಿಲ್ಲವೇ?. ಇಂತಹ ಮಾರುಕಟ್ಟೆಯನ್ನೆ ಅಲ್ಲೋಲ್ಲ ಕಲ್ಲೋಲ ಮಾಡುವ ತಿಮಿಂಗಲಗಳು ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಬಲಾಢ್ಯ ದೇಶಗಳ ರೂಪದಲ್ಲಿವೆ ಎಂಬುದು ಇವರಿಗೆ ತಿಳಿಯದೆ?

ಭಾರತ ಇನ್ನೂ ಭಾರಿ ಪ್ರಮಾಣದ ಗೋಧಿ ಖರೀದಿ ನಡೆಸಲಿದೆ ಎಂಬ ಕಾರಣಕ್ಕಾಗಿಯೇ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿ ಬೆಲೆ ಏರಿರಬಹುದು. ಅಂತೂ ಭಾರತ ಭಾರಿ ಬೆಲೆ ತೆತ್ತಿತ್ತು. ನಮ್ಮ ರೈತರಿಗೆ ಕೊಟ್ಟ ಬೆಲೆಗಿಂತ ಎರಡು ಪಟ್ಟು ಬೆಲೆ ಕೊಟ್ಟು ಭಾರೀ ಪ್ರಮಾಣದಲ್ಲಿ ಗೋಧಿ ತರಿಸಿಕೊಂಡಿದೆ. ಹೋಗಲಿ ಏಪ್ರಿಲ್-ಮೇ ನಲ್ಲಿ ಇದ್ದ ಬೆಲೆಯಲ್ಲಿ ಪೂರ್ಣ ಗೋಧಿಯನ್ನು ತರಿಸಿ ಕೊಂಡಿದ್ದರೆ ಕನಿಷ್ಠ 540 ಕೋಟಿ ರೂಪಾಯಿಗಳನ್ನು ಭಾರತ ಉಳಿಸಬಹುದಿತ್ತು ಎಂದು ತಜ್ಞರು ಲೆಕ್ಕ ಹಾಕಿದ್ದಾರೆ.

ಈ ವಿಳಂಬ ಆದದ್ದೇಕೆ? ಅಸಲಿಗೆ ಗೋಧಿಯನ್ನು ಆಮದು ಮಾಡಿಕೊಳ್ಳಬೇಕಾಗಿ ಬಂದ ಪರಿಸ್ಥಿತಿ ನಿರ್ಮಾಣಗೊಂಡಿದ್ದು ಯಾರಿಂದ. ಸರ್ಕಾರ ಏನಾದರೂ ಪ್ರಾಮಾಣಿಕ ಚಿಂತನೆ ನಡೆಸುವುದೆಂದು ನಿರೀಕ್ಷಿಸಬಹುದೇ? ಉಹುಂ.. ಅಂತಹ ಲಕ್ಷಣ ಕಾಣುತ್ತಿಲ್ಲ. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಈ ಬಗ್ಗೆ ಕೇಂದ್ರ ಕೃಷಿ ಸಚಿವ ಶರದ್ ಪವಾರ್ ಅವರಿಗೆ ವಿವರವಾದ ಪತ್ರ ಬರೆದು ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಸರ್ಕಾರ ಉತ್ತರಿಸಬಹುದೇ? ಕಾದು ನೋಡೋಣ.

ಈ ಒಟ್ಟು ವಿಚಾರದ ಬಗೆಗೆ ಒಂದು ಸಮಗ್ರ ತನಿಖೆ ಮಾಡಿದರೆ ಸತ್ಯ ಹೊರಬೀಳಬಹುದು. ದೇಶಕ್ಕೆ ಎಷ್ಟು ಸಾವಿರ ಕೋಟಿ ರೂ ನಷ್ಟವಾಗಿದೆ ಅಂತ. ಮತ್ತೊಂದು ವಿಷಯ ಈಗ ಹಿಂಗಾರು ಬೆಲೆ ಬರುತ್ತಿರುವಾಗಲಾದರೂ ಸರ್ಕಾರ ಗೋಧಿ ಖರೀದಿಗೆ ಸರಿಯಾದ ಕ್ರಮ ವಹಿಸಿದೆಯೇ? ಇಲ್ಲ ಎನ್ನುತ್ತಿವೆ ವರದಿಗಳು. ಏನಿದರ ಅರ್ಥ?




# ಗೋಧಿ ಬಾಧೆ....

ಗೋಧಿ ಎಂಬ ಜನರ ದಿನನಿತ್ಯದ ಆಹಾರ ತುಟ್ಟಿಯಾಗುತ್ತಲೇ ನಡೆದಿದೆ. ಜಗತ್ತಿನಾದ್ಯಂತ ಗೋಧಿಯ ಬೆಲೆ ಏರುತ್ತಿದೆ. ಅಮೇರಿಕದಲ್ಲಿ ಹತ್ತು ಕ್ವಿಂಟಾಲ್ ಗೋಧಿಗೆ ಆಗಸ್ಟ್ 2006 ರಲ್ಲಿ 194 ಡಾಲರುಗಳ ರೇಟ್ ಇದ್ದದ್ದು 2007ರ ಮಾರ್ಚ್‌ಯಲ್ಲಿ ಹತ್ತು ಕ್ವಿಂಟಾಲ್ ಗೋಧಿಗೆ (ಒಂದು ಟನ್) 340 ಡಾಲರುಗಳ ಬೆಲೆಯಿತ್ತು. ಅಂದರೆ ಬೆಲೆ ಏರಿಕೆಯ ತೀವ್ರತೆ ಅರ್ಥವಾಗುತ್ತದೆ.

ಕೇಂದ್ರದ ಯುಪಿಎ ಸರ್ಕಾರ ಭಾರತವೂ ಆಹಾರ ಧಾನ್ಯಗಳ ರಫ್ತುದಾರ ಎನಿಸಿಕೊಳ್ಳುವ ಉದಾರೀಕರಣದ ಹವಣಿಕೆಯಲ್ಲಿ ಗೋಧಿ ರಫ್ತು ಮಾಡುವ ನಿರ್ಧಾರ ಮಾಡಿತು. ಇದರಿಂದಾಗಿ ಗೋಧಿಯ ಲಭ್ಯತೆಯೇ ದೇಶದಲ್ಲಿ ಕಡಿಮೆಯಾದುದರಿಂದ ಗೋಧಿಯನ್ನು ಹೆಚ್ಚಿನ ದರದಲ್ಲಿ ಆಮದು ಮಾಡಿಕೊಳ್ಳುವ ಹುಚ್ಚು ನಿರ್ಧಾರವನ್ನು ಅದು ಮಾಡಿತು. ಉದಾರೀಕರಣದ ಈ ನಿರ್ಧಾರಗಳಿಂದ ಗೋಧಿಯ ಬೆಲೆ ಗಗನಕ್ಕೇರಿದ್ದಷ್ಟೇ ಅಲ್ಲ. ದೇಶದಲ್ಲಿ ಗೋಧಿ ಬೆಳೆಯ ರೈತರಿಗೆ ಹೆಚ್ಚಿನ ಬೆಂಬಲ ಬೆಲೆಯೂ ದೊರೆಯಲಿಲ್ಲ.

ಗೋಧಿಯ ಕೊರತೆ ಮುಂಬರುವ ದಿನಗಳಲ್ಲಿ ದೊಡ್ಡ ಬಿಕ್ಕಟ್ಟಾಗಿ ಪರಿಣಮಿಸಲೂಬಹುದು. ಯಾಕೆಂದರೆ ಜಗತ್ತಿನಾದ್ಯಂತ ಗೋಧಿಯ ಪರಿಸ್ಥಿತಿ ಚೆನ್ನಾಗಿಲ್ಲದೇ ಇರುವುದು.

ಭಾರತದಲ್ಲಿ ಹಿಂದೆ ಎನ್‌ಡಿಎ ಸರ್ಕಾರ ನಂತರ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಪಡಿತರ ವ್ಯವಸ್ಥೆಯನ್ನೇ ದುರ್ಬಲಗೊಳಿಸಿ ಬಿಟ್ಟಿದೆ. ಧಾನ್ಯ ದಾಸ್ತಾನನ್ನು ಅವಶ್ಯಕ ಪ್ರಮಾಣದಲ್ಲಿ ಮಾಡಿಡುವ ಹಿಂದಿನ ಸಂಪ್ರದಾಯವನ್ನೇ ಬಿಟ್ಟಿರುವ ಈ ಸರ್ಕಾರಗಳು ದೇಶದ ಆಹಾರ ಸುಭದ್ರತೆಯನ್ನು ಗಾಳಿಗೆ ತೂರಿಬಿಟ್ಟಿವೆ.

ಜಗತ್ತಿನಲ್ಲಿ ಅರ್ಜೆಂಟೈನಾ, ಯುರೋಪ್, ರಷ್ಯಾ, ಆಸ್ಟ್ರೇಲಿಯಾ, ಕೆನಡಾ ಮತ್ತು ಅಮೇರಿಕಾಗಳು ಜಗತ್ತಿನ ಗೋಧಿ ರಫ್ತಿನ ಶೇ.85ರಷ್ಟು ಪಾಲು ಹೊಂದಿವೆ. ವರ್ಷದ ಕೊನೆಯ ಜಾಗತಿಕ ದಾಸ್ತಾನು ಬರೀ 151 ದಶಲಕ್ಷ ಟನ್ನುಗಳಿಗೆ ಇಳಿದಿದೆ. ಈ ದಾಸ್ತಾನು 1999ರಲ್ಲಿ 209 ದಶಲಕ್ಷ ಟನ್‌ನ್ನು ಗಳಿಷ್ಟಿತ್ತು. ಜಗತ್ತಿನಾದ್ಯಂತ ಗೋಧಿಯ ಉತ್ಪಾದನೆ ಕಡಿಮೆ ಯಾಗಿರುವುದು ಇದಕ್ಕೆ ಕಾರಣ ಎನ್ನಲಾಗಿದೆ.

ಭಾರತ ಆಹಾರ ಧಾನ್ಯಗಳಲ್ಲಿ ಭವಿಷ್ಯ ವ್ಯಾಪಾರಕ್ಕೆ (ಫ್ಯೂಚರ್ ಟ್ರೇಡ್) ಅವಕಾಶ ನೀಡಿರುವುದು, ದಾಸ್ತಾನನ್ನು ಕಡಿಮೆ ಯಾಗಲೂ ಬಿಟ್ಟಿರುವುದು ಜಗತ್ತಿನಾದ್ಯಂತ ಗೋಧಿಯ ಕೊರತೆ ಇರುವುದು ಇವೆಲ್ಲ ಮುಂಬರುವ ದಿನಗಳಲ್ಲಿ ಕಾಳಸಂತೆ ವ್ಯವಹಾರಗಳಿಗೆ ಸಣ್ಣ ವ್ಯಾಪಾರಗಳಿಗೆ ಅವಕಾಶ ನೀಡಲಿದೆ.

ಆರ್ಥಿಕ ಬೆಳವಣಿಗೆ ಚೆನ್ನಾಗಿ ಆಗುತ್ತಿದೆ ಎಂಬ ನೆಪದಲ್ಲಿ ದೇಶದ ಜನ ಸಾಮಾನ್ಯರ ಸಮಸ್ಯೆಗಳಲ್ಲಿ ಒಂದಿಷ್ಟೂ ಗಮನ ನೀಡಿದೇ ಇರುವ ಸರ್ಕಾರ ದೇಶದ ಬಡ ಜನತೆಯನ್ನು ಬಹು ಕಷ್ಟದ ಪರಿಸ್ಥಿತಿಗಳಿಗೆ ಒಡ್ಡಲಿದೆ. ಕೊರತೆ ಬೆಲೆ ಏರಿಕೆ ಇತ್ಯಾದಿಗಳು ಮುಂಬರುವ ದಿನಗಳಲ್ಲಿ ಜನಸಾಮಾನ್ಯರನ್ನು ಕಾಡಲಿದೆ. ಕೇಂದ್ರದ ಯುಪಿಎ ಸರ್ಕಾರ ಜನರ ಈ ಸಮಸ್ಯೆಗಳತ್ತ ಗಮನಹರಿಸುವ ಕಾಳಜಿ ಹೊಂದಿದೆಯೇ?

④

ಏಕಪಕ್ಷದ ಅಧಿಪತ್ಯದ ಹಂತ, ಸರ್ಕಾರಗಳ ಬದಲಾವಣೆಯ ಹಂತ ಹಾದು ಈಗ ಸಮಿಶ್ರ ಸರ್ಕಾರಗಳ ಸಂದರ್ಭದಲ್ಲಿರುವ ಕರ್ನಾಟಕದ ರಾಜಕೀಯದ ಬೆಳವಣಿಗೆಗಳ ಹಿಂದಿನ ವರ್ಗ ಹಿತಾಸಕ್ತಿಗಳೇನು? ಈ ಬದಲಾವಣೆಗಳ ಹಿಂದಿನ ಚಾಲಕಶಕ್ತಿ ಯಾವುದು? ಒಂದು ವಿಮರ್ಶೆ.

ಜಿ.ಎನ್.ನಾಗರಾಜ್



# ಕರ್ನಾಟಕ: ರಾಜಕೀಯ ತಿರುವುಗಳು ಹಾಗೂ ಇಂದಿನ ರಾಜಕೀಯ ಕಚ್ಚಾಟ

ಕರ್ನಾಟಕದಲ್ಲಿ ಇಂದು ರಾಜ್ಯ ಸರ್ಕಾರವೆಂಬುದು ನಿರ್ವಾಣ ಸ್ಥಿತಿಯನ್ನು ತಲುಪಿದೆ. ಸರ್ಕಾರವೆಂಬುದು ಒಳಹೂರಣವಿಲ್ಲದ ಒಂದು ಹೊರ ಆಕಾರ ಮಾತ್ರವಾಗಿ ಪರಿಣಮಿಸಿದೆ. ಅದಕ್ಕೆ ಕಾರಣ ಸರ್ಕಾರವೆಂಬ ಆಕಾರಕ್ಕೆ ಹೂರಣವಾಗಿದ್ದ ಜೆಡಿ(ಎಸ್) ಮತ್ತು ಬಿಜೆಪಿಯ ನಡುವಣ ಸಂಬಂಧ ಹಳಸಿ ಆರಂಭದಿಂದಲೇ ಒಳಗೊಂಡಿದ್ದ ಒಡಕಿನ ಅಡಿಪಾಯ ಸಕಾರಣವಾಗಿಯೇ ಬಿರಿದುನಿಂತಿದೆ. ಈಗ್ಗೆ ನಾಲ್ಕು ತಿಂಗಳಿನಿಂದ ರಾಜ್ಯದ ದೇಶದ ಎಲ್ಲ ಸಮಸ್ಯೆಗಳಿಗಿಂತ ಇದೇ ಅತಿ ಪ್ರಮುಖ ಎನ್ನುವಂತೆ ಎಲ್ಲಾ ಮಾಧ್ಯಮ ಪತ್ರಿಕೆಗಳು ತಲೆಚಿಟ್ಟು ಹಿಡಿಸಿವೆ. ಜನಕ್ಕೆ ರೋಸಿಹೋಗುವಂತಾಗಿದೆ. ಜನರ ಬದುಕಿನ ನೈಜ ಸಮಸ್ಯೆಗಳು ಕೇಳುವವರು ದಿಕ್ಕಿಲ್ಲದೆ ಅನಾಥವಾಗಿವೆ. ಆದರೆ ವಿಪರ್ಯಾಸವೆಂದರೆ ಜನರ ಬದುಕಿನ ನೈಜ ಸಮಸ್ಯೆಗಳು ಅನಾಥ ಸ್ಥಿತಿಯಿಂದ ನಾಥ ಸ್ಥಿತಿಯನ್ನು ಅರಸಿ ಹೊರಟಿದ್ದೇ ಇಂದಿನ ಪರಿಸ್ಥಿತಿಯ ಬಿಕ್ಕಟ್ಟುಗಳ ಮೂಲ ಎಂಬುದು ಈ ಎಲ್ಲಾ ಚರ್ಚೆಗಳಲ್ಲಿ ಎಲ್ಲಿಯೂ ಕಾಣಬರುತ್ತಿಲ್ಲ. ಜನರ ನೈಜ ಸಮಸ್ಯೆಗಳಿಗೆ ಉತ್ತರ ಹುಡುಕುವುದೇ ರಾಜ್ಯ ರಾಜಕೀಯ ಹಿಡಿಯಬೇಕಾದ ದಾರಿಯ ಹುಡುಕಾಟದ ಏಕಮಾತ್ರ ದಿಕ್ಸೂಚಿ ಎಂಬ ಅರಿವು ತುರ್ತಾಗಿ ಮಾಡಬೇಕಾಗಿದೆ. ಜನರ ನಡುವೆ ಇದನ್ನು ಬೆಳೆಸಬೇಕಾಗಿದೆ.

**ಹುಡುಕಾಟದ ತೊಳಲಾಟ**

ಕರ್ನಾಟಕದ ರಾಜಕಾರಣ ಪಡೆದ, ಪಡೆಯುತ್ತಿರುವ ತಿರುವುಗಳು ಮತ್ತು ಅದಕ್ಕೆ ಕಾರಣವೇನು ಎಂಬ ಬಗೆಗಿನ ಮೂಲಭೂತ ವಿಶ್ಲೇಷಣೆಯಿಲ್ಲದ ಈ ಎಲ್ಲಾ ಮಾತಿನ ದೊಂಬರಾಟ ಕೇವಲ ಅಕ್ಷರ ವ್ಯಭಿಚಾರವಲ್ಲದೇ ಮತ್ತೇನೂ ಅಲ್ಲ. ಕರ್ನಾಟಕದ ರಾಜಕಾರಣ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಹಲವು ಪ್ರಮುಖ ಘಟ್ಟಗಳನ್ನು ಹಾದುಬಂದಿದೆ. ಈ ಎಲ್ಲಾ ತಿರುವುಗಳಿಗೂ ಕಾರಣಕರ್ತರು ಕರ್ನಾಟಕದ ಜನತೆ. ಜನರ ಸಮಸ್ಯೆಗಳಿಗೆ ನಿಜವಾದ ಪರಿಹಾರದ ಹುಡುಕಾಟದ ತೊಳಲಾಟವೇ ಈ ಎಲ್ಲ ತಿರುವುಗಳಿಗೂ ಅವರೇ ಕಾರಣಕರ್ತರು. ಜನರ ಸಮಸ್ಯೆಗಳಿಗೆ ನಿಜವಾದ ಪರಿಹಾರದ ಹುಡುಕಾಟದ ತೊಳಲಾಟವೇ ಈ ಎಲ್ಲಾ ತಿರುವುಗಳ ಚಾಲಕಶಕ್ತಿ.

**ಹಂತಗಳು**

ಮೇಲ್ನೋಟಕ್ಕೆ ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುವಂತೆ ಮೂರು ಹಂತಗಳನ್ನು ಗುರುತಿಸಬಹುದು.

1. 1947ರಿಂದ 1983ರವರೆಗೆ ಕಾಂಗ್ರೆಸ್‌ನ ಏಕಪಕ್ಷದ ಆಳ್ವಿಕೆ
2. 1983ರಿಂದ 2004ರವರೆಗೆ ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಅದಲುಬದಲು ಏಕಪಕ್ಷ ಆಡಳಿತ.
3. 2004ರಿಂದ ಆರಂಭವಾದ ಸಮಿಶ್ರ ಸರ್ಕಾರಗಳ ಕಾಲ



ಆದರೆ ಈ ಮೇಲ್ನೋಟಕ್ಕೆ ಕಾಣುವ ಈ ಹಂತಗಳ ಒಳಗೆ ಒಳಹಂತಗಳಿವೆ ಮತ್ತು ಅವುಗಳಲ್ಲಿ ಕೆಲವು ಕರ್ನಾಟಕದ ರಾಜಕೀಯದ ಮುಂದಿನ ದಿಕ್ಕನ್ನು ರೂಪಿಸುವಷ್ಟು ಪ್ರಧಾನವಾಗಿವೆ. ಉದಾಹರಣೆಗೆ 47ರಿಂದ 83ರವರೆಗಿನ ಕಾಂಗ್ರೆಸ್‌ನ ಏಕಪಕ್ಷ ಆಳ್ವಿಕೆಯಲ್ಲಿಯೇ 47ರಿಂದ 69ರವರೆಗಿನ ಪಾಳೆಯಗಾರಿ ಭೂಮಾಲಕ ಶಕ್ತಿಗಳು ಪ್ರಧಾನವಾಗಿದ್ದ ಮೇಲು ತೋರಿಕೆಗೆ ಲಿಂಗಾಯಿತ ಪ್ರಮುಖರ ಆಡಳಿತ ಎನ್ನುವಂತೆ ಕಾಣುತ್ತಿದ್ದ ಹಂತ. ಮುಂದಕ್ಕೆ ಹಿಂದುಳಿದ ಜಾತಿಗಳ ಹೆಸರಿನಲ್ಲಿ ದೇವರಾಜ ಅರಸರಿಂದ ಆರಂಭವಾದ ಉದೀಯಮಾನ ಬಂಡವಾಳಶಾಹಿ ಶಕ್ತಿಗಳು ಪ್ರಧಾನವಾದ ಮತ್ತು ಭೂಮಾಲಕ ಶಕ್ತಿಗಳು ಮರೆಯಲ್ಲಿರುವ ಹಂತ.

**ಮೇಲು ಹೊದಿಕೆ**

ಈ ಹಂತವೇ ಇನ್ನೂ ಮುಂದುವರೆದಿದೆ. ಬೇರೆ ಬೇರೆ ಪ್ರವೃತ್ತಿಗಳೊಡನೆ ಮತ್ತು ಬೇರೆ ಬೇರೆ ರೂಪಗಳಲ್ಲಿ ಉದೀಯಮಾನ ಬಂಡವಾಳಶಾಹಿ ಶಕ್ತಿಗಳು ಮತ್ತು ಅರೆ ಪಾಳೆಯಗಾರಿ ಭೂಮಾಲಕರು ಇವುಗಳ ನಡುವಣ ತಿಕ್ಕಾಟವೇ ಇಂದೂ ಕೂಡ ಪ್ರಧಾನವಾಗಿದೆ. ಜನತಾಪಕ್ಷ, ಜನತಾದಳಗಳ ಒಡಕಿಗೆ, ಕಾಂಗ್ರೆಸ್‌ನಲ್ಲಿ ವಿವಿಧ ಶಕ್ತಿ, ಬಣಗಳು ಮುನ್ನೆಲೆಗೆ ಬರುವುದಕ್ಕೆ ಅಥವಾ ಹಿಂದೆ ಸರಿಯುವುದಕ್ಕೆ ಕಾರಣವಾಗಿದೆ. ಬಿಜೆಪಿ ಮುನ್ನೆಲೆಗೆ ಬರುವುದಕ್ಕೆ ಬಿಜೆಪಿಯ ಒಳಗಡೆಯ ಗುಂಪುಗಳಿಗೆ ಕೂಡ ಈ ಎರಡೂ ವರ್ಗಗಳ ವಿವಿಧ ಕೂಟಗಳೇ ಕಾರಣ. ಉದಾಹರಣೆಗೆ ಬಿಜೆಪಿಯೊಳಗೆ ಕರಾವಳಿ ಘಟ್ಟ ಪ್ರದೇಶಗಳ ಅರೆಪಾಳೆಯಗಾರಿ ಅರೆ ಬಂಡವಾಳಶಾಹಿ ಅಡಕೆ, ಕಾಫಿ, ತೆಂಗಿನ ತೋಟಗಳ ಮಾಲೀಕರಿಗೂ, ಬೆಂಗಳೂರಿನ ಕಟ್ಟಾ, ಅಶೋಕ್ ಮೊದಲಾದ ಭೂ ದರೋಡೆಕೋರರಿಗೂ, ಬಳ್ಳಾರಿಯ ಭೂಮಿಯ ಅಂತರಂಗದ ದರೋಡೆಯಾದ ಗಣಿ ಬಂಡವಾಳಶಾಹಿಗಳಿಗೂ, ಬಿಜಾಪುರದ ಮಾಫಿಯಾ ಗುಣದ ಗುಂಪುಗಳಿಗೂ ಸಾಮಾನ್ಯ ಅಂಶವೇನು? 'ಕೋಮುವಾದಿ ರಾಜಕಾರಣ" ಎಂಬ ಮೇಲುಹೊದಿಕೆ ಇವರಲ್ಲಿ ಯಾರಿಗೆ ಯಾವ ಪ್ರಮಾಣದಲ್ಲಿ ಅಗತ್ಯವಾಗಿದೆ? ಅಧಿಕಾರಕ್ಕೆ ಹತ್ತಿರವಾಗಿರುವ ಪಕ್ಷ, ನಮ್ಮ ಲೂಟಿಗೆ ರಾಜಕೀಯ ರಕ್ಷಣೆ ಸಿಗುತ್ತದೆ ಎಂಬುದು ಎಷ್ಟರಮಟ್ಟಿಗೆ ಕಾರಣ?" ಹೀಗೆಯೇ ಕಾಂಗ್ರೆಸ್, ಜೆಡಿ(ಎಸ್)ನ ರಾಜ್ಯ ಘಟಕಗಳನ್ನೂ ವರ್ಣಿಸಬಹುದು.

ಹಿಂದೆ ಕಾಂಗ್ರೆಸ್ ಎಂಬ ಒಂದೇ ಪಕ್ಷದಡಿಯಲ್ಲಿಯೇ ತಮ್ಮ ಕುಕೃತ್ಯಗಳಿಗೆ ರಾಜಕೀಯ ರಕ್ಷಣೆ ಮತ್ತು ಅಧಿಕಾರದ ದುರುಪಯೋಗಗಳಿಂದ ಕರ್ನಾಟಕದಲ್ಲಿ ನಡೆದ ಕೈಗಾರಿಕಾ ಬೆಳವಣಿಗೆ ಮತ್ತು ಹಸಿರುಕ್ರಾಂತಿಯ ಲಾಭದ ಬಹುಭಾಗವನ್ನು ಲಪಟಾಯಿಸಿ ಕೊಬ್ಬಿ ಬೆಳೆದವು. ಎಲ್ಲರೂ ಕಾಂಗ್ರೆಸ್ ನೆರಳಿಗೇ ಇದ್ದು ತಮ್ಮ ಲೂಟಿಯನ್ನು

ಪುಟ 12 ಕ್ಕೆ

### ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳ ಫಲವಾದ ಬೀದಿಕಚ್ಚಾಟ

ಈ ಪೈಪೋಟಿಯಲ್ಲಿ ಜಾಗತೀಕರಣ, ಖಾಸಗೀಕರಣಗಳು ಪ್ರಧಾನ ಪಾತ್ರವಹಿಸಿವೆ. ವಿಶ್ವದ ಬಂಡವಾಳಶಾಹಿಗಳ ಲಗ್ಗೆ ಮತ್ತು ವಿಶ್ವ ಮಾರುಕಟ್ಟೆಯ ಲಭ್ಯತೆ, ರಿಯಲ್ ಎಸ್ಟೇಟ್ ಆಗಿ ಪರಿವರ್ತಿತವಾದ ಭೂಮಿ ಇವೆಲ್ಲವೂ ಈ ಲಾಭಕೋರ ಗುಂಪುಗಳ ಆಸೆಯನ್ನು ಹಲವು ಪಟ್ಟು ಹೆಚ್ಚಿಸಿವೆ. ರಾಜ್ಯ ಸರ್ಕಾರದ ಮೇಲಿನ ಹಿಡಿತದಿಂದ ತಮಗೆ ಸಿಗುವ ಕೊಳ್ಳೆ ಈ ಮೂರು ಆಳುವ ವರ್ಗಗಳ ಧನದಾಹ ಮೇರೆ ಮೀರುವಂತೆ ಮಾಡಿದೆ. ಬೀದಿನಾಯಿಗಳ ಕಚ್ಚಾಟದ ಸ್ವರೂಪಕ್ಕೆ ಇಳಿಸಿದೆ. ಸಾರ್ವಜನಿಕ ರಂಗವೆಂಬುದು ಭ್ರಷ್ಟಾಚಾರಕ್ಕೆ, ಅದಕ್ಷತೆಗೆ ಕಾರಣ ಎನ್ನುತ್ತಿದ್ದ ಪತ್ರಿಕೆಗಳು, ಹಲವು ಅರ್ಥ ತಜ್ಞರಿಗೆ. ಈ ಬೀದಿನಾಯಿಗಳ ಬೌ ಬೌ ಬೊಗುಳದಂತೆ ಕೇಳಿಸುತ್ತಿರಬಹುದು. ಅದಕ್ಕಾಗಿಯೇ ಖಾಸಗೀ ಬಂಡವಾಳಶಾಹಿಗಳ ಕೈಯಲ್ಲಿ ಅರ್ಥವ್ಯವಸ್ಥೆ ಸಿಕ್ಕರೆ ಆಗುತ್ತಿರುವ ಈ ಅದ್ವಾನಗಳ ಬಗ್ಗೆ ಅವರು ಬಾಯಿ ಮುಚ್ಚಿಕೊಂಡಿದ್ದಾರೆ. ಆದರೆ ಕರ್ನಾಟಕದ ಜನತೆಗೆ ಈ ಬೌ ಬೌ ಬೀದಿರಂಪದಲ್ಲಿ ನೆಮ್ಮದಿಯಿಲ್ಲದಂತಾಗಿದೆ. ಅವರ ಸಮಸ್ಯೆಗಳು ಮತ್ತಷ್ಟು ಬಿಗಡಾಯಿಸಿವೆ.

## ಜನಶಕ್ತಿಯ ಬೆಳವಣಿಗೆಯೇ ಬಿಡುಗಡೆಯ ದಾರಿ

ಕರ್ನಾಟಕದ ರಾಜಕೀಯದ ತಿರುವುಗಳ ಎಲ್ಲ ಹಂತಗಳಲ್ಲಿ ಜನತೆಯೇ ಚಾಲಕ ಶಕ್ತಿಯಾಗಿರುವುದನ್ನು, ವ್ಯಕ್ತಿಗಳು, ಗುಂಪುಗಳು ಅಲ್ಲ ಎನ್ನುವುದನ್ನು ಸ್ವಲ್ಪ ಆಸಕ್ತಿಯಿರುವ ಯಾರಾದರೂ ಕಂಡುಕೊಳ್ಳಬಹುದು. 1967ರಲ್ಲಿ ಭಾರತದಲ್ಲಿ 8 ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ದಯನೀಯವಾಗಿ ಸೋಲಿಸುವ ಮೂಲಕ, ಕರ್ನಾಟಕದಲ್ಲಿಯೂ ಕಾಂಗ್ರೆಸ್‌ಗೆ ಅತ್ಯಂತ ಕಡಿಮೆ ಬಹುಮತವನ್ನು ನೀಡುವ ಮೂಲಕ ಕಾಂಗ್ರೆಸ್ ಒಡೆಯಲು ಮತ್ತು ಗರೀಬಿ ಹಟಾವೋ, ಭೂಸುಧಾರಣೆ, ಬ್ಯಾಂಕ್ ರಾಷ್ಟ್ರೀಕರಣ ಮೊದಲಾದ ನೀತಿಗಳ ಒತ್ತಡವನ್ನು ಹೇರಿದ್ದು ಜನತೆಯೇ. ಹೀಗಾಗಿ ದೇವರಾಜ ಅರಸರು ಕೆಲ ಶಾಸಕರನ್ನು ಸೇರಿಸಿಕೊಂಡು ವೀರೇಂದ್ರ ಪಾಟೀಲರ ಸರ್ಕಾರವನ್ನು ಬೀಳಿಸುವುದು ಸುಲಭವಾಯಿತು. ಇನ್ನು 1983ರ ತಿರುವಿಗೆ ಪ್ರಥಮ ಬಾರಿಗೆ ಕಾಂಗ್ರೆಸ್ ಸೋಲುವುದಕ್ಕೆ ಕಾರಣವಾದದ್ದು ಜನತೆಯೇ ಜನ ಚಳುವಳಿಗಳೇ ಎಂಬುದಕ್ಕೆ ಹೆಚ್ಚು ವಿವರಣೆ ಬೇಕಾಗಿಲ್ಲ. ಆ ಸಂದರ್ಭ 1980ರಲ್ಲಿ ಆರಂಭವಾದ ಗುಂಡೂರಾಯರ ಗುಂಡಿನಾಳ್ವಿಕೆ ವಿರುದ್ಧ ರೈತ ಚಳುವಳಿ, ಕಾರ್ಮಿಕ ಚಳುವಳಿ, ಭಾಷಾ ಚಳುವಳಿ, ದಲಿತ ಚಳುವಳಿಗಳ ಸಮುದಾಯ, ಬಂಡಾಯಗಳೆಂಬ ಸಾಂಸ್ಕೃತಿಕ ಚಳುವಳಿಗಳ ಜಾಗಟೆ, ತಮಟೆ, ಭೇರಿ ಕೊಂಬು, ಕಹಳೆಗಳ ನಿನಾದ, ಇನ್ನೂ ಅನೇಕರ ನೆನಪಿನಲ್ಲಿ ಉಳಿದಿವೆ. ಈ ಐದು ರೂಪದ ಚಳುವಳಿಗಳಲ್ಲಿಯೂ ಭಾಗವಹಿಸದೆ ದೂರ ಉಳಿದಿದ್ದ ಜನತಾ ಪಕ್ಷವನ್ನು ಜನತಾರಂಗದ ಭಾಗವಾಗಿ ಈ ಅಲೆಯ ಮೇಲೆ ಅಧಿಕಾರದ ಗದ್ದುಗೆಯ ಮೇಲೆ ಕುಳ್ಳಿರಿಸಿದ್ದು, ಯಾರಾದರೂ ಪಕ್ಷಾಂತರ ಮಾಡೀರಿ ಜೋಕೆ ಎಂದು ಗರ್ಜಿಸಿ ಆ ಸರ್ಕಾರವನ್ನು ಉಳಿಸಿದ್ದು, ಕಾಂಗ್ರೆಸ್ ನಿರಂತರ ಆಳ್ವಿಕೆಯನ್ನು ಇತಿಹಾಸದ ಕಸದಬುಟ್ಟಿಗೆ ಸೇರಿಸುವ ಮೂಲಕ ಜನತೆಯೇ ಚಾಲಕಶಕ್ತಿ ಎಂದು ನಿರೂಪಿಸಿದ್ದು ಸ್ಪಟಿಕದಷ್ಟು ಸ್ಪಷ್ಟ.

ಎರಡೂ ಪಕ್ಷಗಳ ಆಳ್ವಿಕೆಯಿಂದ, ಜಾಗತೀಕರಣದಿಂದ ಅತೃಪ್ತಿಕೊಂಡರೂ ಕೂಡ ಕೋಮುವಾದಿಕರಣದ ವಿರುದ್ಧ, ಕೋಮುದಂಗೆಗಳ ವಿರುದ್ಧ ನಿರಂತರವಾಗಿ ದನಿ ಎತ್ತುತ್ತಾ ಬಂದಿರುವುದು, ಬಿಜೆಪಿಗೆ ಮೂರು ಭಾರಿ ಅಧಿಕಾರದಿಂದ ದೂರ ಇಟ್ಟಿರುವುದೂ ಕರ್ನಾಟಕದ ಜನತೆಯೇ. ಹೀಗೆ ಸಮಿಶ್ರ ಸರ್ಕಾರಗಳ ಹಂತಕ್ಕೆ ನಾಂದಿ ಹಾಡಿದ್ದು ಕರ್ನಾಟಕದ ಜನತೆಯೇ.

ಜನತೆ ತಮ್ಮ ಸಮಸ್ಯೆಗಳ ಪರಿಹಾರವನ್ನು ಕಂಡುಕೊಳ್ಳಲು ಕಾಂಗ್ರೆಸ್‌ನ ಸ್ವರೂಪ ಬದಲಾಯಿಸಲು ಒತ್ತಡ ಹೇರಿತು. ಅದರಿಂದ ಅಲ್ಲಿ ಪ್ರಯೋಜನ ದೊರೆತರೂ ಕೂಡ ತಮ್ಮ ಸಮಸ್ಯೆಗಳು ಪರಿಹಾರ ಕಾಣದಿದ್ದರಿಂದಲೇ ಮೂರು ಪಕ್ಷಗಳಿಗೂ ಅಧಿಕಾರ ನೀಡದೆ ಸಮಿಶ್ರ ಸರಕಾರಗಳನ್ನು ಹೇರಿದೆ. ಹೀಗೆ ಕರ್ನಾಟಕದ ಜನತೆ ಭಾರತದ ಜನತೆಯ ಭಾಗವಾಗಿ, ತಮ್ಮ ಸಮಸ್ಯೆಗಳ ಪರಿಹಾರದ ದಾರಿಯಲ್ಲಿ ರಾಜಕೀಯ ಪ್ರಯೋಗಗಳನ್ನು ನಡೆಸಿದೆ. ತಮ್ಮ ಅನುಭವದಿಂದ ಸರಿಯಾದ ದಾರಿಯನ್ನು ರೂಪಿಸಿಕೊಳ್ಳಲು ಹೆಣಗುತ್ತಿದೆ. ಈ ತಡಕಾಟದ ದಿಕ್ಕು ದೆಸೆಗಳನ್ನು ಹಾಗೂ ಅದರ ಹಿಂದಿನ ಮರ್ಮವನ್ನು ಜನರಿಗೆ ವಿವರಿಸುತ್ತಾ ಅವರ ಅನುಭವ ಅವರ ಅರಿವಿನ ಭಾಗವಾಗಲು ಶ್ರಮಿಸಬೇಕು. ಜನರ ಈ ಅನ್ವೇಷಣಾ ಜನ ಚಳುವಳಿಗಳಾಗಿ ರೂಪುಗೊಂಡು ಅದು ಆಗಿಂದಾಗ್ಗೆ ಸಿಡಿದೇಳುವ ಅಪರೂಪದ ಕ್ರಿಯೆಯಾಗದೆ ನಿರಂತರವಾಗುವಂತೆ ಜನಸಂಘಟನೆಗಳಾಗಿ ರೂಪುಗೊಳ್ಳುವಂತೆ ಶ್ರಮಿಸಬೇಕು. ಜನರದ್ದೇ ರಾಜಕೀಯ ಶಕ್ತಿ ದೃಢವಾಗಿ ಗಟ್ಟಿಯಾಗಿ ರೂಪುಗೊಳ್ಳಬೇಕು. ರಾಜಕೀಯ ಪ್ರಕ್ರಿಯೆಯನ್ನು ನಿರಂತರವಾಗಿ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವಂತಾಗಬೇಕು. ಜನಶಕ್ತಿಯ ಎಚ್ಚರವೇ ಕರ್ನಾಟಕದ ರಾಜಕೀಯ ಗೊಂದಲಗಳಿಂದ ಬಿಡುಗಡೆಯ ಹಾದಿ.



**ಇತ್ತೀಚೆಗೆ ಗದಗ ಜಿಲ್ಲೆಯ ಜನರ ಬದುಕನ್ನು ಕೊಚ್ಚಿ ಹಾಕಿದ ಪ್ರವಾಹದ ಭೀಕರತೆ. ಜನರ ಸಂಕಟಗಳ ಒಂದು ಸಚಿತ್ರ - ಪ್ರತ್ಯಕ್ಷ ವರದಿ.**



# ನೆರೆ ಹಾವಳಿಗೆ ನಲುಗಿದ ಜನತೆ

ಬಿ.ಎಸ್.ಸೂಪ್ಪಿನ್

ನರಗುಂದ ತಾಲ್ಲೂಕಿನ ರಡ್ಡೇರನಾಗನೂರು ಹಾಗೂ ನವಲಗುಂದ ತಾಲ್ಲೂಕಿನ ಆರಟ್ಟಿ ಗ್ರಾಮಗಳು ಜನರ ಗಮನ ಸೆಳೆದವು. ಕಾರಣ ಇಷ್ಟೆ ಕಳೆದ ತಿಂಗಳು ಸುರಿದ ಭಾರಿ ಮಳೆಗೆ ಬೆಣ್ಣೆ ಹಳ್ಳಕ್ಕೆ ನೆರೆ ಬಂದು ಈ ಗ್ರಾಮಗಳು ಜಲಾವೃತಗೊಂಡವು(ಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡಿದ್ದ ಜನರನ್ನು ಪಾರು ಮಾಡಲು ಹೆಲಿಕ್ಯಾಪ್ಟರ್ ಹಾಗು ಸ್ವಯಂ ಚಾಲಿತ ದೋಣಿಗಳನ್ನು ಬಳಸಬೇಕಾಯಿತು. ಅದೊಂದು ಮೈನವಿರೇಳಿಸುವ ಘಟನೆಯೆ ಸರಿ. ಸೆಪ್ಟೆಂಬರ್ 18 ಮತ್ತು 19 ರಂದು ಮಳೆ ನಿರಂತರ ಸುರಿಯಿತು. ಹಾಗೆ ನೋಡಿದರೆ ಈ ವರ್ಷ ಮಳೆ ಕಳೆದ ವರ್ಷಕ್ಕಿಂತ ಹೆಚ್ಚಿ ಆಗಿದೆ.

ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಹರಿಯುವ ಹಳ್ಳಗಳಲ್ಲಿ ಬೆಣ್ಣೆ ಹಳಕ್ಕೆ ಅಗ್ರಸ್ಥಾನವಿದೆ. ಹೆಚ್ಚು ಕಡಿಮೆ ಒಂದು ನದಿ ಸ್ಥಾನವನ್ನೇ ಹೊಂದಿದಂತಿದೆ. ಅದು ಉಕ್ಕಿ ಹರಿದಾಗಲೆಲ್ಲಾ ಬೆಳೆ ಹಾನಿ, ಆಸ್ತಿ ಹಾನಿ, ಜೀವಹಾನಿಯಾದ ಬಗ್ಗೆ ದಾಖಲೆಗಳೇ ಇವೆ. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ ಹುಟ್ಟಿ, ಹುಬ್ಬಳ್ಳಿ ತಾಲ್ಲೂಕಿನಲ್ಲಿ ಹರಿದು ಮುಂದೆ ಸಾಗಿದೆ. ನವಲಗುಂದ ತಾಲ್ಲೂಕಿನಲ್ಲಿ ಹರಿಯುವಾಗ ನವಲಗುಂದ ಹತ್ತಿರ ತುಪ್ಪರಿ ಹಳ್ಳ ಎಂಬ ಹೆಸರಿನ ಇನ್ನೊಂದು ದೊಡ್ಡಹಳ್ಳ ಬೆಣ್ಣೆ ಹಳ್ಳವನ್ನು ಸೇರಿದಾಗ


ನೆರೆ ಹೊತ್ತೊಯ್ದ ಉಳ್ಳಾಗಡ್ಡಿ ಬೆಳೆ

ಇದರ ಹರಿವು ವಿಶಾಲವಾಗುತ್ತದೆ ಮತ್ತು ನೀರಿನ ಪ್ರಮಾಣವೂ ಹೆಚ್ಚಾಗುತ್ತದೆ. ಅಂತಿಮವಾಗಿ ಬೆಣ್ಣೆ ಹಳ್ಳ ಮಲಪ್ರಭಾ ನದಿಯನ್ನು ರೋಣ ತಾಲ್ಲೂಕಿನ ಮೆಣಸಿನ ಗ್ರಾಮದ ಹತ್ತಿರ ಕೂಡಿಕೊಳ್ಳುತ್ತದೆ.

ಬೆಣ್ಣೆ ಹಳ್ಳಕ್ಕೆ ನೆರೆ ಬಂದಾಗಲೆಲ್ಲಾ ಅದರ ದಂಡೆ ಮೇಲಿರುವ ಗ್ರಾಮಗಳ ಜನರು ಅಪಾಯವನ್ನು ನಿರೀಕ್ಷಿಸಿರುತ್ತಾರೆ. ಅಷ್ಟಿಷ್ಟು ಬೆಳೆ ಹಾನಿಯನ್ನು ಅನುಭವಿಸಿರುತ್ತಾರೆ. ಆದರೆ ಈ ವರ್ಷ ಹಳ್ಳ ತನ್ನ ಅಟ್ಟಹಾಸವನ್ನು ಮೆರೆಯಿತು. ಈ ವರ್ಷ ಬಂದಷ್ಟು ನೆರೆ ಕಳೆದ 70-80 ವರ್ಷಗಳಲ್ಲಿ ಯಾವತ್ತೂ ಬಂದಿಲ್ಲ ಎಂಬುದು ವಯೋವೃದ್ಧರ ಅಭಿಪ್ರಾಯವಾಗಿದೆ.

ಈ ಪ್ರದೇಶವು ಕಪ್ಪು ಮಣ್ಣಿನ ಭೂಮಿಯನ್ನು ಹೊಂದಿದ್ದು ಅತಿ ಮಳೆಗೆ ಈರುಳ್ಳಿ, ಮೆಣಸಿನಕಾಯಿ, ದ್ವಿದಳ ಧಾನ್ಯ, ಸೋಯಾಬಿನ ಮುಂತಾದ ಬೆಳೆಗಳು ಕೊಳೆತು ನಾಶವಾಗುವುದು ಸಹಜ. ಅಂತಹ ಪರಿಸ್ಥಿತಿ ಈಗ ನಿರ್ಮಾಣವಾಗಿದ್ದು, ಪ್ರಸ್ತುತ ಲೇಖನದಲ್ಲಿ ಬೆಣ್ಣೆ ಹಳ್ಳದ ನೆರೆಗೆ ಉಂಟಾದ ಆಸ್ತಿ, ಬೆಳೆ ಹಾಗೂ ಜೀವ ಹಾನಿ ಕುರಿತು ಪ್ರಸ್ತಾಪಿಸಲಾಗಿದೆ.

ನವಲಗುಂದ ತಾಲ್ಲೂಕಿನ ಗುಡಿನಾಗರ, ಸೊಟಕನಾಶ, ಅಮರಗೋಳ ಆರಟ್ಟಿ, ತಡಹಾಳ, ಕೋಗವಾಡ ಕಡದಳ್ಳಿ ಗ್ರಾಮಗಳು ನೆರೆಯಿಂದ ಸಂಕಷ್ಟಕ್ಕೆ ಸಿಲುಕಿದವು. ನರಗುಂದ ತಾಲ್ಲೂಕಿನ ಹದ್ಲಿ, ಗಂಗಾಪುರ ಬಾಣಪೂರ, ಹಡಗಲಿ, ರಡ್ಡೇರನಾಗನೂರ ಹೀಗೆ 17 ಗ್ರಾಮಗಳು ಬಾಧೆಗೆ ಒಳಗಾದವು. ಮಲಪ್ರಭಾ ನದಿಗೆ ಬಂದ ಮಹಾಪೂರದಿಂದ ರೋಣ ತಾಲ್ಲೂಕಿನ ಅನೇಕ ಗ್ರಾಮಗಳು ಜಲಾವೃತಗೊಂಡವು.

**ಆಸ್ತಿಪಾಸ್ತಿ ಹಾನಿ**

ಸತತ ಸುರಿದ ಮೇಲೆ ಹಾಗೂ ನೆರೆ ಹಾವಳಿಯಿಂದ ಅಪಾರ ಪ್ರಮಾಣದ ಆಸ್ತಿ ಹಾಗೂ ಬೆಳೆ ಹಾನಿ ಆಗಿದೆ. ಮೂರು ಜನರು ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಸಾಮಾನ್ಯವಾಗಿ ಇಲ್ಲಿಯ ಮನೆಗಳು ಕಲ್ಲುಮಣ್ಣಿನಿಂದ ನಿರ್ಮಾಣಗೊಂಡಂತವುಗಳು ನೂರಾರು ವರ್ಷಗಳ ಹಳೆಯವು. ಭಾರಿ ಮಳೆಗೆ ಸಂಪೂರ್ಣ ಇಲ್ಲವೇ ಹೆಚ್ಚಿನ ಸಂಖ್ಯೆಯ ಮನೆಗಳೆಲ್ಲ ಸೋರಿಕೆಯಾಗಿ ಜನರು ಗುಡಿಗುಂಡಾರು, ಶಾಲೆಗಳಲ್ಲಿ ಆಶ್ರಯ ಪಡೆದದ್ದು ಸಾಮಾನ್ಯ ನೋಟ. ನವಲಗುಂದ ತಾಲ್ಲೂಕಿನಲ್ಲಿ 6751 ಮನೆಗಳು ನಾಶವಾಗಿವೆ. ಅವುಗಳಲ್ಲಿ 400 ಮನೆಗಳು ಸಂಪೂರ್ಣ ನೆಲ ಕಚ್ಚಿವೆ. ನರಗುಂದ ತಾಲ್ಲೂಕಿನಲ್ಲಿ ಒಟ್ಟು 3914 ಮನೆಗಳು ನಾಶವಾಗಿದ್ದು ಅವುಗಳಲ್ಲಿ 750 ಮನೆಗಳು ಪೂರ್ಣ ಬಿದ್ದಿವೆ.

**ಬೆಳೆ ಹಾನಿ**

ಬೆಣ್ಣೆ ಹಳ್ಳದಿಂದ ಉಂಟಾದ ನೆರೆ ಹಾವಳಿಗೆ ಸಾಕಷ್ಟು ಬೆಳೆ ಹಾನಿಯಾಗಿದೆ. ಮುಂಗಾರು ಬೆಳೆಗಳಾದ ಈರುಳ್ಳಿ, ಮೆಕ್ಕೆಜೋಳ, ಮೆಣಸಿನಕಾಯಿ. ಬೆಳೆಗಳು ನೆರೆಗೆ ಕೊಚ್ಚಿ ಹೋಗಿವೆ. ಬೆಣ್ಣೆ ಹಳ್ಳ ಹಾಗೂ ತುಪ್ಪರಿ ಹಳ್ಳಗಳ ದಂಡೆ ಮೇಲಿರುವ ನೂರಾರು ರೈತರ ಪಂಪಸೆಟ್ಟುಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ.


ಕೊಚ್ಚಿಹೋದ ಡಾಂಬರು ರಸ್ತೆ

**ಪರಿಹಾರ**

ಭಾರಿ ಮಳೆಯಿಂದ ತೊಂದರೆಗೆ ಸಿಲುಕಿದ ಜನರಿಗೆ ಮೊದಲು ಪರಿಹಾರ ಸಿಗಬೇಕು. ಜಿಲ್ಲಾಡಳಿತ ಅಲ್ಲಲ್ಲಿ ಗಂಜಿ ಕೇಂದ್ರಗಳನ್ನು ತೆರೆದು ತೊಂದರೆಗೆ ಸಿಲುಕಿದವರ ನೆರವಿಗೆ ಬಂದಿದೆ. ಪ್ರವಾಹದಲ್ಲಿ ಸಿಲುಕಿದವರನ್ನು ಕಾಪಾಡಲು ಹೆಲಿಕ್ಯಾಪ್ಟರ್ ಹಾಗೂ ಯಾಂತ್ರಿಕೃತ ದೋಣಿ ಬಳಸಿ ಜನರನ್ನು ರಕ್ಷಿಸಲಾಗಿದೆ. ನಿರಾಶ್ರಿತರಿಗೆ ರಗ್ಗು, ಹಾಸಿಗೆಗಳ ಹಂಚಿಕೆ ಮಾಡಲಾಗಿದೆ. ಇದಕ್ಕಾಗಿ ಜಿಲ್ಲಾಡಳಿತ ಅಭಿನಂದನಾರ್ಹ. ಆದರೆ ಘೋಷಿಸಿದ ಪರಿಹಾರ ಮೊತ್ತ ಕಡಿಮೆ ಎಂದು ಹೇಳದೆ ಇರಲು ಸಾಧ್ಯವಿಲ್ಲ. ಒಂದು ಮಾಹಿತಿ ಪ್ರಕಾರ ನವಲಗುಂದ ತಾಲ್ಲೂಕಿನಲ್ಲಿ ಸಂಪೂರ್ಣ ನಾಶವಾದ ಮನೆಗಳಿಗೆ ಪ್ರತಿ ಮನೆಗೆ 10 ಸಾವಿರ, ತೀವ್ರ ಹಾನಿ ಆದ ಪ್ರತಿ ಮನೆಗೆ 2.5 ಸಾವಿರ ಹಾಗೂ ಭಾಗಶಃ ಹಾನಿಗೆ 1500.00 ರೂ.ಕೊಡಲು ನಿಗದಿಯಾಗಿದೆ. ಈ ಮೊತ್ತ ತೀರಾ ಕಡಿಮೆ. ಸಂಪೂರ್ಣ ನೆಲಕಚ್ಚಿದ ಒಂದು ಮನೆಯನ್ನು ಪುನರ್ ನಿರ್ಮಿಸಲು 10 ಸಾವಿರ ಏನೂ ಸಾಲದು. ಈ ಮೊತ್ತ ಖಂಡಿತ ಏರಿಕೆಯಾಗಬೇಕು. ಅಲ್ಲದೇ ನರಗುಂದ ತಾಲ್ಲೂಕಿನಲ್ಲಿ ಪರಿಹಾರ ಹಂಚಿಕೆ ಕುರಿತ ಇನ್ನೂ ಒಂದು ಸ್ಪಷ್ಟ ಚಿತ್ರವೆ ಮೂಡಿದಂತಿಲ್ಲ. ರೋಣ ತಾಲ್ಲೂಕಿನ ಹೊಳೆಮಣ್ಣೂರು, ಗಾರವಾಡ ಗ್ರಾಮಗಳ ಬಡವರು, ಕೃಷಿ ಕೂಲಿಕಾರರು ಇನ್ನೂ ರಸ್ತೆ ಬದಿ ಮೇಲೆ ತಟ್ಟಿ ಗುಡಿಸಲು ಹಾಕಿಕೊಂಡು ಜೀವನ ನೂಕುತ್ತಿದ್ದಾರೆ. ಯಾವ ಗಂಜಿ ಕೇಂದ್ರವೂ ಅಲ್ಲಿ ಈಗ ಇಲ್ಲ. ಸರ್ಕಾರ ನೀಡಿದ ಹಾಸು ಹೊದಿಕೆಗಳ ವಿತರಣೆಯೂ ಸಮರ್ಪಕವಾಗಿ ನ್ಯಾಯಯುತವಾಗಿ ಆಗಿಲ್ಲ. ಅವರು ಪುನರ್ ವಸತಿಗೆ ಏನೂ ಕ್ರಮ ಕೈಕೊಂಡಂತಿಲ್ಲ. ಅಲ್ಲಿ ಆಶ್ರಯ ಪಡೆದವರ ಅದರಲ್ಲೂ ಕೃಷಿ ಕೂಲಿಕಾರರ ಬದುಕು ಅತಿ ನಿಕೃಷ್ಟವಾಗಿದೆ. ಕೃಷಿ ಕೂಲಿಕಾರರಿಗೆ ಊರಲ್ಲಿ ಸ್ವಂತ ಮನೆಯಿಲ್ಲ. ಬಾಡಿಗೆಗೆ ತೆಗೆದುಕೊಂಡ ಮನೆಗಳು ನೆರೆಹಾವಳಿಗೆ ನೆಲಕಚ್ಚಿವೆ. ಹೀಗಾಗಿ ಇವರ ಬದುಕು ಬಯಲು ಆಗಿದೆ.


ಕುಸಿದ ರಸ್ತೆ ಉರುಳಿದ ಲಾರಿ

ಸಾವಿರಾರು ಎಕರೆ ಭೂಮಿಯಲ್ಲಿ ಬೆಳೆ ನಾಶವಾಗಿದೆ. ಬೆಳೆ ನಾಶಕ್ಕೆ ಸೂಕ್ತ ಪರಿಹಾರಕ್ಕೆ ಸರ್ಕಾರ ಯಾವುದೇ ಸಿದ್ದತೆ ಮಾಡಿದಂತೆ ಇಲ್ಲಿ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಚಿಕ್ಕ ಅತಿ ಚಿಕ್ಕ ರೈತರ ಬೆಳೆ ಹಾನಿಗೆ ಪ್ರತಿ ಹೆಕ್ಟೇರಿಗೆ 2000 ನೀಡಲಾಗುವುದೆಂದು ಎಲ್ಲ ರೈತರಿಗೂ ಈ ಪರಿಹಾರ ನೀಡುವ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ.

ಹಳ್ಳದ ದಂಡೆಯ ಮೇಲಿರುವ ಪಂಪ್‌ಸೆಟ್‌ಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ. ಈ ಹಾನಿಯನ್ನು ತುಂಬಿಕೊಡುವ ಬಗ್ಗೆ ಯಾವುದೇ ನಿರ್ಧಾರ ಆಗಿಲ್ಲ.

ಒಟ್ಟಾರೆ ಈ ಪ್ರದೇಶ ವರುಣನ ಅವಕೃಪೆಗೆ ಒಳಗಾಯಿತು. ಜನತೆ ಕಂಗಾಲಾಗಿದೆ. ಇದೆ ಸಮಯಕ್ಕೆ ಬಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ಅಧಿಕಾರಿಗಳ ಹಾಗೂ ಜನ ಪ್ರತಿ ನಿರ್ಧಾರ ಸಮಯ ಗಮನವನ್ನು ಅತ್ತ ಸೆಳೆಯಿತು. ಅಧಿಕಾರ ಹಸ್ತಾಂತರ ವಿಷಯವಂತೂ ಜನರಲ್ಲಿ ಜಿಗುಪ್ಸೆ ಉಂಟು ಮಾಡಿದೆ. ಇದೆಲ್ಲದರ ಪರಿಣಾಮ ತ್ವರಿತವಾಗಿ ಆಗಬೇಕಾದ ಪರಿಹಾರ ಕಾರ್ಯಗಳು ಬದಿಗೆ ತಳ್ಳಲ್ಪಟ್ಟಿವೆ. ಈಗಲಾದರೂ ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಪರಿಹಾರಕ್ಕೆ ಆದ್ಯತೆ ನೀಡಿ ಕೆಲಸ ಮಾಡದೆ ಹೋದರೆ, ಪರಿಹಾರ ಮರೀಚಿಕೆ ಆಗುವ ಭಾವನೆ ಜನರಲ್ಲಿ ಮೂಡಿದರೆ ಜನರು ಪ್ರತಿಭಟನೆಯ ಹಾದಿ ಹಿಡಿಯೋದು ಮಾತ್ರ ಖರೆ.

*

## ಜೀವ ರಕ್ಷಿಸಲು ಹೋದ ಜೀವ ಕಳೆದುಕೊಂಡ...

ನರಗುಂದ ತಾಲ್ಲೂಕಿನ ರಡ್ಡೇರನಾಗನೂರ ಗ್ರಾಮ ಜಲಾವೃತವಾದಾಗ ಸುಮಾರು 40 ಜನ ಕೂಲಿಕಾರರು ಗಂಡಸರು, ಹೆಂಗಸರು ಹಾಗೂ ಮಕ್ಕಳು ಸೇರಿ ಅಪಾಯದಲ್ಲಿ ಸಿಲುಕಿದರು.ಅವರ ನೆರವಿಗೆ ಬೆಳಗಾವಿ ಜಿಲ್ಲೆಯಿಂದ ಯಂತ್ರಿಕೃತ ದೋಣಿ ಹಾಗೂ ಹೆಲಿಕ್ಯಾಪ್ಟರ್‌ಗಳು ಬಳಕೆಯಾಗಬೇಕಾಯಿತು. ಜನರೇನೂ ಸುರಕ್ಷಿತವಾಗಿ ಪಾರಾದರು. ಆದರೆ ಈ ರಕ್ಷಣ ಕಾರ್ಯದಲ್ಲಿ ನಿರತನಾಗಿದ್ದ ನರಗುಂದ ಪೋಲೀಸ್ ಠಾಣೆಯ ಪೋಲೀಸ್ ಪೇದೆ ಶ್ರೀ ಚವಡಿ ಎಂಬವ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದದ್ದು ಹೃದಯ ವಿದ್ರಾವಕ ಘಟನೆ. ಅದರಂತೆ ನವಲಗುಂದ ತಾಲ್ಲೂಕಿನ ಆರಟ್ಟಿಗ್ರಾಮದ ಹೊಲದಲ್ಲಿ ಸಿಕ್ಕಿ ಹಾಕಿಕೊಂಡ ರೈತನನ್ನು ರಕ್ಷಿಸಲು ಯಾಂತ್ರಿಕೃತ ದೋಣಿಯ ನೆರವು ಪಡೆಯಬೇಕಾಯಿತು. ಸ್ವತಃ ಜಿಲ್ಲಾಧಿಕಾರಿಗಳ ಪ್ರಕಾರ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯ ಅವಲೋಕನ ಮಾಡಿ, ರಕ್ಷಣಾ ಕಾರ್ಯಗಳ ಸಿದ್ಧತೆ ಮಾಡಿದ ನಂತರ, ಜಿಲ್ಲಾ ಕೇಂದ್ರಕ್ಕೆ ವಾಪಸು ಆಗಲು ಸಾಧ್ಯವಾಗದೆ ಅಲ್ಲಿಯೇ ವಾಸ್ತವ್ಯ ಮಾಡುವ ಪರಿಸ್ಥಿತಿ ಉದ್ಭವಿಸಿತ್ತು ಎಂದರೆ ಪ್ರವಾಹದ ಪ್ರಕೋಪದ ಅಂದಾಜು ಸಿಕ್ಕೀತು. ಆ ಎರಡೂ ದಿನ ಆ ರೈತ ತನ್ನ ಜಮೀನಿನ ಮನೆಯಲ್ಲಿ ಆಳೆತ್ತರದ ನೀರಲ್ಲಿ ತನ್ನ ಎತ್ತುಗಳನ್ನು ರಕ್ಷಿಸುತ್ತ ಮನೆಯ ಮೇಲ್ಛಾವಣಿ ಏರಿ ತನ್ನನ್ನು ರಕ್ಷಿಸಿಕೊಂಡು ಅಪಾಯದಿಂದ ಪಾರಾಗಿ ಬಂದ ಘಟನೆ ಮೈನವಿರೇಳಿಸುವಂತದ್ದು.






ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ

**ಬಂಗಾರದ ಬಂಗಲೆಯಲ್ಲೂ ಹೆಣ್ಣು ಜೀವಕ್ಕೆ ಬಿಡುವಿಲ್ಲ. ನಿವೃತ್ತಿಯಿಲ್ಲ. ಶಾರದಕ್ಕ ಕಡೆಗೂ ವರ್ಷವಿಡೀ ಹೈರಾಣಾಗಿ ದುಡಿವ ಈ ಸಂಸಾರದ ಜಂಜಡದಿಂದ ದೂರವಿರುವ ಮಾರ್ಗ ಕಂಡುಕೊಂಡಿದ್ದೇ ಸತ್ಸಂಗ.**

# ಭ್ರಮೆಯ ಪರದೆ ಹರಿದು...

ತುಂಬ ಒತ್ತಾಯ ಮತ್ತು ಒತ್ತಡದಲ್ಲಿ ಪಂಜಾಬಿಗೆ ಹೊರಡಲು ಸಿದ್ಧಳಾದೆ. ಅಮೃತಸರದಿಂದ 20. ಕಿ.ಮಿ. ದಾಟಿದರೆ ಸಿಗುವ ಪುಟ್ಟ ಹಳ್ಳಿ ಬ್ಯಾಸ್. ಐದು ನದಿಗಳಲ್ಲೊಂದಾದ 'ಬ್ಯಾಸ್' ಈ ಹಳ್ಳಿಯ ಅನತಿ ದೂರದಲ್ಲಿ ಮೈದುಂಬಿ ಹರಿಯುತ್ತದೆ. ಪಯಣದುದ್ದಕ್ಕೂ ನನ್ನ ಮನದಂಗಳದಲ್ಲಿ ಭಗತ್‌ಸಿಂಗ್ ಮುಗುಳ್ನಗುತ್ತಿದ್ದ. ಭಾರತ - ಪಾಕಿಸ್ತಾನ ಇಬ್ಭಾಗವಾದಾಗ ಇಕ್ಕೆಲಗಳಲ್ಲಿ ಹರಿದ ಮನುಷ್ಯರ ರಕ್ತದ ಕಣಗಳ ಕಾಡುವಿಕೆ ಇತ್ತು. ಸ್ನೇಹಜೀವಿ ಸಿಖ್ ಸಮುದಾಯದ ಒಲವಿತ್ತು.

ಬ್ಯಾಸ್ ಹಳ್ಳಿಗೆ ಭೇಟಿ ನನ್ನ ಆಯ್ಕೆಯಲ್ಲದಿದ್ದರೂ ಸಂಬಂಧಿಕರೊಂದಿಗೆ ಕೆಲವು ಗಂಟೆಗಳು ತಂಗಲು ಒಪ್ಪಿಕೊಂಡಿದ್ದೆ. ರಾಧೇಸ್ವಾಮಿ ಎಂಬ ಐದನೇಯ ಗುರು ನಡೆಸುವ ಸತ್ಸಂಗಕ್ಕೆ ದೇಶವಿದೇಶದಿಂದ ಜನ ಹರಿದು ಬಂದಿದ್ದರು. ನಾಡ ಪರಂಪರೆಯಂಥ ಭಕ್ತಿಮಾರ್ಗ ಭೋದಿಸುವ ಈ ಗುರು ಚಾತುರ್ವರ್ಣ ವ್ಯವಸ್ಥೆಯ ವಿರುದ್ಧ ಮಾತನಾಡಿದರೂ ಪುನರ್ಜನ್ಮ, ಏಕ ದೇವೋಪಾಸನೆ, ಕರ್ಮ ಸಿದ್ಧಾಂತವನ್ನೇ ಹೇಳುವುದಿದೆ. ಆದರ ಸರ್ವಮತಗಳನ್ನು ಹೆಣೆವ ಮಾನವೀಯತೆಯ ಪ್ರಸ್ತಾಪವೂ ಮಾಡುವುದರಿಂದ ಇರಬೇಕು ಎಲ್ಲ ಧರ್ಮಗಳ ಜನಸಮುದಾಯ ಬಂದಿತ್ತು. ಯೋಗ, ಸತ್ಸಂಗಗಳ ಮೂಲಕ ಜನ ಮಾನಸವನ್ನು ಹಿಡಿದಿಡುವ ಅನೇಕ ಹಿಕಮತ್ತುಗಳು ಈ ದೇಶದಗಲಕ್ಕೂ ಪ್ರಯೋಗಿಸಲ್ಪಡುತ್ತಿವೆ. ವಿದೇಶದಿಂದಲೂ ಹಣದ ನೆರವು ಪಡೆವ ಈ ಗುರು 'ಬ್ಯಾಸ್' ಎಂಬ ಹಳ್ಳಿಯನ್ನು ನ್ಯೂಯಾರ್ಕಿನ ಕಾಲೋನಿಯಾಗಿಸಿದ್ದು ಅನೇಕ ಅನುಮಾನಗಳನ್ನು ಹುಟ್ಟುಹಾಕುತ್ತದೆ. ವಾರಕ್ಕೊಮ್ಮೆ ವಿಶೇಷ ಮತ್ತು ಪ್ರತಿದಿನ ಒಂದು ತಾಸು ನಡೆವ ಸತ್ಸಂಗದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರೇ. ವಿದೇಶಿ ನಿಧಿ ಜಾಲ ಹಬ್ಬುವ ಈ ಪ್ರಕ್ರಿಯೆ ಆತಂಕಕಾರಿಯೇ. ಜನಸಾಮಾನ್ಯರನ್ನು ಸೆಳೆವ ಪರಿಮಾತ್ರ ಚಕಿತದ ಸಂಗತಿ.

**ಬಿಡುಗಡೆ ಬಯಸಿ....**

ನಾನೊಮ್ಮೆ ಸಭಾಂಗಣದುದ್ದಕ್ಕೂ ದಿಟ್ಟಿ ಹರಿಸಿದೆ. ಸಾವಿರಾರು ಜನ ಕುಳಿತುಕೊಳ್ಳುವಂಥ ಪ್ರಾಂಗಣ. ಸತ್ಸಂಗ ಶುರುವಾಗುತ್ತಿದ್ದಂತೆಯೇ ಭಕ್ತ ಸಮೂಹದಲ್ಲಿ ಸಂಚಲನೆ. ಐದು ನಿಮಿಷ ಉಪದೇಶ, ಮತ್ತೈದು ನಿಮಿಷ ಕಬೀರ, ಮೀರಾ ಭಜನ್, ಕೆಲವು ಮಹಿಳೆಯರು ಕಣ್ಣೀರಿಡತೊಡಗಿದರು. ಒಳಗಿನ ದುಃಖ ದುಮ್ಮಾನಗಳು, ನೋವು ನೆನಪುಗಳು ಹೀಗೆ ಹೊರಬರುತ್ತಿದ್ದವು. ಬಂದವರೆಲ್ಲ ವಯಸ್ಸಾದವರು. ರೋಗದಿಂದ ನರಳುವವರು, ಜೀವನದಲ್ಲಿ ನೊಂದವರು, ಅತೃಪ್ತರು, ನೆಮ್ಮದಿಯರಸಿ, ಮುಕ್ತಿಯರಸಿ ಬಿಡುಗಡೆ ಬಯಸಿ ಬಂದಿದ್ದರು. ಬಹುತೇಕ ಜನ ಆರ್ಥಿಕ ಅನುಕೂಲಸ್ಥರು.

ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರುವ ಅನೇಕ ಧಾರ್ಮಿಕ-ಸಾಂಸ್ಕೃತಿಕ ಸಭೆಗಳಿಗೆ ನಾನು ಹೋಗಿದ್ದೇನೆ. ಆರ್ಥಿಕ ಬಿಕ್ಕಟ್ಟಿನ ಈ ಹೊತ್ತಲ್ಲಿ, ಮಾನಸಿಕ ವಿಕಲ್ಪದ ಈ ಹೊತ್ತಲ್ಲಿ ಗುರುತು ಆಕರ್ಷಣೆಗಾಗಿ ಹಪಾಹಪಿಸುವ ಈ ಹೊತ್ತಲ್ಲಿ ಜನಸಮುದಾಯ, ಶ್ರದ್ಧಾಕೇಂದ್ರಗಳಲ್ಲಿ ಮತ್ತು ಇತ್ತೀಚೆಗೆ ನವೀನ ಪೋಷಾಕಿನೊಂದಿಗೆ ಅವತರಿಸಿದ ಈ ಸತ್ಸಂಗಗಳಲ್ಲಿ ಹುಚ್ಚೆದ್ದು ಹರಿದುಬರುತ್ತಿದ್ದಾರೆ. ಒಡಲ ತಳಮಳದ ಗ್ರಾಮೀಣ ಬಡ ಜನತೆಗೆ ಜಾತ್ರೆ ಮಠ, ಮಂದಿರಗಳು ಕೈಬೀಸಿ ಕರೆದರೆ ಅಗರ್ಭ ಶ್ರೀಮಂತರಿಗೆ ಸತ್ಸಂಗಗಳು ಸೆಳೆಯುತ್ತಿವೆ. ಸ್ಟಾರ್ ಸಂಸ್ಕೃತಿಯ ಸತ್ಸಂಗ!

**ಸಂಘರ್ಷ**

ಅಪ್ಪಟ ವೈಜ್ಞಾನಿಕ ನೆಲೆಯಲ್ಲಿ ಹುಟ್ಟಿ ಹೊಸ ಹೊಸ ಅವಿಷ್ಕಾರದತ್ತ ಮುಖ ಮಾಡಿದ ಭೌತವಾದ ಮತ್ತು ಜನರ ನಂಬಿಕೆಯನ್ನು ನಿಗೂಢತೆಯತ್ತ ತಳ್ಳುತ್ತ ಬರುತ್ತಿರುವ ಭಾವನಾವಾದ, ಹೀಗೆ ಇವೆರೆಡೂ ಪರಸ್ಪರ ಸಂಘರ್ಷೋಮುಖವಾಗಿ ಇಂದಿಗೂ ಬಂದಿವೆ. ಆದರೆ ಭಾವನಾವಾದದ ನೆರಳಿನ ಸನಾತನಿಗಳ ಕರ್ಮಠತನ, ಅಮಾನವೀಯತೆಯ ವಿರುದ್ಧ ದಂಗೆಯೆದ್ದು ಅನೇಕ ಪಂಥಗಳೂ ಹುಟ್ಟಿಕೊಂಡವು. ನಾಥ, ಸೂಫಿ, ಸಂತ, ಅವಧೂತ, ಆರೂಢ ಇತ್ಯಾದಿ.

ಆದರೆ ಅಜ್ಞಾನ, ಹುಡುಕಾಟ, ಕುತೂಹಲದ ಕಾರಣವಾಗಿ ಅಥವಾ ಮುಗ್ಧ ಭಕ್ತಿಯ ಕಾರಣವಾಗಿ ನೆರೆದ ಜನಸಮೂಹವನ್ನು ದಿಕ್‌ತಪ್ಪಿಸಲು ಮತ್ತು ಕೋಮು ಸನ್ನಿಗೆ ದುರ್ಬಳಕೆ ಮಾಡಿಕೊಳ್ಳಲು ಕೋಮುವಾದಿಗಳು ಹಾಗೂ ಮೂಲಭೂತವಾದಿಗಳು ವ್ಯವಸ್ಥಿತ ಸಂಚು ಹೆಣೆಯುತ್ತಿದ್ದಾರೆ. ಜನರ ನಡುವೆ ಸಾಂಸ್ಕೃತಿಕವಾಗಿ ನುಗ್ಗಲು, ವಿಷ ಸಂಸ್ಕೃತಿ ಹರಡಲು ಸಂಘ ಪರಿವಾರಿಗಳು ಸಜ್ಜಾಗಿರುವುದು ಪ್ರಜ್ಞಾವಂತರ ಅರಿವಿಗಿರಬೇಕಿದೆ.

**ಶಾರದಕ್ಕನ ಕತೆ**

ಈ ಸತ್ಸಂಗಕ್ಕೆ ಬಂದ ಶಾರದಕ್ಕನ ಕತೆ ಕೇಳಿ. ಕಳೆದ 30 ವರ್ಷದಿಂದ ಈ ಬಾಬಾನ ಭೇಟಿಗೆ ಬರುವ ಶಾರದಕ್ಕ ಶ್ರೀಮಂತ ಮನೆಯ ಸೊಸೆ. ಹದಿನಾಲ್ಕು ವಯಸ್ಸಿನಲ್ಲಿ ಮದುವೆಯಾಗಿ 15 ರಲ್ಲಿ ತೊಟ್ಟಿಲು ತೂಗಿ ಮತ್ತೆ ಇಪ್ಪತ್ತರೊಳಗೆ ಇನ್ನೂ ಮೂರ್ನಾಲ್ಕು ಮಕ್ಕಳಿಗೆ ಜನ್ಮಕೊಟ್ಟು ಸರ್ವಗುಣ ಸಂಪನ್ನ ಗಂಡನನ್ನು ನಿಭಾಯಿಸುತ್ತ, ಮನೆ ಮಂದಿಯ ಚಾಕರಿಯಲ್ಲಿ ಸೋತು ಸುಣ್ಣವಾದ ಶಾರದಕ್ಕನ ಮೈತುಂಬ ಬಂಗಾರದೊಡವೆ. ಬಂಗಲೆ ಮನೆ, ರೇಷ್ಮೆವಸ್ತ್ರಗಳು. ಆದರೆ ನಿರುಮ್ಮಳಾಗಿ ನಿದ್ದೆ ಮಾಡಿದ ರಾತ್ರಿಗಳು ಶಾರದಕ್ಕನ ಜೀವನದಲ್ಲಿ ಬರಲೇಇಲ್ಲ. ನಸುಕಿನಲ್ಲಿ ಶುರುವಾದ ದುಡಿಮೆ ರಾತ್ರಿ 12 ದಾಟಿದರೂ ನಿಲ್ಲದು. ಕಾಡುವ ಕೂಸುಗಳು, ಪೀಡಿಸುವ ಗಂಡ, ದರ್ಪದ ಅತ್ತೆ, ಪ್ರತಿಷ್ಠೆಯ ಮನೆತನ ಶಾರದಕ್ಕನ ಬದುಕಿನಲ್ಲಿ ಶಾಂತಿ, ನೆಮ್ಮದಿ, ನಿಶ್ಚಿಂತೆಯ ಗಳಿಗೆಗಳು ಬರಲೇ ಇಲ್ಲ. ಬಾಹ್ಯ ಜಗತ್ತಿಗೆ ಎಲ್ಲವೂ ಸರಿಯಾಗಿದೆ, ಬಯ್ಯುವವರಿಲ್ಲ, ಹೊಡೆಯುವವರಿಲ್ಲ. ಆದರೆ ಈ ಸಂಸಾರವೆಂಬ ಜಗತ್ತಿನಾಚೆಗೆ ಹಣಿಕಲೂ ಸಾಧ್ಯವಾಗದಂತಹ ಹಿಡಿತ. ಮನಸಿನ ಒಳತೋಟಿಯಲ್ಲಿ ಹರಿವ ಬಿಡುಗಡೆಯ ತಹತಹ ಯಾರಿಗೆ ಹೊಣೆ. ಬಂಗಾರದ ಬಂಗಲೆಯಲ್ಲೂ ಹೆಣ್ಣು ಜೀವಕ್ಕೆ ಬಿಡುವಿಲ್ಲ. ನಿವೃತ್ತಿಯಿಲ್ಲ. ಶಾರದಕ್ಕ ಕಡೆಗೂ ವರ್ಷವಿಡೀ ಹೈರಾಣಾಗಿ ದುಡಿವ ಈ ಸಂಸಾರದ ಜಂಜಡದಿಂದ ದೂರವಿರುವ ಮಾರ್ಗ ಕಂಡುಕೊಂಡಿದ್ದೇ ಸತ್ಸಂಗ. ಮಹಾರಾಷ್ಟ್ರದ ಮೂಲೆಯಿಂದ ಪಂಜಾಬಿನ ಈ ಹಳ್ಳಿಗೆ ಪ್ರತಿವರ್ಷ ಹದಿನೈದು ದಿನಗಳ ಮಟ್ಟಿಗೆ ಬರುತ್ತಾಳೆ. ಕೈಯಲ್ಲಿಷ್ಟು ಹಣವಿಟ್ಟುಕೊಂಡು ಮುಂಜಾನೆ ಒಂದು ತಾಸು ಸತ್ಸಂಗ. ಮರುದಿನದವರೆಗೂ ಮತ್ತೇನು ಕೆಲಸವಿಲ್ಲ. ಅಡುಗೆ ಮಾಡುವುದಿಲ್ಲ. ಪಾತ್ರೆ ತಿಕ್ಕುವುದಿಲ್ಲ. ಸಿಡಿಮಿಡಿಗುಟ್ಟುವ ಗಂಡ-ಮಕ್ಕಳಿಲ್ಲ. ನೆಮ್ಮದಿಯಿಂದ ತನ್ನೊಂದಿಗೆ ಬಂದ ಇತರೆ ಹೆಂಗಸರೊಂದಿಗೆ ಹರಟುತ, ನಗುತ ಉದ್ದಕ್ಕೂ ವಿಹಾರ ಹೊರಡುತ, ತನ್ನಪಾಡಿಗೆ ತಾನು ಒಂದು ನಿತಾಂತ ಖುಷಿಯ ಲೋಕದೊಳಗೆ ಸಂಚರಿಸುತ 15 ದಿನ ಕಳೆದ ಶಾರದಕ್ಕ ಈ ಮೂಲಕ ಮನೆಯಾಚೆಯ ಸಮಾಜದೊಂದಿಗೆ ಸಂಬಂಧ ಹೆಣೆದುಕೊಂಡಿದ್ದಾಳೆ. ಟಿಕೇಟ್ ತೆಗೆವುದು, ಆಟೋ ಹಿಡಿವುದು, ಹೀಗೆ ಎಲ್ಲಾವನ್ನೂ ಸ್ವತಃ ನಿಭಾಯಿಸುತ್ತ ಒಂದಿಷ್ಟು ವ್ಯವಹಾರ ಜ್ಞಾನವೂ ಪಡೆದ ಶಾರದಕ್ಕ ಯಾವುದೋ ಬಿಡುಗಡೆಯ ಭಾವದಲ್ಲಿ ಮಾತನಾಡುತ್ತಿರುವುದನ್ನು ನಾನು ಬೆರಗಿನಿಂದ ನೋಡುತ್ತಿದ್ದೆ. ಮೂಲತಃ ಮಾತೃಹೃದಯದ ಶಾರದಕ್ಕ ಈಗ ಸರಳ ಬದುಕಿನತ್ತ ಹೊರಳಿದ್ದಕ್ಕೇನೋ ನಿರಾಭರಣಳಾಗಿದ್ದಳು. ಇನ್ನಷ್ಟು ಆಪ್ತತೆಯ ಮೆರಗು ಇತ್ತು.

ನನ್ನೊಂದಿಗೆ ಜಲಿಯನ್ ವಾಲಾಬಾಗ್ ಬಂಗಾರದ ಮಂದಿರ, ವಾಘಾ ಬಾರ್ಡರ್ ಸುತ್ತಾಡಿದ ಮೌಶಿ ಮತ್ತು ಗೆಳತಿಯರು ಹೇಗಾದರೂ ಮಾಡಿ ವೈಷ್ಣೋದೇವಿಗೆ ಹೋಗಲೇಬೇಕೆಂದು ಹಠ ಹಿಡಿದು ಕಡೆಗೂ ನಮ್ಮ ಪ್ರವಾಸ ಜಮ್ಮುವಿನತ್ತ ಹೊರಳಿತು. ಕುದುರೆ ಹತ್ತಿ ಖುಷಿಯಿಂದ ಗಿರಿಯೇರಿದವರು (14 ಕಿ.ಮೀ) ಮರಳುವಾಗ ನರಳುತ, ಕುದುರೆಯಿಳಿದು 'ಹುಚ್ಚ ದೇವ್ರ ಬೆನ್ನ ಹತ್ತಬಾರದಿತ್ತು' ಅಂತ ಪಿಸುಗುಟ್ಟಿದರು. 'ಶರಣರು ಬರ್ದ ವಚನ ಒಂದರೇ ಪೂರ್ತಿ ತಿಳ್ಕೊಂಡ್ರ ಹಿಂಗ್ಯಾಡ್ತಿದ್ದಿರೇನು?' ಗೆಳತಿ ದಾರಿಯುದ್ದಕ್ಕೂ ದೇವರುಗಳ ಜಾತಕ ಬಿಡಿಸುತ, ಮುಖವಿಲ್ಲದ ಮೂರುಕಲ್ಲು ವೈಷ್ಣೋದೇವಿಗಾಗಿ ಹೈರಾಣದ ಮೌಶಿಯರಿಗೆ ಬಯ್ಯುತ ಬರುತ್ತಿದ್ದಳು.

**ಕಾಯಕವೇ ಕೈಲಾಸ**

ನನಗೆ ಥಟ್ಟನೆ ಹಿರಿಯ ಸಾಹಿತಿ ಕಾಶಿನಾಥ ಅಂಬಲಗಿಯವರ ನೆನಪಾಯ್ತು. ಅಂಬಲಗಿಯವರ ತಾಯಿ ಕೊರಳಲ್ಲಿರುವ ಲಿಂಗಪೂಜೆ ಮಾಡುವುದು ವರ್ಷಗೊಮ್ಮೆ-ಅದು ಶಿವರಾತ್ರಿಯ ದಿನ. ವರ್ಷಪೂರ್ತಿ ಹೊಲ-ನೆಲ-ರಾಶಿ-ರುಪಟಿ, ಮನೆಕೆಲಸ ಅಂತೆಲ್ಲ ನಿತ್ಯ ಕಾಯಕದಲ್ಲಿ 'ಲಿಂಗಪೂಜೆ'ಗೆ ಪುರುಸೊತ್ತೇ ಇರುತ್ತಿರಲಿಲ್ಲ. ಕೆಲವೊಮ್ಮೆ ಶಿವರಾತ್ರಿ ದಿನವೂ ಹೊಲದ ಕೆಲಸ ಬಂದು ಹಾದಿಗೆ ಹೋಗುವ ತನ್ನ ನೆರೆಯ ಮನೆಯವರನ್ನು ಕರೆದು 'ಎಯ್ ಬಸ್ಸಪ್ಪಣ್ಣ ಇಕಾ ಈ ಲಿಂಗಕ್ಕೆ ಒಯ್ದು ನಮ್ಮಪ್ಪಾಗ ಕೊಡು. ಇವತ್ತ ಶಿವರಾತ್ರಿ. ಅವ್ನ ಶಿವ ಲಿಂಗ ಗೂಡಾ ಇದಕ್ಕನೂ ಪೂಜಾ ಮಾಡು ಅನ್ನು' ಅಂತ ಕಳಿಸುವಳು. ಅವರ ತಾಯಿಯ ಪಾಲಿಗೆ ಕಾಯಕವೇ ಪೂಜೆ. ಈಗಲೂ ದುಡಿದುಣ್ಣುವ ಜನತೆಗೆ ದೇವರ ಬಗ್ಗೆ ನಂಬಿಕೆ ಇರಬಹುದು ಆದರೆ ಪೂಜೆ, ನುಡಿ, ಪ್ರಮುಖ ಅಲ್ಲವೇ ಅಲ್ಲ.

ಆದರೆ ಈ ದೇಶದಲ್ಲಿ ಏನಾಗುತ್ತಿದೆ ನೋಡಿ, ಶಾರದಕ್ಕನ ಬಿಡುಗಡೆಯ ಬಯಕೆ, ಸಾಫ್ಟ್‌ವೇರ್ ಲಕ್ಷಾಧೀಶರ ಸತ್ಸಂಗದ ಸೆಳೆತ, ಮೌಶಿಯವರಿಗೆ ಶರಣ ಸಂಸ್ಕೃತಿ ಅರಿತೂ ವೈಷ್ಣೋದೇವಿಯ ಭ್ರಮೆ, ನಿತ್ಯದ ಸಂಕಟಗಳಿಗೆ ಕಾರಣ ಅರಿಯದವರ ಮುಗ್ಧ ಭಕ್ತಿ, ಹೀಗೆ ಎಲ್ಲ ಎಲ್ಲವನ್ನೂ ಏನ್‌ಕ್ಯಾಶ್ ಮತ್ತು ಎಕ್ಸ್‌ಪ್ಲಾಯಿಟ್ ಮಾಡಲು ಯೋಗ, ಸತ್ಸಂಗ ಬಳಸಿ ಧಾರ್ಮಿಕ ಹುಸಿ ನಂಬಿಕೆ ಮತ್ತು ಆಚರಣೆ ಹುಟ್ಟುಸುತ್ತಿರುವ ಕೋಮುವಾದಿಗಳ ಹಿಡನ್ ಅಜೆಂಡಾದ ಅಟ್ಟಹಾಸ್ಯದಿವೆ. ಈ ಅಪಾಯದ ಬಗ್ಗೆ ಜನತೆಗೆ ತಿಳಿಹೇಳುವ ಸೌಹಾರ್ದ ಸೇತು ಕಟ್ಟುವ ಜವಾಬ್ದಾರಿ ಪ್ರಜ್ಞಾವಂತರೆಲ್ಲರ ಹೆಗಲ ಮೇಲಿದೆಯಲ್ಲವೇ?

# ಪೌರಸಂಸ್ಥೆ ಚುನಾವಣೆಗಳು...

ಪುಟ 5 ರಿಂದ

ಉದ್ಧಾರವೇನೂ ಆಗಲಿಲ್ಲ ಎಂಬುದು ನಿಜ. ಜನತಾದರ್ಶನದಲ್ಲಿ ನಮ್ಮ ಜನಗಳಿಗೆ ತಮ್ಮ ಅರ್ಜಿಗಳನ್ನು ರಾಜ್ಯದ ಮುಖ್ಯಮಂತ್ರಿಗಳ ಕೈಯಲ್ಲೇ ಕೊಟ್ಟ ತೃಪ್ತಿ ಅಷ್ಟೇ ಎನ್ನುವುದೂ ನಿಜ. ಆದರೆ ಈ ಬಾರಿ ಪಟ್ಟಣ ಪಂಚಾಯ್ತಿಗಳ ಗ್ರಾಮೀಣ ಮತದಾರರ ಜೊತೆಯಲ್ಲಿ ಪೌರ ಮತದಾರರು ಜೆಡಿ(ಎಸ್) ಪಕ್ಷವನ್ನು ಸ್ವಾಗತಿಸಿದ್ದಾರೆ. ಇದೊಂದು ಗಮನಾರ್ಹ ಬೆಳವಣಿಗೆ.

ಬಿಜೆಪಿಯೊಂದಿಗೆ ಜೆಡಿ(ಎಸ್) ಅಧಿಕಾರ ಹಂಚಿಕೊಂಡ ದಿನದಿಂದ ರಾಜ್ಯದ ಅಲ್ಪಸಂಖ್ಯಾತರಲ್ಲಿ ಭೀತಿಯ ವಾತಾವರಣ ಮೂಡಿತ್ತು. ಬಿಜೆಪಿಗೆ ಅಧಿಕಾರದಲ್ಲಿ ಪಾಲು ಸಿಕ್ಕಾಗಿನಿಂದ ರಾಜ್ಯದಲ್ಲಿ ಕೋಮು ಗಲಭೆಗಳು ಹೆಚ್ಚಾದವು. ಮುಸಲ್ಮಾನರ ಹಾಗೂ ಕ್ರೈಸ್ತರ ಮೇಲೆ ದಾಳಿ ದೌರ್ಜನ್ಯಗಳು ಹೆಚ್ಚಾದವು. ಅಲ್ಪಸಂಖ್ಯಾತರಿಗೆ ಈ ಸಮಿಶ್ರ ಸರ್ಕಾರದಿಂದ ರಕ್ಷಣೆ ಇಲ್ಲ ಎಂಬ ವಾತಾವರಣ ನಿರ್ಮಾಣವಾಯಿತು.

ಇದು ಜೆಡಿ(ಎಸ್) ನಾಯಕರಿಗೆ ಈಗ ಅರ್ಥವಾಗಲು ಆರಂಭವಾಗಿದೆ ಎಂಬ ಸೂಚನೆಗಳು ಸ್ವಾಗತಾರ್ಹವಾಗಿವೆ. ಮೀರಾಜುದ್ದೀನ್ ಪಟೇಲ್‌ರನ್ನು ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ನೇಮಿಸಿದ ತಂತ್ರ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಬೆಂಬಲ ಹೆಚ್ಚಾಗಲು ಒಂದು ಕಾರಣ ಆಗಿರಬಹುದು.

ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಪೌರಸಂಸ್ಥೆಗಳ ಚುನಾವಣೆಯಲ್ಲಿ ತಮ್ಮ ಪಕ್ಷದ ಸಾಧನೆಗೆ ತಮ್ಮ ಆಡಳಿತದ ಜನಪ್ರಿಯತೆಯೇ ಕಾರಣ ಎಂದು ಹೇಳಿದ್ದಾರೆ. ಜೆಡಿ(ಎಸ್) ಸರ್ಕಾರವು ಪೌರ ಸಂಸ್ಥೆಗಳ ಅನುದಾನವನ್ನು ಹೆಚ್ಚಿಸಿತ್ತು. ಬಡ ಹೆಣ್ಣು ಮಕ್ಕಳಿಗಾಗಿ ಭಾಗ್ಯಲಕ್ಷ್ಮಿ ಯೋಜನೆ, ವೃದ್ಧರಿಗೆ ಸಂಧ್ಯಾ ಸುರಕ್ಷಾ ಯೋಜನೆ, ಹೆಚ್ಚುವರಿ ವೃತ್ತಿಪರ ಮತ್ತು ಪದವಿ ಕಾಲೇಜುಗಳ ಸ್ಥಾಪನೆ, ಸಾರಾಯಿ ಮತ್ತು ಲಾಟರಿ ನಿಷೇಧದಂತಹ ಕ್ರಮಗಳನ್ನು ಜನ ಸ್ವಾಗತಿಸಿದಂತೆ ಕಾಣುತ್ತದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತದಾರರು ತೀರ್ಪು ನೀಡಿದಂತೆ ಮುಂದೆ ವಿಧಾನಸಭಾ ಚುನಾವಣೆಗಳಲ್ಲೂ ಹಾಗೆಯೇ ತೀರ್ಪು ನೀಡುತ್ತಾರೆ ಎಂದು ಹೇಳಲಾಗದು. ರಾಜ್ಯದ ಜನತೆಯಲ್ಲಿ ಜೆಡಿ(ಎಸ್) ಅನಿರೀಕ್ಷಿತವಾಗಿ ಹುಟ್ಟುಹಾಕಿರುವ ಹೊಸ ನಿರೀಕ್ಷೆಗಳನ್ನು ಅದು ಹೇಗೆ ಈಡೇರಿಸುತ್ತದೆ ಎನ್ನುವುದನ್ನು ಕಾದು ನೋಡಬೇಕು.

# ಪರಮಾಣು ವ್ಯವಹಾರ: ಸಮರ್ಥನೆಗೆ ಮತ್ತೊಂದು ಅಸಂಬದ್ಧ ಪ್ರಶ್ನೆ

ಭಾರತ- ಅಮೆರಿಕಾ ಪರಮಾಣು ಒಪ್ಪಂದದ ಬಗ್ಗೆ ಎಡಪಕ್ಷಗಳು ಮತ್ತು ಕೆಲವು ವಿಜ್ಞಾನಿಗಳು ಹಾಗೂ ಇತರ ಬುದ್ಧಿಜೀವಿಗಳು ಆಕ್ಷೇಪಗಳನ್ನೆತ್ತಿದುದರಿಂದ ಆರಂಭವಾಗಿರುವ ಚರ್ಚೆ ಮುಂದುವರೆದಿದೆ. ಆದರೆ ಈ ಒಪ್ಪಂದವನ್ನು ಸಮರ್ಥಿಸುವವರು ಅದನ್ನು ವಿರೋಧಿಸುವವರು ಎತ್ತಿರುವ ಪ್ರಶ್ನೆಗಳನ್ನು ಉತ್ತರಿಸುವ ಬದಲು ಚರ್ಚೆಯ ದಿಕ್ಕು ತಪ್ಪಿಸುವ ಪ್ರಯತ್ನ ನಡೆಸುತ್ತಿರುವಂತೆ ಕಾಣುತ್ತಿದೆ. ಕುರುಡು ಕಮ್ಯುನಿಸ್ಟ್ ವಿರೋಧಿಗಳಂತೂ ಚೀಣಾಕ್ಕೆ ಪ್ರಯೋಜನವಾಗಲಿ ಎಂದೇ ಈ ಆಕ್ಷೇಪಗಳನ್ನೆತ್ತಲಾಗುತ್ತಿದೆ ಎನ್ನುವ ಮಟ್ಟಕ್ಕೂ ಹೋಗಿದ್ದಾರೆ. ಈ ಮೂಲಕ ಪಾಕಿಸ್ತಾನಕ್ಕೂ ಪ್ರಯೋಜನವಾಗುತ್ತದೆಂಬ ಅವರ ಕುರುಡು ತರ್ಕಕ್ಕೆ ಯಾವುದೇ ಆಧಾರವಿಲ್ಲ, ಬದಲಾಗಿ ಈ ಒಪ್ಪಂದವನ್ನು ಬೆಂಬಲಿಸುವವರೇ ವಾಸ್ತವವಾಗಿ ಈ ದೇಶಗಳಿಗೆ ಪ್ರಯೋಜನ ಒದಗಿಸುತ್ತಿದ್ದಾರೆ ಎಂಬುದನ್ನು ತೋರಿಸಿಕೊಟ್ಟಾಗ ಬಾಯಿ ಮುಚ್ಚಿಕೊಳ್ಳಬೇಕಾಗಿ ಬಂತು. ಏಕೆಂದರೆ ಈ ಒಪ್ಪಂದವೇ ಭಾರತದ ಸಾಮರಿಕ ಪರಮಾಣು ಕಾರ್ಯಕ್ರಮದ ಮೇಲೆ ಮಿತಿ ಹಾಕಿ ಅವರಿಗೆ ಪ್ರಯೋಜನ ಒದಗಿಸಿದೆ ಎಂದೂ ತರ್ಕ ಹೂಡಬಹುದು. ಈ ತಂತ್ರ ವಿಫಲವಾದ ಮೇಲೆ ಈ ಒಪ್ಪಂದದ ಬೆಂಬಲಿಗರು ಈಗ ಇನ್ನೊಂದು ಅಪಪ್ರಚಾರದಲ್ಲಿ ತೊಡಗಿದ್ದಾರೆ. ಎಡಪಂಥೀಯರೀಗ ಕೋಮುವಾದದ ವಿರುದ್ಧ ಹೋರಾಟವನ್ನು ಬದಿಗಿಟ್ಟು ತಾವೆಷ್ಟು ಸಾಮ್ರಾಜ್ಯಶಾಹಿ-ವಿರೋಧಿಗಳು ಎಂದು ಪ್ರದರ್ಶಿಸಲು ಮುಂದಾಗಿದ್ದಾರೆ ಎಂಬುದೀಗ ಅವರ ಟೀಕೆ; ಯಾವುದು ಹೆಚ್ಚು ಅಪಾಯಕಾರಿ- ಕೋಮುವಾದವೋ ಅಥವಾ ಸಾಮ್ರಾಜ್ಯಶಾಹಿಯೋ ಎಂದು ಅವರು ಪ್ರಶ್ನಿಸುತ್ತಿದ್ದಾರೆ.

**..ಭಾರತ-ಅಮೆರಿಕ ಪರಮಾಣು ಒಪ್ಪಂದವನ್ನು ಬೆಂಬಲಿಸುವವರು ಈಗ ಮತ್ತೊಂದು ಪ್ರಶ್ನೆ ಯೆತ್ತಿದ್ದಾರೆ- ಸಾಮ್ರಾಜ್ಯಶಾಹಿಗೆ ತಮ್ಮ ವಿರೋಧವನ್ನು ಪ್ರದರ್ಶಿಸುವ ಭರದಲ್ಲಿ ಎಡಪಂಥೀಯರು ಕೋಮುವಾದಕ್ಕೆ ತಮ್ಮ ವಿರೋಧವನ್ನು ಬದಿಗಿಟ್ಟಿದ್ದಾರೆ ಎಂದು ಅವರ ಆರೋಪ. ಆ ಕೋಮುವಾದಿಗಳೇ ಆರಂಭಿಸಿದ ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನೀತಿಯ ಮುಂದುವರೆದ ಭಾಗವಾಗಿ ಈ ಒಪ್ಪಂದ ಬಂದಿರುವಾಗ ಇದೊಂದು ಅಸಂಬದ್ಧ ಪ್ರಶ್ನೆ ಎಂದು ಅವರಿಗೆ ತಿಳಿದಿಲ್ಲವೇ ಅಥವಾ ಅವರ ಬಳಿಯೀಗ ನಿಜವಾದ ಸಮರ್ಥನೆಗಳೇ ಉಳಿದಿಲ್ಲವೇ?**



## ಯಾವುದು ಅಪಾಯಕಾರಿ

ಈ ಪ್ರಶ್ನೆಯನ್ನು ಕೇಳಿಸಿಕೊಂಡಾಗ ಸ್ಟಾಲಿನ್‌ರವರ ಒಂದು ಮಾತು ನೆನಪಾಗುತ್ತದೆ ಎನ್ನುತ್ತಾರೆ ಸೀತಾರಾಂ ಯೆಚೂರಿಯವರು. ಕ್ರಾಂತಿಗೆ ಯಾವುದು ಹೆಚ್ಚು ಅಪಾಯಕಾರಿ- ಎಡ ದುಸ್ಸಾಹಸವಾದವೋ ಅಥವಾ ಬಲಪರಿಷ್ಕರಣವಾದವೋ ಎಂದು ಅವರನ್ನು ಕೇಳಿದಾಗ, ಯಾವುದರ ವಿರುದ್ಧ ಪರಿಣಾಮಕಾರೀ ಹೋರಾಟ ನಡೆಯುವುದಿಲ್ಲವೋ ಅದು ಹೆಚ್ಚು ಅಪಾಯಕಾರಿಯಾಗುತ್ತದೆ ಎಂದವರು ಹೇಳಿದ್ದರಂತೆ. ಕೋಮುವಾದ ಮತ್ತು ಸಾಮ್ರಾಜ್ಯಶಾಹಿಯ ಬಗ್ಗೆಯೂ ಇದನ್ನೇ ಹೇಳಬಹುದು. ಇವು .ಎರಡೂ ಅಪಾಯಕಾರಿ, ಏನೇ ಆಗಲಿ, ಒಂದರ ವಿರುದ್ಧ ಹೋರಾಡುವ ಹೆಸರಿನಲ್ಲಿ ಇನ್ನೊಂದರ ವಿರುದ್ಧ ಹೋರಾಟವನ್ನು ನಿಲ್ಲಿಸಲು ಅಥವ ದುರ್ಬಲಗೊಳಿಸಲು ಸಾಧ್ಯವಿಲ್ಲ.

ಈಗಿನ ವಿಶ್ವದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಯಜಮಾನಿಕೆಯಡಿಯಲ್ಲಿ ಒಂದು ಏಕಧ್ರುವೀಯ ವಿಶ್ವ ವ್ಯವಸ್ಥೆಯನ್ನು ಹೇರಲು ಹವಣಿಸುತ್ತಿದೆ. ಶೀತಲ ಸಮರದ ಎರಡು ಧ್ರುವಗಳ ನಂತರದ ಜಗತ್ತಿನಲ್ಲಿ ಅಂತರ‍್ರಾಷ್ಟ್ರೀಯ ಸಂಬಂಧಗಳಲ್ಲಿ ಒಂದು ಬಹುಧ್ರುವೀಯತೆಯತ್ತ ಚಲಿಸುವ ಪ್ರವೃತ್ತಿ ಕಾಣಬರುತ್ತಿತ್ತು. ಇದು ವಿಕಾಸಗೊಳ್ಳಲು ಬಿಡುವ ಬದಲು ಅಮೆರಿಕ ಆಕ್ರಮಣಕಾರಿಯಾಗಿ ಮಧ್ಯಪ್ರವೇಶಿಸಿ ತನ್ನ ಯಜಮಾನಿಕೆಯನ್ನು ಹೇರಿ ಒಂದು ಏಕಧ್ರುವೀಯ ಜಗತ್ತನ್ನು ಸೃಷ್ಟಿಸುವ ಹುನ್ನಾರ ನಡೆಸಿದೆ. ಇಂತಹ ಸಂದರ್ಭದಲ್ಲಿ ಭಾರತ ಇಂತಹ ಯಜಮಾನಿಕೆಯನ್ನು ಪ್ರತಿರೋಧಿಸಲು ಎಲ್ಲ ಅಭಿವೃದ್ಧಿಶೀಲ ದೇಶಗಳೊಂದಿಗೆ ಸೌಹಾರ್ದ ಸಂಬಂಧಗಳನ್ನು ಬಲಪಡಿಸಬೇಕಾಗಿದೆ. ಅಂತರ‍್ರಾಷ್ಟ್ರೀಯ ಸಂಬಂಧಗಳಲ್ಲಿ ಭಾರತಕ್ಕೆ ಇಂತಹ ಒಂದು ಪರಂಪರೆಯಿದೆ, ಹಿಂದಿನ ದಾಖಲೆಯಿದೆ. ಆದರೆ ಹೀಗಾಗುತ್ತಿಲ್ಲ. ಶೀತಲ ಸಮರದ ನಂತರದ ವಿಶ್ವ ಸನ್ನಿವೇಶ ಅಮೆರಿಕಾಕ್ಕೆ ಇಂತಹ ಮಧ್ಯಪ್ರವೇಶಕ್ಕೆ ಅವಕಾಶಗಳನ್ನು ಒದಗಿಸಿತ್ತು. ಸೆಪ್ಟೆಂಬರ್ 9ರ ಘಟನೆಗಳ ನಂತರ 'ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ'ದ ಹೆಸರಿನಲ್ಲಿ ಈ ಮೂಗುತೂರಿಕೆ ಇನ್ನಷ್ಟು ಹೆಚ್ಚಿದೆ. ಅದರ ಪೋಲೀಸ್ ಬಂಟತನವನ್ನು, ಆಕ್ರಮಣಕಾರೀ ಮಿಲಿಟರಿ ಮಧ್ಯಪ್ರವೇಶಗಳನ್ನು ಜಗತ್ತು ಈಗ ಕಾಣುತ್ತಿದೆ. ಇರಾಕಿನ ಮಿಲಿಟರಿ ಅತಿಕ್ರಮಣ, ಪಾಲೆಸ್ತೀನನ್ನು ಅತಿಕ್ರಮಿಸಿ ಕೊಂಡಿರುವ ಇಸ್ರೇಲಿಗೆ ಮುಂದುವರೆದ ಬೆಂಬಲ, ಈಗ ಇರಾನಿನಲ್ಲಿಯೂ ಇರಾಕೀ ಅನುಭವವನ್ನು ಬಳಸುವ ಸಿದ್ಧತೆ ಇವೆಲ್ಲಾ ವಿಶ್ವದಲ್ಲಿ ಸಾಮ್ರಾಜ್ಯಶಾಹಿ ಯಜಮಾನಿಕೆಯನ್ನು ಹೇರುವುದರ ಲಕ್ಷಣಗಳು.

## ಸ್ವತಂತ್ರ ವಿದೇಶಾಂಗ ನೀತಿಯ ಅಗತ್ಯ

ಹೀಗಿರುವಾಗ ಭಾರತದ ವಿದೇಶಾಂಗ ನೀತಿ ಎಲ್ಲಾ ದೇಶಗಳೊಂದಿಗೆ ಗೆಳೆತನದ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಲೇ ಯಾವುದೇ ರೀತಿಯಲ್ಲಿ ರಾಜಿ ಮಾಡಿಕೊಳ್ಳದ ಸ್ವತಂತ್ರ ನೀತಿಯಾಗಿಯೇ ಇರಬೇಕಾಗುತ್ತದೆ. ಯುಪಿಎ ಸರಕಾರದ ಸಮಾನ ಕನಿಷ್ಟ ಕಾರ್ಯಕ್ರಮ(ಸಿಎಂಪಿ) ಕೂಡಾ ಇದನ್ನೆ ತಾನೇ ಹೇಳಿರುವುದು? ವಾಸ್ತವವಾಗಿ ಈ ಸಿಎಂಪಿಯ ಕರಡಿನಲ್ಲಿ ಅಮೆರಿಕಾದೊಂದಿಗೆ ಸಾಮರಿಕ ಸಂಬಂಧಗಳಿಗೆ ಯತ್ನಿಸಬೇಕೆಂಬ ಅಂಶವಿತ್ತು. ಆದರೆ ಸಿಪಿಐ(ಎಂ) ಇದಕ್ಕೆ ಆಕ್ಷೇಪವೆತ್ತಿದ್ದರಿಂದ ಅದನ್ನು ತಿದ್ದಿ ಹೀಗೆ ನಮೂದಿಸಲಾಯಿತು 'ಜಾಗತಿಕ ಸಂಬಂಧಗಳಲ್ಲಿ ಬಹುಧ್ರುವೀಯತೆಯನ್ನು ಪ್ರೋತ್ಸಾಹಿಸಲು ಮತ್ತು ಎಲ್ಲಾ ರೀತಿಯ ಏಕಪಕ್ಷೀಯತೆಯ ಪ್ರಯತ್ನಗಳನ್ನು ವಿರೋಧಿಸಲು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವುದು.' ಇದರಂತೆ ನಡೆಯಬೇಕೆಂದು ಆಗ್ರಹಿಸುವುದು ತಪ್ಪಾಗುತ್ತದೆಯೇ?

## ಎಂಟು ಸುತ್ತಿನ ಗುಪ್ತ ಮಾತುಕತೆ

ಈ ನಿರೂಪಣೆ ಅದುವರೆಗೆ ಆರು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಆಳ್ವಿಕೆಯಲ್ಲಿ ಅನುಸರಿಸಿದ ವಿದೇಶಾಂಗ ನೀತಿಯಲ್ಲಿ ಮಹತ್ವದ ಬದಲಾವಣೆ ತಂದಿತು. ಕೋಮುವಾದಿ ಶಕ್ತಿಗಳು ಭಾರತವನ್ನು ಅಮೆರಿಕಾದ ಸಾಮ್ರಾಜ್ಯಶಾಹಿ ಸಾಮರಿಕ ಹಿತಾಸಕ್ತಿಗಳಿಗೆ ಅಡಿಯಾಳಾಗಿಸುವ ದಿಕ್ಕಿನಲ್ಲಿ ಒಯ್ಯಲು ಬದ್ಧವಾಗಿದ್ದವು. ಅಮೆರಿಕಾದ ಸ್ಟ್ರೋಬ್ ತಾಲ್ಬೋಟ್ ಮತ್ತು ಆಗಿನ ಎನ್‌ಡಿಎ ವಿದೇಶಾಂಗ ಮಂತ್ರಿ ಜಸ್ವಂತ್ ಸಿಂಗ್ ನಡುವೆ ಎಂಟು ಸುತ್ತುಗಳ ಗುಪ್ತ ಮಾತುಕತೆಗಳು ನಡೆದವು. ಅವುಗಳಲ್ಲಿ ಚರ್ಚಿಸಿದ್ದೇನು ಎಂದು ಇದುವರೆಗೂ ನಮ್ಮ ಸಂಸತ್ತಿಗಾಗಲೀ, ಜನತೆಗಾಗಲೀ ತಿಳಿಸಿಯೇ ಇಲ್ಲ. ತಾಲ್ಬೋಟ್ ಹೊರಗೆಡಹಿದ ಅಂಶಗಳಿಂದಲೇ ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ಅಮೆರಿಕಾದ ಹಿತಾಸಕ್ತಿಗಳನ್ನು ಈಡೇರಿಸಲು ಭಾರತ ಎಷ್ಟು ಬೇಕಾದರೂ ಬಗ್ಗಲು ಸಿದ್ಧವಾಯಿತು ಎಂಬ ಸಂಗತಿ ಬಯಲಾಯಿತು. ಈ ಆರು ವರ್ಷಗಳಲ್ಲೇ ನಮ್ಮ ಆರ್ಥಿಕದ ಮೂಲ ಮತ್ತು ನಿರ್ಣಾಯಕ ವಲಯಗಳಲ್ಲಿ ಅಮೆರಿಕನ್ ಬಂಡವಾಳ ತೂರಿಕೊಂಡು ಸೂಪರ್ ಲಾಭ ಗಿಟ್ಟಿಸುವ ಅವಕಾಶ ಮಾಡಿಕೊಡುವ ಕ್ರಮಗಳನ್ನು ಎನ್‌ಡಿಎ ಸರಕಾರ ಕೈಗೊಂಡಿತು. ಸಾಮ್ರಾಜ್ಯಶಾಹಿಯ ತ್ರಿಮೂರ್ತಿಗಳು(ವಿಶ್ವಬ್ಯಾಂಕ್, ಐಎಂಎಫ್ ಮತ್ತು ಡಬ್ಲ್ಯುಟಿಒ) ಹಾಗೂ ಕೋಮುವಾದದ ತ್ರಿಶೂಲದ ನಡುವಿನ ಈ ಅನೈತಿಕ ನಂಟಿನ ಬಗ್ಗೆ ಪ್ರಜಾಪ್ರಭುತ್ವವಾದೀ ಶಕ್ತಿಗಳು ಆಗಲೇ ದನಿಯೆತ್ತಿದ್ದವು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಈಗಲೂ ಒಂದು ದೇಶವಾಗಿ ಭಾರತದ ಹಿತಾಸಕ್ತಿಗಳು ಮತ್ತು ನಮ್ಮ ಕೋಟ್ಯಂತರ ಜನಗಳ ಜೀವನಾಧಾರ ಈ ತ್ರಿಮೂರ್ತಿ ಮತ್ತು ತ್ರಿಶೂಲದ ನಡುವೆ ಸಿಲುಕಿಕೊಂಡು ಅಪ್ಪಚ್ಚಿಯಾಗದಂತೆ ತಡೆಯಬೇಕಾಗಿದೆ.

**ಕೋಮುವಾದ ಮತ್ತು ಸಾಮ್ರಾಜ್ಯಶಾಹಿ ಎರಡರ ವಿರುದ್ಧವೂ ಹೋರಾಡಲೇ ಬೇಕು. ಕೋಮುವಾದದ ವಿರುದ್ಧವೋ ಅಥವಾ ಸಾಮ್ರಾಜ್ಯಶಾಹಿಯ ವಿರುದ್ಧವೋ ಎಂದು ಪ್ರಶ್ನಿಸುವವರು ವಾಸ್ತವವಾಗಿ ನಮ್ಮ ದೇಶಕ್ಕೂ, ಜನಗಳಿಗೂ ಕೇಡು ಬಗೆಯುತ್ತಾರೆ,**

ಇಂತಹ ಕೋಮುವಾದಿ ಶಕ್ತಿಗಳು ಮತ್ತೆ ಪ್ರಭುತ್ವದ ಚುಕ್ಕಾಣಿ ಹಿಡಿಯದಿರಲಿ ಎಂದು ತಾನೇ ಯುಪಿಎ ಸರಕಾರಕ್ಕೆ ಎಡಪಕ್ಷಗಳ ಬಾಹ್ಯಬೆಂಬಲವನ್ನು ಪ್ರಜಾಪ್ರಭುತ್ವವಾದಿಗಳು ಸ್ವಾಗತಿಸಿದ್ದು! ಎಡಪಕ್ಷಗಳು ಈ ಬೆಂಬಲವನ್ನು ನೀಡಿದ್ದು ಸಿಎಂಪಿ ಅಂದರೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ. ಆದ್ದರಿಂದ ಯುಪಿಎ ಸರಕಾರ ಈ ಸಿಎಂಪಿಯನ್ನು ಉಲ್ಲಂಘಿಸಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಆರಂಭಿಸಿದ ವಿದೇಶ ನೀತಿಯ ದಿಕ್ಕನ್ನೇ ಮುಂದುವರೆಸಲು ಬಿಡಬೇಕು ಎಂದು ಹೇಗೆ ತಾನೇ ನಿರೀಕ್ಷಿಸಲು ಸಾಧ್ಯ?

ಹೀಗಿರುವಾಗ ಭಾರತದ ಜನಗಳ ಮುಂದೆ ಬೇರೆ ಆಯ್ಕೆಯಾದರೂ ಎಲ್ಲಿದೆ? ಕೋಮುವಾದ ಮತ್ತು ಸಾಮ್ರಾಜ್ಯಶಾಹಿ ಎರಡರ ವಿರುದ್ಧವೂ ಹೋರಾಡಲೇ ಬೇಕು. ಕೋಮುವಾದದ ವಿರುದ್ಧವೋ ಅಥವಾ ಸಾಮ್ರಾಜ್ಯಶಾಹಿಯ ವಿರುದ್ಧವೋ ಎಂದು ಪ್ರಶ್ನಿಸುವವರು ವಾಸ್ತವವಾಗಿ ನಮ್ಮ ದೇಶಕ್ಕೂ, ಜನಗಳಿಗೂ ಕೇಡು ಬಗೆಯುತ್ತಾರೆ, ನಮ್ಮ ಸಾರ್ವಭೌಮತೆಯನ್ನು ಮತ್ತು ಆಮೂಲಕ ವಿಶ್ವದಲ್ಲಿ ಒಂದು ಬಲಿಷ್ಟ ಸ್ವತಂತ್ರ ದೇಶವಾಗಿ ನಮ್ಮ ಶಕ್ತಿಯನ್ನು ಶಿಥಿಲಗೊಳಿಸಲು ಯತ್ನಿಸುತ್ತಿರುವ ಇಂತಹ ಶಕ್ತಿಗಳಿಗೆ ನೆರವಾಗುತ್ತಾರೆ.

ಇನ್ನೊಂದು ಅಂಶವನ್ನೂ ಇಲ್ಲಿ ಗಮನಿಸಬಹುದು. ಪರಮಾಣು ಒಪ್ಪಂದದ ಕುರಿತ ಚರ್ಚೆಯ ಸಂದರ್ಭದಲ್ಲಿ ಅದಕ್ಕೆ ಸಂಬಂದಪಟ್ಟ ಅಂಶಗಳನ್ನೆ ಚರ್ಚಿಸಬೇಕು ; ಎಡಪಕ್ಷಗಳು ಮತ್ತು ಇತರರು ಎತ್ತಿರುವ ಆಕ್ಷೇಪಗಳಿಗೆ ನೇರವಾದ ಉತ್ತರ ನೀಡಬೇಕು. ಇಲ್ಲವಾದರೆ ಇವಕ್ಕೆ ತಮ್ಮ ಬಳಿ ಉತ್ತರಗಳಿಲ್ಲ ಎಂದು ಒಪ್ಪಿಕೊಳ್ಳಬೇಕು. ಅದರ ಬದಲು ಇಂತಹ ಅಸಂಬದ್ಧ ಪ್ರಶ್ನೆಗಳನ್ನು ಎಳೆದು ತರುತ್ತಿದ್ದರೆ ಅದರ ಅರ್ಥವೇನು? ಈ ಭಾರತ-ಅಮೆರಿಕಾ ಪರಮಾಣು ವ್ಯವಹಾರವನ್ನು ಬೆಂಬಲಿಸುವವರ ಬಳಿ ಅದನ್ನು ಸಮರ್ಥಿಸಿಕೊಳ್ಳಲು ಸರಿಯಾದ ತರ್ಕಗಳೇ ಉಳಿದಿಲ್ಲ ಎಂದೇ ಅಲ್ಲವೇ? ●

---

## ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

### ಸರಿ ಉತ್ತರ ಆಯ್ಕೆ ಮಾಡಿ


1. ಕೇಂದ್ರ ಎನ್‌ಡಿಎ ಸರ್ಕಾರದಲ್ಲಿ ಸಚಿವರಾಗಿದ್ದಾಗ ತಮ್ಮ ಕುಟುಂಬದೊಂದಿಗೆ ಗೋವಾದ ಪಂಚತಾರಾ ಹೋಟೇಲಿನಲ್ಲಿ ಮಜಾ ಮಾಡಿ ಲಕ್ಷಾಂತರ ರೂಪಾಯಿಗಳ ಬಿಲ್ಲನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ)ದಿಂದ ಕೊಡಿಸಿದ ಬಿಜೆಪಿ ಸಚಿವ ಭೂಪ ಯಾರು?
   1. ಪ್ರತಾಪ್ ಸಿಂಗ್ ರೂಢಿ
   2. ರಾಜನಾಥಸಿಂಗ್
   3. ಅನಂತಕುಮಾರ್

2. 2004 ಚುನಾವಣೆಯ ಸಂದರ್ಭದಲ್ಲಿ ಅಟಲ್‌ಬಿಹಾರಿ ವಾಜಪೇಯಿಯವರ 'ಜನ್ಮದಿನಾಚರಣೆ' ನಡೆಸಿ ಬಡ ಮಹಿಳೆಯರನ್ನು ಸೇರಿಸಿ ಸೀರೆ ವಿತರಿಸುವೆನೆಂದು ಹೇಳಿ ಸೀರೆಗಳನ್ನು ನಾಯಿಗೆ ರೊಟ್ಟಿ ತುಣುಕನ್ನು ಎಸೆಯುವಂತೆ ಎಸೆದು ತಳ್ಳಾಟ ನುಗ್ಗಾಟ ಉಂಟು ಮಾಡಿ 26 ಮಹಿಳೆಯರ ಜೀವ ಕಳೆದ ಬಿಜೆಪಿ ಧುರೀಣ, ವಾಜಪೇಯಿಯವರ ಚುನಾವಣಾ ಏಜೆಂಟ್ ಯಾರು?
   1. ಲಾಲ್‌ಜಿ ಟಂಡನ್
   2. ವಿನಯ್ ಕಟಿಯಾರ್
   3. ಅಶೋಕ್ ಸಿಂಘಾಲ್

3. ತನ್ನ ಹೆಂಡತಿಯ ಹೆಸರಿನ ನಕಲಿ ಪಾಸ್‌ಪೋರ್ಟ್ ಬಳಸಿ ಮಹಿಳೆಯರನ್ನು ವಿದೇಶಕ್ಕೆ ಕಳ್ಳಸಾಗಣೆ ಮಾಡುವ ದಂಧೆ ನಡೆಸುವಾಗ ಸಿಕ್ಕಿಬಿದ್ದ ಬಿಜೆಪಿಯ ಎಂ.ಪಿ., ನರೇಂದ್ರ ಮೋದಿಯ ಶಿಷ್ಯ ಯಾರು?
   1. ಪ್ರವೀಣ್ ಬಾಯಿ ತೊಗಾಡಿಯಾ
   2. ಬಾಬು ಬಾಯಿ ಕಟಾರ
   3. ಕೇಶುಬಾಯಿ ಪಟೇಲ್

# ಅಗ್ನಿಕುಂಡದ ಹಾದಿಯಲ್ಲಿ ನಡೆದ ಹೋರಾಟಗಾರ ಪಿ.ರಾಮಮೂರ್ತಿ

**ಪಿ.ಆರ್. ಎಂದೇ ಖ್ಯಾತರಾದ ಪಿ.ರಾಮಮೂರ್ತಿ ಹಲವು ಪ್ರತಿಭೆಗಳ ಸಂಗಮ. ಹೋರಾಟಗಾರ, ಕಾರ್ಮಿಕರ ನೇತಾರ, ಶ್ರೇಷ್ಠ ಸಂಸದೀಯ ಪಟು, ಮಾರ್ಕ್ಸ್‌ವಾದಿ ಚಿಂತಕ... ಹೀಗೆ. ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಒಂದು ನೆನಪು.**



ಈ ಮನುಷ್ಯ ಹುಟ್ಟಿದ್ದು 'ಪ್ರತಿಷ್ಠಿತ' ಪುರೋಹಿತ ಕುಟುಂಬದಲ್ಲಿ. ಬರೀ ಪುರೋಹಿತರಲ್ಲ. ದೊಡ್ಡ ಭೂಮಾಲಕ. ಪುರೋಹಿತ ಕುಟುಂಬದಲ್ಲಿ ಬಾಲ್ಯದಲ್ಲಿ ವೇದ, ಸಂಸ್ಕೃತ ಎಲ್ಲಾ ಕಲಿತರು. ಕಂಚಿ ಶಂಕರಾಚಾರ್ಯರಿಗೆ ಉತ್ತರಾಧಿಕಾರಿಯಾಗಿ ಈ ಬಾಲಕನನ್ನು ತೆಗೆದುಕೊಳ್ಳಬೇಕು ಅಂತೆಲ್ಲಾ ಚರ್ಚೆಗಳಿದ್ದವು.

**ಬೇರೆ ದಾರಿ**

ಆದರೆ ಆ ಬಾಲಕ ಆರಿಸಿಕೊಂಡ ದಾರಿಯೇ ಬೇರೆ. ದಲಿತ ಸ್ನೇಹಿತರೊಂದಿಗೆ ದಲಿತ ಕೇರಿಯಲ್ಲಿ ತಿರುಗುವುದು, ದೊಡ್ಡವರ 'ಹಿತ ವಚನ'ಗಳನ್ನು ಕೇಳದೇ ಅದನ್ನು ಉಲ್ಲಂಘಿಸುವುದು ಇವೆಲ್ಲಾ ಮಾಡಿದರೆ ಕಂಚಿ ಮಠಕ್ಕೆ ಉತ್ತರಾಧಿಕಾರಿಯಾಗಲಾದೀತೆ? ಈ ಹುಡುಗನಿಗೆ ಸ್ವಾತಂತ್ರ್ಯ ಚಳುವಳಿಯ ಕಡೆ ಗಮನ ಬೇರೆ. ಗಾಂಧಿ, ಗಾಂಧಿ ಸತ್ಯಾಗ್ರಹ ಮೋಡಿ ಮಾಡಿತು.

ವೆಪ್ಪಟ್ಟೂರು, ತಂಜಾವೂರು ಸಮೀಪದ ಒಂದು ಹಳ್ಳಿ. ಇದು ಅವರ ಹುಟ್ಟೂರು. ಆಮೇಲೆ ಕುಟುಂಬದಿಂದ ಚೆನ್ನೈಗೆ ಪಯಣ. ಅಲ್ಲಿ ಮರೀನಾ ಬೀಚ್‌ನಲ್ಲಿ ನಡೆಯುವ ರಾಜಕೀಯ ಸಭೆಗಳು, ಸ್ವಾತಂತ್ರ್ಯ ಚಳುವಳಿಯ ಪ್ರಚಾರ ಭಾಷಣ, ವಿದೇಶಿ ವಸ್ತುದಹನ ಎಲ್ಲವನ್ನು ಹುಡುಗ ಕಣ್ಣಿಗೆ ತುಂಬಿಕೊಂಡ.

ಆತನ ಮನೆಯ ಪ್ರದೇಶವೋ ತಮಿಳುನಾಡಿನ ಹಲವು ಸ್ವಾತಂತ್ರ್ಯ ಚಳುವಳಿಯ ನಾಯಕರು ವಾಸವಿದ್ದ ಪ್ರದೇಶ. ಇದು ಸಾಲದೆಂದು ಕವಿ ಸುಬ್ರಹ್ಮಣ್ಯ ಭಾರತಿಯವರ ಮನೆಯೂ ಅಲ್ಲೇ. ಸುಬ್ರಹ್ಮಣ್ಯ ಭಾರತಿ ಎಂದರೆ ಕರ್ನಾಟಕದಲ್ಲಿ ಕುವೆಂಪು ಇದ್ದಂತೆ. ಸಾಮಾಜಿಕ ಅನಿಷ್ಟಗಳ ವಿರುದ್ಧ, ಶೋಷಣೆ ಅನ್ಯಾಯಗಳ ಅಮೋಘ ಸಾಹಿತ್ಯ ಸೃಷ್ಟಿಸಿ ನಾಡಿಗೆ ಸ್ಫೂರ್ತಿ ನೀಡಿದವರು.

ಇಂತಹ ಪ್ರಭಾವಗಳಲ್ಲಿ ಬೆಳೆದ ಬಾಲಕ ಕ್ರಾಂತಿಕಾರಿ ಚಳುವಳಿಯ ಕಡೆ ಹೊರಳಿದ್ದಲ್ಲಿ ಆಶ್ಚರ್ಯವೇನು?

ಸೈಮನ್ ಕಮಿಷನ್‌ಗೆ ಧಿಕ್ಕಾರ ಹೇಳಿದ ಪ್ರತಿಭಟನೆ. ವಿದೇಶಿ ವಸ್ತ್ರದಹನ, ಬಂಧನ, ಮೊಕದ್ದಮೆ ಎಲ್ಲವೂ ಆದವು.

ಮೊದಲು ಪಿ.ರಾಮಮೂರ್ತಿ ಕಾಂಗ್ರೆಸ್ ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಅಲಹಾಬಾದ್‌ಗೆ ಹೋಗಿ ನೆಹರೂ, ಪುರುಷೋತ್ತಮದಾಸ್ ಟಂಡನ್ ಮುಂತಾದ ಹೋರಾಟಗಾರರನ್ನು ಕಂಡುಬಂದರು. ನಂತರ ಚೆನ್ನೈ ಪ್ರೆಸಿಡೆನ್ಸಿ ಕಾಲೇಜು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ದುಡಿದರು.

**ಲಾಯರ್ ಅಲ್ಲದ ಲಾಯರ್**

ಪಿ.ರಾಮಮೂರ್ತಿ ಕಾನೂನು ಪದವೀಧರರೇನೂ ಆಗಿರಲಿಲ್ಲ. ಆದರೆ ಅವರ ಸ್ವಯಂ ಅಧ್ಯಯನದಿಂದ ಅವರಿಗೆ ಕಾನೂನು ಪರಿಣತಿ ಇತ್ತು. ಬ್ರಿಟೀಷರು ಸ್ವಾತಂತ್ರ್ಯಯೋಧರ ಮೇಲೆ ಹೂಡುವ ಮೊಕದ್ದಮೆಗಳಲ್ಲಿ ನ್ಯಾಯಾಲಯದಲ್ಲಿ 'ಆರೋಪಿ'ಗಳ ಪರವಾಗಿ ವಾದಿಸುತ್ತಾ ಅವರು ಖ್ಯಾತರಾದರು.

ಲಾಯರ್ ಅಲ್ಲದ ಈ ಲಾಯರ್ ಇಂತಹ ಒಂದು ಯತ್ನದಲ್ಲೇ ಕಮ್ಯುನಿಸ್ಟ್ ಚಳುವಳಿಯ ದಿಗ್ಗಜ ಪಿ.ಸುಂದರಯ್ಯ ಅವರು ಭೇಟಿಯಾದರು. ಕಾಂಗ್ರೆಸ್ ಪಕ್ಷದೊಳಗೆ ರಚನೆಗೊಂಡಿದ್ದ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ, ಅಲ್ಲಿಂದ ಕಮ್ಯುನಿಸ್ಟ್ ಪಕ್ಷ.... ಕಾಂ. ಪಿ.ರಾಮಮೂರ್ತಿ ಸರಿಯಾದ ದಾರಿಗೆ ಬಂದಿದ್ದರು.

1936ರಲ್ಲಿ ಪಿ.ರಾಮಮೂರ್ತಿ ಕಾರ್ಮಿಕರನ್ನು ಸಂಘಟಿಸಿ ಹೋರಾಟ ಆರಂಭಿಸಿದರು. ತಮಿಳು, ಇಂಗ್ಲಿಷ್, ಹಿಂದಿಗಳಲ್ಲಿ ಅತ್ಯುತ್ತಮ ಭಾಷಣಕಾರರಾಗಿದ್ದ ಪಿ.ಆರ್. ಅತ್ಯಂತ ಗಹನವಾದ ವಿಚಾರಗಳನ್ನು ಅತ್ಯಂತ ಸರಳವಾಗಿ ವಿವರಿಸುವುದಕ್ಕೆ ಖ್ಯಾತರಾಗಿದ್ದರು. ಶ್ರೇಷ್ಠ ಬರಹಗಾರು, ಒಬ್ಬ ವಿಶಿಷ್ಟ ಸಂಘಟನಾ ಚತುರರೂ ಆಗಿದ್ದ ಕಾಂ. ಪಿ.ಆರ್ ಈ ಎಲ್ಲವನ್ನೂ ದುಡಿಯುವ ವರ್ಗದ ಚಳುವಳಿಗಾಗಿ ಧಾರೆಯೆರೆದರು. ಕಾರ್ಮಿಕರಿಗೆ ರಾಜಕೀಯ ಶಿಕ್ಷಣ ನೀಡುವುದರಲ್ಲಿ ಅವರದು ಎತ್ತಿದ ಕೈ.

ತಮ್ಮ ಜೀವಿತಾವಧಿಯಲ್ಲಿ ಏಳುವರ್ಷಗಳ ಜೈಲುವಾಸ. 5 ವರ್ಷಗಳ ಭೂಗತ ಜೀವನ ನಡೆಸಿದ ಪಿ.ಆರ್. ಒಬ್ಬ ಮಾರ್ಕ್ಸ್‌ವಾದಿ ಚಿಂತಕರಾಗಿಯೂ ರೂಪುಗೊಂಡರು.

**ಚಮ್ಮಾರರಿಗೆ ಭಜನೆ ಹಕ್ಕು**

ತಮ್ಮ ಹೋರಾಟದ ಆರಂಭಿಕ ದಿನಗಳಲ್ಲೇ ಚೆನ್ನೈನಲ್ಲಿ ಚಪ್ಪಲಿ ಹೊಲೆಯುವ ದಲಿತ ಜನರನ್ನು ಸಂಘಟಿಸಿ ಅವರಿಗೆ ಅಲ್ಲಿ ನಡೆಯುತ್ತಿದ್ದ ಧಾರ್ಮಿಕ ಭಜನೆಗಳಲ್ಲಿ ಪಾಲ್ಗೊಳ್ಳುವ ಹಕ್ಕಿಗಾಗಿ ಹೋರಾಡಿ ಆ ಹಕ್ಕು ಪಡೆಯುವಲ್ಲಿ ಯಶಸ್ವಿಯಾಗಿದ್ದ ಪಿ.ಆರ್.ರವರು ಸಾಮಾಜಿಕ ದಮನ, ಜಾತಿ ತಾರತಮ್ಯ ಅಸ್ಪೃಶ್ಯತೆ ಆಚರಣೆ ವಿರುದ್ದ ಸಿಡಿಯುವ ಪ್ರವೃತ್ತಿಯವರಾಗಿದ್ದರು.

**ಜೈಲಿನಲ್ಲಿದ್ದೇ ಗೆದ್ದರು**

ದೇಶ ಸ್ವಾತಂತ್ರ್ಯ ಕಂಡ ಮೇಲೂ ಬಂಧನ, ಮೊಕದ್ದಮೆ, ಜೈಲುವಾಸಗಳನ್ನೇ ಎದುರಿಸಿದವರು ಪಿ.ಆರ್. 1952ರಲ್ಲಿ ನಡೆದ ಪ್ರಥಮ ವಿಧಾನ ಸಭಾ ಚುನಾವಣೆಯಲ್ಲಿ ಮಧುರೈ ಕ್ಷೇತ್ರದಿಂದ ಜೈಲಿನಲ್ಲಿದ್ದುಕೊಂಡೇ ಸ್ಪರ್ಧಿಸಿ ವಿಜಯಿಯಾದರು.

ವಿಧಾನ ಸಭೆಯ ಒಳಗೆ ಮತ್ತು ಹೊರಗೆ ಪಿ.ಆರ್. ಜಮೀನ್ದಾರಿ ವ್ಯವಸ್ಥೆ ನಿರ್ಮೂಲನೆಗಾಗಿ, ಭೂಸುಧಾರಣೆಯ ಪರವಾಗಿ ದನಿ ಎತ್ತಿದರು. ಕಾರ್ಮಿಕರ, ದುಡಿಯುವ ಜನರ ನೋವುಗಳಿಗೆ ಬಾಯಿಯಾದರು. ಕಮ್ಯೂನಿಸ್ಟ್ ಪಕ್ಷದ ಲೋಕಸಭಾ ಸದಸ್ಯರಾಗಿ ರಾಜ್ಯಸಭಾ ಸದಸ್ಯರಾಗಿಯೂ ಕಾಂ.ಪಿ.ಆರ್ ಇದೇ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದರು.

**ಮಾರ್ಕ್ಸ್‌ವಾದಕ್ಕಾಗಿ ಹೋರಾಟ**

ಕಮ್ಯೂನಿಸ್ಟ್ ಚಳುವಳಿಯಲ್ಲಿ ಕಂಡುಬಂದ ಪರಿಷ್ಕರಣವಾದ ಚಳುವಳಿಯ ಕ್ರಾಂತಿಕಾರಿ ಸತ್ವವನ್ನು ನಿಸ್ಸಾರಗೊಳಿಸುವ ಅಪಾಯ ಎದುರಾದಾಗ, ಮಾರ್ಕ್ಸ್‌ವಾದ, ಲೆನಿನ್‌ವಾದದ ಆಧಾರದಲ್ಲಿ ಅದನ್ನು ಎದುರಿಸುವ ನಿಟ್ಟಿನಲ್ಲಿ ಕಾಂ.ಪಿ.ಆರ್. ದೊಡ್ಡ ಕೊಡುಗೆ ನೀಡಿದರು. ಅಂತರ ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿ ಕಂಡುಬಂದ ಇಂತಹ ಪ್ರವೃತ್ತಿಗಳ ವಿರುದ್ಧವೂ ಕಾಂ. ಪಿ.ಆರ್. ಸ್ಪಷ್ಟತೆ ಹೊಂದಿದ್ದರು. ಪಕ್ಷ ವಿಭಜನೆಯಾದಾಗ ಸಿಪಿಐ(ಎಂ) ಜೊತೆಗೆ ನಿಂತವರು. ಪಿ.ಆರ್.

ಪರಿಷ್ಕರಣವಾದದ ವಿರುದ್ಧದ ಹೋರಾಟದಲ್ಲಿ ಪ್ರತ್ಯೇಕ ಕಾರ್ಮಿಕ ಸಂಘಟನೆ ಸಿಐಟಿಯುವನ್ನು ರೂಪಿಸಬೇಕಾಗಿ ಬಂದಾಗ ಪಿ.ಆರ್. ಅದರ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಯಾದರು. ಅತ್ಯಂತ ಸಂಕೀರ್ಣವಾದ ಪರಿಸ್ಥಿತಿಯಲ್ಲಿ ಕಾರ್ಮಿಕ ಚಳುವಳಿಯ ಭಾರ ಹೊತ್ತು ಸಂಘಟನೆಗೆ ಸಮರ್ಥ ನಾಯಕತ್ವ ನೀಡಿದರು.

**ನವ ರತ್ನಗಳಲ್ಲಿ ಒಬ್ಬರು**

ಹಲವು ಪ್ರತಿಭೆಗಳ ಸಂಗಮವಾಗಿದ್ದ ಪಿ.ಆರ್. ಅವರಿಗೆ ಅಂಗವೈಕಲ್ಯ ಎಂದೂ ಅಡ್ಡಿಯಾಗಲೇ ಇಲ್ಲ. ಅವರು ತಮ್ಮ ಒಂದು ಕಾಲು ಊನಗೊಂಡಿದ್ದರೂ ದೇಶದ ಕಾರ್ಮಿಕ ಚಳುವಳಿಗೆ ಭದ್ರವಾದ ಅಡಿಪಾಯವನ್ನೇ ಒದಗಿಸಿದರು.

ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲೂ ಕೇಂದ್ರ ಸಮಿತಿ ಸದಸ್ಯರೂ, ಪಾಲಿಟ್‌ಬ್ಯೂರೋ ಸದಸ್ಯರೂ ಆಗಿದ್ದ ಪಿ.ಆರ್. 1964 ರಲ್ಲಿ ಸಿಪಿಐ(ಎಂ) ಸ್ಥಾಪನೆಯಾದಾಗ ಆಯ್ಕೆಯಾದ 9 ಜನರ ಪ್ರಥಮ ಪಾಲಿಟ್‌ಬ್ಯೂರೋ ಸದಸ್ಯರೂ, ಕೇಂದ್ರ ಸಮಿತಿ ಸದಸ್ಯರೂ ಆಗಿದ್ದರು. ಅಂದರೆ ದೇಶದ ಕಮ್ಯುನಿಸ್ಟ್ ಚಳುವಳಿಯ ನವರತ್ನಗಳಲ್ಲಿ 'ಪಿ.ಆರ್.' ಎಂಬುದು ಕೂಡಾ ಒಂದು ರತ್ನ.

ಸೆಪ್ಟೆಂಬರ್ 20, 1908 ರಲ್ಲಿ ಜನಿಸಿದ ಕಾಂ. ಪಿ.ರಾಮಮೂರ್ತಿ 1987 ಡಿಸೆಂಬರ್ 15 ರಂದು ನಮ್ಮನ್ನು ಅಗಲಿದರು. ಇದೀಗ ದೇಶಾದ್ಯಂತ ಕಾಂ. ಪಿ.ಆರ್. ಅವರ ಜನ್ಮ ಶತಾಬ್ದಿ ನಡೆಯುತ್ತಿದೆ.

ಪುರೋಹಿತಶಾಹಿ ಕುಟುಂಬದಲ್ಲಿ ಹುಟ್ಟಿದರೂ ಅಸ್ಪೃಶ್ಯತೆ ವಿರುದ್ಧ ಸೆಟೆದು ನಿಂತರು. ಜಮೀನ್ದಾರರ ಮಗನಾಗಿದ್ದರು ಜಮೀನ್ದಾರಿ ವ್ಯವಸ್ಥೆಯ ನಾಶಕ್ಕಾಗಿ ಹೋರಾಡಿದರು. ಶೋಷಕ ವರ್ಗದ ಕೌಟುಂಬಿಕ ಹಿನ್ನೆಲೆ ಇದ್ದರೂ - ದುಡಿಯುವ ವರ್ಗಕ್ಕೆ ದನಿಯಾದರು. ಸಾಮ್ರಾಜ್ಯಶಾಹಿಯನ್ನು ಕೆಣಕಿ ಜೈಲು, ಕೇಸು ಎಂದು ಜೀವ ಸವೆಸಿದರು. ಇದಲ್ಲವೇ ತ್ಯಾಗದ ಮಾದರಿ, ಮಾರ್ಕ್ಸ್‌ವಾದಿಯೊಬ್ಬ ಮಾತ್ರವೇ ತುಳಿಯಬಹುದಾದ ಅಗ್ನಿಕುಂಡ ಹೊತ್ತು ತುಳಿಯುವ ಕಲ್ಲುಮುಳ್ಳಿನ ಹಾದಿ.

ಕಾಂ. ಪಿ.ಆರ್. ಸಾಗಿದ ಹಾದಿಯಲ್ಲಿ ನಾವೆಷ್ಟು ದೂರ ನಡೆದೇವು. ಅದೇ ಅವರಿಗೆ ನಾವು ಕೊಡಬಹುದಾದ ಗೌರವ ಅಲ್ಲವೇ?

●

# ರಾಜಕೀಯ ತಿರುವುಗಳು.....

ಪುಟ 8 ರಿಂದ

ಮುಂದುವರೆಸಲಾಗದಷ್ಟು ಅವುಗಳ ಒಳಗಡೆಯ ಈರ್ಷೆ, ಪೈಪೋಟಿಗಳು ಬೆಳೆದವು. ಆದ್ದರಿಂದ ಕಾಂಗ್ರೆಸ್ ಪಕ್ಷದಲ್ಲಿ ಒಡಕಾಯಿತು. ದೇವರಾಜ ಅರಸ್ ನೇತೃತ್ವದಲ್ಲಿ ಹೊಸ ಗುಂಪುಗಳು ಕಾಂಗ್ರೆಸ್ ಅನ್ನು ವಶಮಾಡಿಕೊಂಡವು. ಅದರಿಂದ ಕಾಂಗ್ರೆಸ್‌ನಿಂದ ಹೊರಬೀಳಬೇಕಾಗಿ ಬಂದ ಗುಂಪುಗಳು ಜನತಾಪಕ್ಷವನ್ನು ನಿರ್ಮಿಸಿಕೊಂಡವು. ಅಸ್ತಿತ್ವವೇ ಇಲ್ಲದೆಡೆಯಲ್ಲೆಲ್ಲಾ ಧಿಡೀರನೆ ಜನತಾಪಕ್ಷ ಅಸ್ತಿತ್ವಕ್ಕೆ ಬಂದ ಪವಾಡದ ಹಿನ್ನೆಲೆ ಇಷ್ಟೇ.

ಹೀಗೆ ಆಳುವ ವರ್ಗಗಳ ಎರಡು ಗುಂಪುಗಳು ಪರಸ್ಪರ ಅಧಿಕಾರಕ್ಕಾಗಿ ನಡೆಸುತ್ತಾ ಬಂದ ಪೈಪೋಟಿಯೇ 1983ರಿಂದ 2004ರವರೆಗೂ ಕಾಂಗ್ರೆಸ್‌ಗೆ ಬದಲಾಗಿ ಜನತಾದಳ, ಜನತಾದಳಕ್ಕೆ ವಿರೋಧವಾಗಿ ಕಾಂಗ್ರೆಸ್ ಎಂಬ ಪರಿಸ್ಥಿತಿ ಎರಡು ದಶಕಗಳ ಕಾಲ ಮುಂದುವರಿಯಲು ಕಾರಣವಾಯಿತು.

**ಕೋಮುವಾದಿ ಹಿಂಸಾಕಾಂಡದ ರಾಜಕಾರಣ**

ನಂತರ ಒಂದು ಕಡೆ ಜನತಾ ಪಕ್ಷವೆಂದು ರೂಪುಗೊಂಡಿದ್ದ ಆಳುವ ವರ್ಗಗಳ ಗುಂಪುಗಳ ಒಳಗೆ ಅಧಿಕಾರಕ್ಕಾಗಿ ನಡೆದ ಪೈಪೋಟಿಯ ಫಲವಾಗಿ ಮತ್ತು ವಾಜಪೇಯಿ, ಜಾರ್ಜ್ ಫರ್ನಾಂಡಿಸ್, ಹೆಗ್ಗಡೆ ಕೂಟ ನಡೆಸಿದ ಕುತಂತ್ರಗಳು, ನಂತರ ಕಾಂಗ್ರೆಸ್‌ನ ಕುತಂತ್ರಗಳ ಫಲವಾಗಿ ಜನತಾಪಕ್ಷ/ದಳ ಒಡೆದು ದುರ್ಬಲವಾಗುತ್ತಾ ನಡೆಯಿತು. ಮತ್ತೊಂದು ಕಡೆ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಎಂಬ ಆಳುವ ವರ್ಗಗಳ ಕೂಟದಿಂದ ಅತೃಪ್ತಗೊಂಡ, ಜನತಾಪಕ್ಷ ಕ್ಷಯವಾದ ಕಾರಣದಿಂದ ನೆಲೆ ಕಳೆದುಕೊಂಡ, ಆಳುವ ವರ್ಗಗಳ ಗುಂಪುಗಳು ಸೇರಿಕೊಂಡು ಬಿಜೆಪಿ ಬಲಿಷ್ಟವಾಗತೊಡಗಿತು. ಜನರ ಮತಗಳನ್ನು ಸೆಳೆಯುವ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡರೆ ಮತ್ತಷ್ಟು ಗುಂಪುಗಳು ತಮ್ಮೊಂದಿಗೆ ಸೇರುತ್ತವೆ. ತಮಗೆ ಬೆಂಬಲ ನೀಡುತ್ತವೆ ಎಂದು ಕಂಡುಕೊಂಡ ಬಿಜೆಪಿ ಕಾಂಗ್ರೆಸ್‌ನ ನೀತಿಗಳಿಂದ ಸಂಕಟಕ್ಕೊಳಗಾಗಿ ಪರಿತಪಿಸುತ್ತಿದ್ದ ಜನತೆಯನ್ನು ತನ್ನತ್ತ ಸೆಳೆಯಲು ಕೋಮುವಾದಿ ಹಿಂಸಾಕಾಂಡದ ರಾಜಕಾರಣವನ್ನು ಆರಂಭಿಸಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿಯೂ ಈದ್ಗಾ ಮೈದಾನ, ಇತರೆಡೆಗಳಲ್ಲಿ ಕೋಮುದಂಗೆಗಳು ಇತ್ಯಾದಿಗಳಿಂದ ಮತಬೆಂಬಲವನ್ನು ಪಡೆಯುವ ಶಕ್ತಿಯನ್ನು ವೃದ್ಧಿಸಿಕೊಂಡಿತು.

**ಬೆಂಬಲದ ಪಲ್ಲಟ**

ರಾಷ್ಟ್ರಮಟ್ಟದಲ್ಲಿ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನೊಂದಿಗಿದ್ದ ಗುತ್ತೇದಾರಿ ಬಂಡವಾಳಶಾಹಿಗಳ ಕೆಲವು ಗುಂಪುಗಳು ಬಿಜೆಪಿಗೆ ತಮ್ಮ ಬೆಂಬಲವನ್ನು ವರ್ಗಾಯಿಸಿದ ಹಿನ್ನೆಲೆಯಲ್ಲಿ ಹಾಗೂ ರಾಜ್ಯದಲ್ಲಿಯೂ ಅನೇಕ ಭೂದಂಧೆಕೋರ, ತೋಟ ಮಾಲೀಕರ, ಕಲ್ಲು ಗಣಿ, ಕಬ್ಬಿಣಗಣಿ ಮಾಲೀಕರ ಗುಂಪುಗಳು ಬಿಜೆಪಿಯನ್ನು ಧಿಡೀರನೆ ಸೇರಿಕೊಂಡವು. ಬಿಜೆಪಿಯೂ ಕೂಡ ರಾಜ್ಯದ ಅಧಿಕಾರಕ್ಕೆ ಒಂದು ಪ್ರಬಲ ಪ್ರತಿಸ್ಪರ್ಧಿಯಾಗಿ ಬೆಳೆಯಿತು. ಹೀಗೆ ಕಾಂಗ್ರೆಸ್ ಜಾಗತೀಕರಣಪ್ರಿಯ ನೀತಿಗಳಿಂದಾಗಿ ಜನರು ಅದರಿಂದ ಮೊದಲಿಗಿಂತಲೂ ಹೆಚ್ಚಾಗಿ ದೂರವಾದದ್ದು, ಬಿಜೆಪಿ, ಕಾಂಗ್ರೆಸ್‌ಗಳು ಹಾಗೂ ಒಳಜಗಳವೂ ಸೇರಿ ಜನತಾದಳ ದುರ್ಬಲವಾದದ್ದು ರಾಜ್ಯದಲ್ಲಿನ ಅಧಿಕಾರಕ್ಕೆ ಮರುಸ್ಪರ್ಧಿಗಳನ್ನು ಹುಟ್ಟಿಸಿತು.

ಅದೇ ಸಮಯದಲ್ಲಿ ಬಿಜೆಪಿಯ ಕೋಮುವಾದಿ ನೀತಿ ರಾಜ್ಯದ ಜನತೆಯಲ್ಲಿ ಇವರ ಕೈಲಿ ಅಧಿಕಾರ ಕೊಟ್ಟರೆ ಗತಿ ಏನೂ ಎಂಬ ಭೀತಿ ಹುಟ್ಟಿಸಿ ಬಿಜೆಪಿ ಒಂದು ಬಾರಿಯೂ ಅಧಿಕಾರ ದಕ್ಕದಂತೆ ಮಾಡಿದರೆ, ಕಾಂಗ್ರೆಸ್‌ನ ಜಾಗತೀಕರಣ ಪರ ನೀತಿ, ಎಸ್.ಎಂ.ಕೃಷ್ಣರ ಆಡಳಿತದ ರೂಪದಲ್ಲಿ ರಾಜ್ಯದ ಜನತೆ ಅದಕ್ಕೆ ಪ್ರಬಲ ಪೆಟ್ಟು ನೀಡುವಂತೆ ಮಾಡಿತು. ಜನತಾದಳದ ದುರ್ಬಲತೆ ಹಾಗೂ ಅದರ ನೀತಿಗಳಲ್ಲಿಯೂ ಜನರು ಮೆಚ್ಚುವಂತಹದ್ದು ಹೆಚ್ಚೇನೂ ಇಲ್ಲದೇ ಇದ್ದದ್ದು ಅಧಿಕಾರದಾಹ, ಭ್ರಷ್ಟಾಚಾರಗಳೇ ಪ್ರಮುಖವಾಗಿ ಕಂಡದ್ದು ಮೂರು ಪಕ್ಷಗಳಿಗೂ ಏಕಪಕ್ಷಾಡಳಿತ ನಡೆಸುವ ಅವಕಾಶವನ್ನು ನೀಡದಿರುವ ಜನಾದೇಶಕ್ಕೆ ಕಾರಣವಾಯಿತು. ಆದರೆ ಸಮ್ಮಿಶ್ರ ಸರ್ಕಾರವನ್ನು ರಚಿಸಬೇಕಾದ ಅನಿವಾರ್ಯತೆಯನ್ನು ತಮ್ಮ ದೌರ್ಬಲ್ಯಗಳನ್ನು ಒಪ್ಪಿಕೊಳ್ಳಲು ಮೂರು ಪಕ್ಷಗಳೂ ಸಿದ್ದರಿಲ್ಲ. ರಾಜ್ಯದ ಜನತೆಯ ಹಿತಗಳನ್ನು ಸಾಧಿಸುವುದು ಹೇಗೆ ಎಂಬ ಗುರಿ ಮೂರು ಪಕ್ಷಗಳಿಗೂ ಇಲ್ಲ. ತಮ್ಮ ಏಕಪಕ್ಷ ಆಡಳಿತವನ್ನು ರಾಜ್ಯದಲ್ಲಿ ಸ್ಥಾಪಿಸುವುದು ಹೇಗೆ ಎಂಬುದೇ ಮೂರು ಪಕ್ಷಗಳ ಹಂಬಲ. ಈ ಅಧಿಕಾರದಾಹವೇ ಈ ಮೂರು ಪಕ್ಷಗಳ ನಡುವೆ ಅಧಿಕಾರದ ಪೈಪೋಟಿಯನ್ನು ಅತ್ಯಂತ ತೀವ್ರಗೊಳಿಸಿದೆ. ಬಹಿರಂಗ ಬೀದಿಕಚ್ಚಾಟದ ಮಟ್ಟಕ್ಕೆ ಇಳಿಸಿದೆ.

●

**ಕುಂದಾಪುರದಲ್ಲಿ ಅನೈತಿಕವಾದ ಆಣೆ ಪ್ರಮಾಣ ಮಾಡಿಸಿಕೊಂಡು, ದುಡ್ಡು ಕೊಟ್ಟು ಓಟು ಪಡೆದು ಸಿಪಿಐ(ಎಂ) ಅಧಿಕಾರಕ್ಕೆ ಬರದಂತೆ ತಡೆದದ್ದೆ ಇಲ್ಲಿ ಬಿಜೆಪಿಯ ಸಾಧನೆ!**

# ಉಡುಪಿ : ಹಣದ ಹೊಳೆ ಹರಿಸಿದ ಬಿ.ಜೆ.ಪಿ

ಸೆಪ್ಟೆಂಬರ್ 28ರಂದು ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಉಡುಪಿ ಜಿಲ್ಲೆಯಲ್ಲಿ ಕಾಂಗ್ರೆಸ್ಸನ್ನು ಮೀರಿಸುವಂತೆ ಅಪಾರ ಹಣದ ಹೊಳೆ ಹರಿಸಿದ ಬಿ.ಜೆ.ಪಿ ಉಡುಪಿ ನಗರ ಸಭೆಯಲ್ಲಿ ಮರಳಿ ಅಧಿಕಾರಕ್ಕೇರಿದೆ. ಕುಂದಾಪುರದಲ್ಲಂತೂ ಸಿ.ಪಿ.ಐ(ಎಂ) ಪಕ್ಷವನ್ನೇ ಮುಖ್ಯ ಗುರಿಯಾಗಿಸಿಕೊಂಡು ಹಣ, ಹೆಂಡಗಳ ಮಹಾಪೂರವನ್ನು ಹರಿಸಿದ್ದೇ ಅಲ್ಲದೆ ಅನೇಕ ಆಮಿಷಗಳನ್ನೊಡ್ಡಿ ಕುಟಿಲೋಪಾಯಗಳ ಮೂಲಕ ಅಧಿಕಾರ ಪಡೆಯುವಲ್ಲಿ ಬಿ.ಜೆ.ಪಿ. ಯಶಸ್ವಿಯಾಗಿದೆ.

**ಕೋಮುವಾದಿಗಳ ಪ್ರಾಬಲ್ಯ**

ಜಿಲ್ಲಾ ಕೇಂದ್ರವಾಗಿರುವ ಉಡುಪಿ ಹೇಳಿ ಕೇಳಿ ಸಂಘ ಪರಿವಾರದ ಭದ್ರಕೋಟೆ. ಸ್ವಾತಂತ್ರ್ಯಪೂರ್ವದಿಂದ 1967ರಲ್ಲಿ ಕಾಂಗ್ರೆಸ್‌ನ ಒಳಗೇ ಇದ್ದ ಆರೆಸ್ಸೆಸ್‌ಪರ ಶಕ್ತಿಗಳು ಅಂದಿನ ಭಾರತೀಯ ಜನಸಂಘವನ್ನು ಹಸೆಮಣೆಗೆ ಕರೆದು ಬೆಳ್ಳಿಯ ಹರಿವಾಣದಲ್ಲಿ ಅಧಿಕಾರವನ್ನಿತ್ತು ನಗರ ಸಭೆಯ ಗದ್ದುಗೆಗೆ ಏರಿಸುವುದರಲ್ಲಿ ಸಫಲರಾದರು. ಅಂದಿನಿಂದ ಇಂದಿನವರೆಗೂ ಜನಸಂಘವನ್ನಾಗಲೀ ಬಿಜೆಪಿಯನ್ನಾಗಲೀ ಉಡುಪಿ ನಗರ ಸಭೆಯಿಂದ ಅಲ್ಲಾಡಿಸಲು ಕಾಂಗ್ರೆಸ್ಸಿಗರಿಗೆ ಸಾಧ್ಯವಾಗಲೇ ಇಲ್ಲ. 1996ರಲ್ಲಿ ಮಾತ್ರ ಕಾಂಗ್ರೆಸ್ಸಿಗರು ಏನೇನೋ ಮಸಲತ್ತು ನಡೆಸಿ ಬಿ.ಜೆ.ಪಿ ತನ್ನ ಪಕ್ಷದ ಹೆಸರಲ್ಲಿ ಚುನಾವಣೆಗೆ ಇಳಿಯದಂತೆ ಮಾಡುವಲ್ಲಿ ಯಶಸ್ವಿಯಾದರು. ಆಗ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮುಂದಿನ ಐದು ವರ್ಷ ಕಾಲ ಕುಂಭಕರ್ಣನಂತೆ ನಿದ್ರೆ ಮಾಡಿತು. ರೆನಾಲ್ಡ್, ಪ್ರವೀಣ ಕಲಿಮಾರಂತಹ ಒಬ್ಬಿಬ್ಬರು ಕೌನ್ಸಿಲರುಗಳನ್ನು ಬಿಟ್ಟರೆ ಮಿಕ್ಕವರೆಲ್ಲರೂ ತಾವು ನಗರಸಭಾ ಸದಸ್ಯರೆಂಬುದನ್ನು ಮರೆತೇ ಬಿಟ್ಟಿದ್ದರು. ತತ್ಫಲವಾಗಿ 2001ರ ಚುನಾವಣೆಯಲ್ಲಿ ಕಾಂಗ್ರೆಸ್ ನೆಲಕಚ್ಚಿ ಬಿ.ಜೆ.ಪಿ ಮರಳಿ ಅಧಿಕಾರಕ್ಕೆ ಬಂದಿತು. ಈ ಬಾರಿ 2007ರ ಚುನಾವಣೆಯಲ್ಲಂತೂ ಬಿ.ಜೆ.ಪಿ ಅಟ್ಟಹಾಸದಿಂದಲೇ ಪ್ರಚಾರ ಪ್ರಾರಂಭಿಸಿದ್ದರೆ ಕಾಂಗ್ರೆಸ್ಸು ಹ್ಯಾಪೆ ಮೋರೆ ಹಾಕಿಕೊಂಡು ಬೇಕೊ, ಬೇಡವೋ ಎನ್ನುವಂತೆ ಕಣಕ್ಕಿಳಿಯಿತು. ಕ್ರಿಕೆಟ್ ಆಟದ ಪರಿಭಾಷೆಯಲ್ಲಿ ಹೇಳಬೇಕೆಂದರೆ ಕಾಂಗ್ರೆಸ್‌ನ "ದೇಹಭಾಷೆ" (body language) ನೋಡಿದರೆ ಅದು ಸೋಲನ್ನು ಮೊದಲೇ ಒಪ್ಪಿಕೊಂಡಂತಿತ್ತು. ಕಾಂಗ್ರೆಸ್‌ನಿಂದ ಯಾವುದೇ ಸವಾಲು ಇಲ್ಲದ ಬಿ.ಜೆ.ಪಿ.ಗೆ ಸಮಸ್ಯೆಯಾಗಿದ್ದದ್ದು ಅದರೊಳಗಿನ ಅತೃಪ್ತರು ಮತ್ತು ಭಿನ್ನಮತೀಯರು ಮಾತ್ರ. ಕೋಮುವಾದಿ ಜಾತ್ಯಾತೀತ ಸರಕಾರದ ಅಂಗವಾಗಿರುವ ಬಿ.ಜೆ.ಪಿ ಮೀಸಲಾತಿ ನಿಯಮವನ್ನು ತನಗೆ ಅನುಕೂಲವಾಗಿ ಬಳಸಿಕೊಳ್ಳುವ ಮೂಲಕ ತನ್ನದೇ ಭಿನ್ನಮತೀಯರು ಚುನಾವಣೆಗೆ ನಿಲ್ಲದಂತೆ ಮಾಡುವಲ್ಲಿ ಯಶಸ್ವಿಯಾಯಿತು. ಒಟ್ಟು 35 ಸ್ಥಾನಗಳ ಪೈಕಿ ಬಿ.ಜೆ.ಪಿ 28 ಸ್ಥಾನಗಳಿಸಿದರೆ ಕಾಂಗ್ರೆಸ್ಸು 4 ಸ್ಥಾನ ಗೆದ್ದಿತು. ಒಂದು ಸ್ಥಾನ ಪಕ್ಷೇತರರ ಪಾಲಾಯಿತು. ಕುಖ್ಯಾತ 'ಆದಿ ಉಡುಪಿ ಬೆತ್ತಲೆ ಪ್ರಕರಣ'ದ ಆರೋಪಿಯನ್ನು ಒಳಗೊಂಡಂತೆ ಕ್ರಿಮಿನಲ್ ಹಿನ್ನೆಲೆಯ ಅಭ್ಯರ್ಥಿಗಳಿಗೆ ಸ್ಥಾನ ನೀಡಿರುವ ಬಿ.ಜೆ.ಪಿ ಚುನಾವಣೆ ನಡೆದ ನಾಲ್ಕೇ ದಿನಗಳಲ್ಲಿ ತನ್ನ ನಿಜ ಸ್ವರೂಪ ತೋರಿಸಲಾರಂಭಿಸಿದೆ. ಕಳೆದ ವರ್ಷದವರೆಗೂ ಬಿ.ಜೆ.ಪಿಯಲ್ಲಿದ್ದು ಕಿನ್ನಿಮೂಲ್ಕಿ ವಾರ್ಡಿನ ಕೌನ್ಸಿಲರ್ ಆಗಿದ್ದ ಅಮೃತಾ ಕೃಷ್ಣಮೂರ್ತಿ ಎಂಬವರು ಈ ಬಾರಿ ಕಾಂಗ್ರೆಸ್ ಸೇರಿ ಮರಳಿ ಗೆದ್ದು ಬಂದಿದ್ದಾರೆ. ಇದನ್ನು ಸಹಿಸದ ಬಿ.ಜೆ.ಪಿ.ಯವರು ಅಮೃತಾ ಕೃಷ್ಣಮೂರ್ತಿ ಅವರ ಮನೆಗೆ ಧಾಳಿ ನಡೆಸಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ,ಹಲ್ಲೆಗೈದು ಕಾರಿನ ಗಾಜು ಮತ್ತು ಕಿಟಕಿ ಬಾಗಿಲುಗಳನ್ನು ಒಡೆದುಹಾಕಿದ್ದಾರೆ. ಮುಂದಿನ ದಿನಗಳಲ್ಲಿ ಉಡುಪಿಯ ವಾತಾವರಣ ಹೇಗಿರುವುದು ಎಂಬುದಕ್ಕೆ ಇದೊಂದು ದೃಷ್ಟಾಂತ.

**ನೀರಿನಂತೆ ಹಣ ಚೆಲ್ಲಿ**

ಜಿಲ್ಲೆಯಾದ್ಯಂತ ಕುತೂಹಲ ಕೆರಳಿಸಿದ್ದ ಕುಂದಾಪುರ ಪುರಸಭಾ ಚುನಾವಣೆಯಲ್ಲಿ ಸಿ.ಪಿ.ಐ(ಎಂ)ನ್ನು ಸೋಲಿಸುವ ಒಂದೇ ಉದ್ದೇಶದಿಂದ ಬಿ.ಜೆ.ಪಿ ಹಣವನ್ನು ನೀರಿನಂತೆ ಪೋಲು ಮಾಡಿದೆ. ಹಿಂದಿನ ಪುರಸಭೆಯಲ್ಲಿ ಸಿ.ಪಿ.ಐ(ಎಂ) ಮತ್ತು ಬಿ.ಜೆ.ಪಿ ತಲಾ ಆರು ಸ್ಥಾನಗಳನ್ನು ಹೊಂದಿದ್ದರೆ 11 ಸ್ಥಾನ ಹೊಂದಿದ್ದ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಈ ಬಾರಿ ಬಿ.ಜೆ.ಪಿ ಮೀಸಲಾತಿ ನಿಯಮಗಳನ್ನು ತನಗೆ ಅನುಕೂಲವಾಗುವಂತೆ ಬಳಸಿಕೊಂಡು ಸಿಪಿಐ(ಎಂ)ನ ಪ್ರಬಲ ಅಭ್ಯರ್ಥಿಗಳಿಗೆ ತಮ್ಮದೇ ಕ್ಷೇತ್ರದಲ್ಲಿ ಸ್ಪರ್ಧಿಸದಂತೆ ಮಾಡುವಲ್ಲಿ ಯಶಸ್ವಿಯಾಯಿತು. ಸಿಪಿಐ(ಎಂ) ಖಚಿತವಾಗಿ ಗೆಲ್ಲುವಂತಿದ್ದ 5 ಕ್ಷೇತ್ರಗಳಲ್ಲಿ ಮೂರನ್ನು ಮಹಿಳೆಯರಿಗಾಗಿ ತಲಾ ಒಂದೊಂದನ್ನು ಎಸ್‌ಸಿ, ಎಸ್.ಟಿ.ಗಳಿಗಾಗಿ ಮೀಸಲಿಡಲಾಯಿತು. ಇಷ್ಟಾದರೂ ಒಟ್ಟು 25 ಸ್ಥಾನಗಳಲ್ಲಿ 13 ಸ್ಥಾನಗಳಿಗೆ ಸ್ಪರ್ಧಿಸಿರುವ ಸಿಪಿಐ(ಎಂ) ಕನಿಷ್ಟ 6ರಿಂದ 8 ಸ್ಥಾನಗಳನ್ನು ಗೆಲ್ಲುವುದು ಖಚಿತವಾಗಿತ್ತು. ಇನ್ನೂ ಮೂರು ಅಥವಾ ನಾಲ್ಕು ಸ್ಥಾನಗಳನ್ನು ಗೆಲ್ಲುವ ಅವಕಾಶವಿತ್ತು. ಹಿಂದೆ ಎರಡು ಬಾರಿ ಕುಂದಾಪುರ ಪುರಸಭೆಯಲ್ಲಿ ಆಡಳಿತ ನಡೆಸಿ ಅನುಭವವಿರುವ ಸಿಪಿಐ(ಎಂ)ಗೆ ಇಲ್ಲಿ ಸಾಕಷ್ಟು ಒಳ್ಳೆಯ ಹೆಸರಿದೆ. ಈ ಹಿಂದೆ ಸಿ.ಪಿ.ಐ(ಎಂ) ಗೆದ್ದಿರುವ ಆರು ವಾರ್ಡ್‌ಗಳಲ್ಲಂತೂ ಕಳೆದ 30 ವರ್ಷಗಳಿಂದಲೂ ಮತದಾರರು ತಪ್ಪದೇ ಕಮ್ಯೂನಿಸ್ಟರಿಗೇ ಮತ ನೀಡುತ್ತಿದ್ದವರು.

**ತೆಂಗಿನಕಾಯಿ ಮುಟ್ಟಿಸಿ ಆಣೆ**

ರಾಮಜನ್ಮಭೂಮಿ ವಿವಾದವಾಗಲೀ, ಅಟ್ಟಹಾಸದ ವಿರಾಟ್ ಹಿಂದೂ ಸಮಾವೇಶಗಳಿಂದಾಗಲೀ, ಸೇತು ಸಮುದ್ರಂ ಪ್ರಶ್ನೆಯಿಂದಾಗಲೀ ಇವರು ವಿಚಲಿತರಾಗುವವರೇ ಅಲ್ಲ! ಮಾಜಿ ಪುರಸಭಾಧ್ಯಕ್ಷ ಕಾಂ.ವಿ.ನರಸಿಂಹ ಅವರು ಸ್ಪರ್ಧಿಸಿದ್ದ 'ಶಾಂತಿ ನಿಕೇತನ' ವಾರ್ಡನ್ನೇ ತೆಗೆದುಕೊಂಡರೆ ಇಲ್ಲಿನ ಸುಮಾರು 200 ಮನೆಗಳ ಪ್ರತಿಯೊಬ್ಬರೂ ಸಿಪಿಐ(ಎಂ)ನೊಂದಿಗೆ ನಿಕಟ ಸಂಬಂಧ ಹೊಂದಿರುವವರು. ಕಳೆದ ಮೂವತ್ತು ವರ್ಷಗಳಿಂದ ಈ ಮನೆಗಳಲ್ಲಿ ಮದುವೆ, ಮುಂಜಿ, ಸಮಾರಂಭ ಸಾವು, ನೋವು ಮುಂತಾದ ಎಲ್ಲಾ ಸಂದರ್ಭಗಳಲ್ಲೂ ಸ್ಪಂದಿಸಿ ನೆರವಾದವರು ಸಿಪಿಐ(ಎಂ) ಕಾರ್ಯಕರ್ತರು ಮಾತ್ರ! "ಕಳೆದ ಕೆಲವು ವರ್ಷಗಳಲ್ಲಿ ಕಡಿಮೆ ಪಕ್ಷ ಐವತ್ತು ಹೆಣಗಳಿಗೆ ನಾನೇ ಹೆಗಲುಕೊಟ್ಟಿದ್ದೇನೆ'' ಎನ್ನುತ್ತಾರೆ ಸಿಪಿಐ(ಎಂ)ನ ಜಿಲ್ಲಾ ಸಮಿತಿ ಸದಸ್ಯ ಕಾಂ. ವಿ.ಚಂದ್ರಶೇಖರ್. ಇಂತಹ ನಿಷ್ಠಾವಂತ ಮತದಾರರನ್ನು ಭ್ರಷ್ಟಗೊಳಿಸಲು ಬಿಜೆಪಿ ಸಕಲ ಮಾರ್ಗಗಳನ್ನೂ ಬಳಸಿದೆ. ಪ್ರತಿ ಮನೆಗೂ ಸಾವಿರ, ಒಂದೂವರೆ ಸಾವಿರ ರೂಪಾಯಿ ಹಣನೀಡಿ, ತೆಂಗಿನಕಾಯಿ ಮುಟ್ಟಿಸಿ ಧರ್ಮಸ್ಥಳದ ಆಣೆ ಹಾಕಿಸಿ ಓಟು ಪಡೆಯಲಾಗಿದೆ. ಮಹಿಳಾ ಮತದಾರರಿಂದ ಮಂಗಲಸೂತ್ರ, ಕರಿಮಣಿ ತಾಳಿ ಮುಟ್ಟಿಸಿ ಸಿಪಿಐ(ಎಂ)ಗೆ ಮತ ನೀಡದಂತೆ ಹೇಳಲಾಗಿದೆ. ಹಲವಾರು ಮನೆಗಳಿಗೆ ತಲಾ 20 ಕೆ.ಜಿ ಅಕ್ಕಿ ನೀಡಲಾಗಿದೆ ಮತ್ತು ಕೆಲವೆಡೆ ಹೆಂಡದ ಹೊಳೆಯನ್ನೂ ಹರಿಸಲಾಗಿದೆ. ಸಿಪಿಐ(ಎಂ) ಪ್ರಬಲವಾಗಿರುವ ಎಲ್ಲಾ ವಾರ್ಡುಗಳಲ್ಲೂ ಇದೇ ತಂತ್ರವನ್ನು ಅನುಸರಿಸಿ ಸಿಪಿಐ(ಎಂ)ನ್ನು ಸೋಲಿಸಲಾಗಿದೆ. ಇದರ ಪರಿಣಾಮವಾಗಿ ಕಾಂ.ವಿ.ನರಸಿಂಹ ಅವರು ಕೇವಲ 19 ಮತಗಳ ಅಂತರದಿಂದ ಅನಿರೀಕ್ಷಿತವಾಗಿ ಸೋಲಬೇಕಾಯಿತು. ಹೀಗೆ ಅಪಾರ ಹಣದ ಹೊಳೆ ಹರಿಸುವ ಕಾರ್ಯ ನಡೆದದ್ದು ಸ್ಥಳೀಯ ಬಿ.ಜೆ.ಪಿ ಶಾಸಕರ ಮುಂದಾಳತ್ವದಲ್ಲಿ ಎಂಬುದನ್ನು ಗಮನಿಸಬೇಕು.

**ದಾನಶೂರ ಕರ್ಣ**

ಕುಂದಾಪುರದ ಎಂ.ಎಲ್.ಎ ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟರಿಗೆ ದಾನಶೂರ ಕರ್ಣನೆಂಬ ಪ್ರಖ್ಯಾತಿ ಇದೆ. ಇವರು ಪಕ್ಷಬೇಧವಿಲ್ಲದೆ ಹಣ ಬೇಡಿ ಬಂದವರಿಗೆಲ್ಲ 'ಧನಸಹಾಯ' ಮಾಡುತ್ತಾರಂತೆ, ಮತ್ತು ಅದನ್ನು ಬಹಳ 'ನಾಟಕೀಯ' ರೀತಿಯಲ್ಲೇ ಮಾಡುತ್ತಾರೆ. ಹೀಗೆ ಸಿಕ್ಕ ಸಿಕ್ಕವರಿಗೆಲ್ಲ ಕೊಡುಗೈ ದಾನ ನೀಡುವ ಈ 'ಧರ್ಮರಾಯ'ರ ದಾನಶೂರತೆಗೆ ಬಳಸುವ ಅಪಾರ ಹಣದ ಮೂಲವೇನು ಎಂಬುದು ಇಂದಿಗೂ ನಿಗೂಢವಾಗಿದೆ. ಇವರು ತನ್ನ ಆಸ್ತಿಪಾಸ್ತಿ, ಹೊಲಗದ್ದೆಗಳನ್ನು ಮಾರಿ ಆ ಹಣವನ್ನು ದಾನ ಮಾಡುತ್ತಾರೆ ಎಂಬ ಪ್ರತೀತಿ ಇದೆ. 1974ರಲ್ಲೇ ಕರ್ನಾಟಕದಲ್ಲಿ ಭೂಸುಧಾರಣಾ ಮಸೂದೆ ಜಾರಿಗೆ ಬಂದು ಭೂಪರಿಮಿತಿ ನಿಗದಿಯಾದ ಮೇಲೆ ಇಲ್ಲಿ ಅರ್ಧ ಎಕರೆ, ಕಾಲು ಎಕರೆ ಭೂಮಿ ಇದ್ದ 'ಧನಿ'ಗಳೂ ಭೂಮಿ ಕಳೆದುಕೊಂಡಿರುವಾಗ ಶ್ರೀಮಾನ್ ಹಾಲಾಡಿ ಶ್ರೀನಿವಾಸ ಶೆಟ್ಟರ ಬಳಿ ಮಾತ್ರ ಇಷ್ಟೊಂದು ದುಂದುವೆಚ್ಚ ಮಾಡಲು ಬೇಕಾದಷ್ಟು ಭೂಮಿ ಉಳಿದುಕೊಂಡಿರುವುದು ಹೇಗೆಂಬುದು ಜಿಜ್ಞಾಸೆಗೆ ಕಾರಣವಾಗುತ್ತದೆ. ಕುಂದಾಪುರದ ಪುರಸಭಾ ಚುನಾವಣೆಯಲ್ಲಿ ಹರಿದ ಹಣದ ಹೊಳೆಯಲ್ಲಿ ಕಾಂಗ್ರೆಸ್ಸೂ ಕೊಚ್ಚಿಕೊಂಡು ಹೋಗಿರುವುದು ಸುಸ್ಪಷ್ಟ! ಹೆಚ್ಚಿನ ಕಡೆ ಕಾಂಗ್ರೆಸ್ ಮತದಾರರು ಬಿ.ಜೆ.ಪಿ.ಗೆ ಮತ ನೀಡಿದ ಕಾರಣ ತ್ರಿಕೋಣಸ್ಪರ್ಧೆ ತಪ್ಪಿಹೋಗಿ ಸಿಪಿಐ(ಎಂ)ಗೆ ನಷ್ಟವಾಗಿದೆ. ಆದರೂ ಎರಡು ಕ್ಷೇತ್ರಗಳಲ್ಲಿ (ಕಾ.ಗುಣರತ್ನಾ 21ನೇ ವಾರ್ಡ್ ಮತ್ತು ಕಾಂ.ಕಲಾವತಿ 19ನೇ ವಾರ್ಡ್) ಭರ್ಜರಿ ಜಯಗಳಿಸಿರುತ್ತಾರೆ. ಒಂದು ಕ್ಷೇತ್ರದಲ್ಲಿ ಸಿಪಿಐ(ಎಂ) ಬೆಂಬಲಿತ ಹಿತರಕ್ಷಣಾ ವೇದಿಕೆಯ ಅಭ್ಯರ್ಥಿಗೆ ಗೆಲುವಾಗಿದೆ.

ಸಿಪಿಐ(ಎಂ) ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಸಂಜೀವ ಪೂಜಾರಿ 16ನೇ ವಾರ್ಡಿನಲ್ಲಿ ಗೆದ್ದಿದ್ದಾರೆ. ಇದೇ ರೀತಿ ಸಿಪಿಐ(ಎಂ) ಬೆಂಬಲಿತರಾದ ಇಬ್ಬರು ಅಭ್ಯರ್ಥಿಗಳು ಎರಡನೇ ಸ್ಥಾನ ಪಡೆದಿದ್ದಾರೆ.

ಮತ್ತಿಗುಡ್ಡೆ ವೆಸ್ಟ್ ಬ್ಲಾಕ್, ಮಂಗಳೂರು ಟೈಲ್ಸ್ ಫ್ಯಾಕ್ಟರಿ ವಾರ್ಡ್‌ನಲ್ಲಿಯೂ ಸಿಪಿಐ(ಎಂ) ಅಭ್ಯರ್ಥಿಗಳು ಎರಡನೇ ಸ್ಥಾನ ಪಡೆದಿದ್ದಾರೆ.

12, 18, 20, 22 ಮತ್ತು 23ನೇ ವಾರ್ಡ್‌ಗಳಲ್ಲಿ ಸಿಪಿಐ(ಎಂ) ಬಿಜೆಪಿಗೆ ನಿಕಟ ಸ್ಪರ್ಧೆ ನೀಡಿ ಎರಡನೇ ಸ್ಥಾನಗಳಿಸಿದೆ. ಒಂದೆರಡು ಸ್ಥಾನಗಳಲ್ಲಿ ಸೋಲಿನ ಅಂತರ ಬಹಳ ಕಡಿಮೆ. ಒಂದು ಸ್ಥಾನ ಜೆಡಿಎಸ್‌ಗೆ ಹೋಗಿದೆ.

ಇನ್ನುಳಿದಂತೆ ಉಡುಪಿ ಜಿಲ್ಲೆಯಲ್ಲಿ ಕಾರ್ಕಳದ ಬಿಜೆಪಿ ಶಾಸಕ ಸುನೀಲ್‌ಕುಮಾರ್ ಅವರ ಅಟ್ಟಹಾಸಕ್ಕೆ ಬೇಸತ್ತು ಅಲ್ಲಿನ ಬಿಜೆಪಿ ಕಾರ್ಯದರ್ಶಿಯಾಗಿದ್ದ ಕೆ.ಪಿ.ಶೆಣೈ ಅವರು ಬಿಜೆಪಿ ತೊರೆದು ನಾಗರೀಕ ಸಮಿತಿಯ ಹೆಸರಲ್ಲಿ ಸ್ಪರ್ಧೆ ನೀಡಿದ್ದರು. ಇದು ಕಾಂಗ್ರೆಸ್ಸಿನ ಪಾಲಿಗೆ ವರದಾನವಾಯಿತು. ಕಾಂಗ್ರೆಸ್ಸು 23 ಸ್ಥಾನಗಳ ಪೈಕಿ 13 ಸ್ಥಾನಗಳಲ್ಲಿ ಜಯ ಗಳಿಸಿದೆ. ಬಿಜೆಪಿ 9 ಸ್ಥಾನಗಳಿಸಿ ಸೋಲು ಅನುಭವಿಸಿದೆ. ಒಂದು ಸ್ಥಾನ ನಾಗರಿಕ ಸಮಿತಿಯ ಪಾಲಾಗಿದೆ. ಸಾಲಿಗ್ರಾಮ ಪಟ್ಟಣ ಪಂಚಾಯತ್‌ನಲ್ಲಿ ಬಿಜೆಪಿ 7, ಜಯಪ್ರಕಾಶ ಹೆಗ್ಡೆ ಬೆಂಬಲಿತ ಪೌರಸಮಿತಿ 5, ಮತ್ತು ಕಾಂಗ್ರೆಸ್ 2 ಸ್ಥಾನಗಳಿಸಿದ ಕಾರಣ ಅತಂತ್ರ ಸ್ಥಿತಿಯುಂಟಾಗಿದೆ.

**ವರದಿ : ಎ.ಎಸ್.ಆಚಾರ್ಯ**

# ಕೋಲಾರ : ಅನೈತಿಕ ಹಾದಿ ಹಿಡಿದ ರಾಜಕೀಯ ಪಕ್ಷಗಳು

ಜಿಲ್ಲೆಯಲ್ಲಿ ನಡೆದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ಚುನಾವಣೆಗಳು ಸ್ಥಳೀಯ ಶಾಸಕರು ಮತ್ತು ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸಿನ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿತ್ತು. ರಾಷ್ಟ್ರೀಯ ಮತ್ತು ರಾಜ್ಯದ ಪಕ್ಷಗಳ ಸಿದ್ಧಾಂತಗಳು, ರಾಜಕೀಯ ನಿಲುವುಗಳು ಅಪ್ರಸ್ತುತವಾದವು. ವೈಯಕ್ತಿಕ ಪ್ರತಿಷ್ಠೆಯ ಉಳಿವಿಗಾಗಿ ಅಭ್ಯರ್ಥಿಗಳು ಲಕ್ಷಾಂತರ ರೂ.ಗಳನ್ನು ನೀರಿನಂತೆ ಚೆಲ್ಲಿದರು. ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಪಕ್ಷಗಳ ಹಾಗೂ ಸ್ವತಂತ್ರ ಅಭ್ಯರ್ಥಿಗಳು ಕನಿಷ್ಠ ಎಂದರೆ 5 ಲಕ್ಷದಿಂದ ಆರಂಭಗೊಂಡು 30-40 ಲಕ್ಷ ರೂ. ವರೆಗೂ ವೆಚ್ಚ ಮಾಡಿದ್ದಾರೆ. ಜಿಲ್ಲೆಯಲ್ಲಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳು ವಿಧಾನಸಭೆ, ಲೋಕಸಭೆ ಚುನಾವಣೆಗಳನ್ನೂ ನಾಚಿಸುವಂತಿತ್ತು.

ಬಂಡವಾಳಶಾಹಿ ಪಕ್ಷಗಳು ಮತಗಳಿಕೆಗಾಗಿ ಇನ್ನಿಲ್ಲದ ಅನೈತಿಕ ಮಾರ್ಗಗಳನ್ನು ತುಳಿದರು. ಸೀರೆ ಕುಪ್ಪಸ ಹಂಚುವುದರಿಂದ ಆರಂಭಿಸಿ ಪ್ರತಿ ಮತಕ್ಕೆ ಇಷ್ಟೆಂದು ಹಣ ನೀಡಿ ಜನತೆಗೆ ಆಮಿಷ ಒಡ್ಡಿ ಜಯಗಳಿಸಿದ್ದು ಪ್ರಜಾಪ್ರಭುತ್ವವನ್ನು ಗೇಲಿಮಾಡಿದ್ದಾರೆ. ವರ್ತೂರ್ ಪ್ರಕಾಶ್ ಎರಡು ತಿಂಗಳ ಹಿಂದೆಯೇ ಪ್ರತಿ ವಾರ್ಡ್‌ನಲ್ಲಿ ಪ್ರತಿ ಮನೆಗೆ ಎರಡು ಸಾವಿರ ರೂಗಳನ್ನು ಹಂಚಿದ್ದರೆ, ಮಾಲೂರಿನಲ್ಲಿ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿ ಮತಗಳನ್ನು ಪಡೆಯಲಿಕ್ಕಾಗಿ ಎಲ್ಲ ದೇವಸ್ಥಾನಗಳಿಗೆ ಹಣ ನೀಡುವುದು, ಯಾತ್ರೆಗಳನ್ನು ಕೈಗೊಳ್ಳುವವರಿಗೆಲ್ಲ ಹಣ ನೀಡಿದ್ದಾರೆ. ಪಟ್ಟಣದಲ್ಲಿ ನಡೆಸುವ ಗಣೇಶ ಹಬ್ಬಗಳಿಗೆಲ್ಲ ಉಚಿತವಾಗಿ ಗಣೇಶ ಮೂರ್ತಿಗಳನ್ನು ವಿತರಿಸಿದ್ದಾರೆ.

ಬಾಗೇಪಲ್ಲಿಯಲ್ಲಿ ಮನೆಗೊಂದು ಸೀರೆ ಕುಪ್ಪಸ, ವಿವಿಧ ರೀತಿಯ ಗೃಹೋಪಯೋಗಿ ವಸ್ತುಗಳನ್ನು ನೀಡಿದ್ದಾರೆ. ಕೋಲಾರದ ಗೌರಿಪೇಟೆ ವಾರ್ಡ್‌ನಲ್ಲಿ ವರ್ತೂರ್ ಪ್ರಕಾಶ್ ಮನೆಗೊಂದು ಮಿಕ್ಸಿ ನೀಡಿದ್ದಾರೆಂದರೆ ಇದರ ಅಗಾಧತೆಯನ್ನು ಅಳೆಯಬಹುದಾಗಿದೆ.

ರಾಷ್ಟ್ರೀಯ ಪಕ್ಷಗಳೂ ಸೇರಿದಂತೆ ನಗರ, ಪಟ್ಟಣಗಳ ಅಭಿವೃದ್ಧಿಗೆ ಯಾವುದೇ ಪಕ್ಷ ಅಭ್ಯರ್ಥಿಯ ಬಳಿ ನಿರ್ದಿಷ್ಟವಾದ ಕಾರ್ಯಯೋಜನೆಗಳಿಲ್ಲ. ಕೇವಲ ಹಣ ನೀಡಿಯೇ ಮತಗಳನ್ನು ಖರೀದಿಸಿದ್ದಾರೆ. ತಾವು ಅನೈತಿಕ ಮಾರ್ಗಗಳಲ್ಲಿ ಗಳಿಸಿರುವ ಹಣದಲ್ಲಿ ಅಮಾಯಕ ಜನತೆಗೆ ಮಂಕುಬೂದಿ ಎರಚಿದ್ದಾರೆ. ಹದಿನೈದರಿಂದ ಇಪ್ಪತ್ತು ವಯಸ್ಸಿನ ಯುವಕರಿಗೆ ಹಣ, ಬ್ರಾಂದಿ ವಿಸ್ಕಿಗಳನ್ನು ಹಂಚಿ ಅವರ ಮನೆ ಮನಗಳನ್ನು ಭ್ರಷ್ಟಗೊಳಿಸಿದ್ದಾರೆ. ಹಣ ನೀಡುವವರು ಬರುತ್ತಾರೆಂದರೆ ಊರಿನ ಇಡೀ ಯುವಕರ ಗುಂಪು ಅವರ ಹಿಂದೆ ಹೋಗುವಂತಹ ವಾತಾವರಣವನ್ನು ಸೃಷ್ಟಿಸಿದ್ದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಗಳ ಮನೆಗಳನ್ನು ಹೊರತು ಪಡಿಸಿದರೆ ಇನ್ನೆಲ್ಲ ಬಹುತೇಕ ಅಭ್ಯರ್ಥಿಗಳ ಮನೆಗಳು ದಿನಪೂರ್ತಿ ಬಾರ್ ಅಂಡ್ ರೆಸ್ಟೋರೆಂಟ್‌ಗಳಂತೆ

ಪುಟ 15 ಕ್ಕೆ

ಶರತ್‌ಚಂದ್ರ

# ಬರ್ಮಾದಲ್ಲಿ ಮಿಲಿಟರಿ ಆಡಳಿತದ ವಿರುದ್ಧ ಭಾರೀ ಪ್ರತಿಭಟನೆ


ಬರ್ಮಾದಲ್ಲಿ ಆಳುತ್ತಿರುವ ಮಿಲಿಟರಿ ಸರಕಾರದ ವಿರುದ್ಧ ಪ್ರತಿಭಟನೆಯ ಭಾರಿ ಅಲೆ ಎದ್ದಿದೆ. ಆಗಸ್ಟ್ 19 ರಂದು ಆರಂಭವಾದ ಪ್ರತಿಭಟನೆ ದಿನಗಳೆದಂತೆ ಬೆಳೆದು, ಕಳೆದ ವಾರ ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದರು. ಪ್ರತಿಭಟನೆಗೆ ತಕ್ಷಣದ ಕಾರಣ ಪೆಟ್ರೋಲ್ ಬೆಲೆಯನ್ನು ಇಮ್ಮಡಿ ಮಾಡಿದ್ದು ಆಗಿತ್ತು. ಆದರೆ ಪ್ರತಿಭಟನೆ ಬೆಳೆದಂತೆ ಮಿಲಿಟರಿ ಸರಕಾರ ರಾಜೀನಾಮೆ ಕೊಟ್ಟು ಪ್ರಜಾಪ್ರಭುತ್ವ ಸ್ಥಾಪಿಸಬೇಕು ಎಂಬ ಬೇಡಿಕೆ ಬಲವಾಯಿತು. ಪ್ರತಿಭಟನೆಯ ನಾಯಕತ್ವವನ್ನು ಪ್ರಮುಖವಾಗಿ ಬುದ್ಧ ಸನ್ಯಾಸಿಗಳು ಮತ್ತು ವಿದ್ಯಾರ್ಥಿಗಳು ವಹಿಸಿದ್ದರು. ಎಲ್ಲಾ ತರದ ರಾಜಕೀಯ ಸಂಘಟನೆಗಳು ನಿಷಿದ್ಧವಾಗಿ ಭೂಗತವಾಗಿರುವ ಸನ್ನಿವೇಶದಲ್ಲಿ ಬುದ್ಧ ಮಠಗಳ ಸನ್ಯಾಸಿಗಳು, ವಿದ್ಯಾರ್ಥಿಗಳು ದೊಡ್ಡ ಪಾತ್ರ ವಹಿಸಿದ್ದು ಆಶ್ಚರ್ಯವೇನಲ್ಲ.



ಆನ್ ಸಾನ್ ಸೂಕಿ

ಆಕಸ್ಮಾತ್ತಾಗಿ ಭುಗಿಲೆದ್ದ ಪ್ರತಿಭಟನೆಯಿಂದ ಅವಾಕ್ಕಾದ ಮಿಲಿಟರಿ ಸರಕಾರ, ಭಾರಿ ದಮನ ಕ್ರಮಗಳನ್ನು ಕೈಗೊಂಡಿತು. ಪ್ರತಿಭಟನಾ ಪ್ರದರ್ಶನಗಳ ಮೇಲೆ ಭಾರಿ ದಾಳಿ ಮಾಡಿತು. ಭಾರಿ ಪ್ರಮಾಣದಲ್ಲಿ ಸಾವು ನೋವುಗಳಿಗೆ ಕಾರಣವಾಯಿತು. ಪ್ರತಿಭಟನಾ ಪ್ರದರ್ಶನಗಳ ಬಗ್ಗೆ ವರದಿ, ಚಿತ್ರ, ವಿಡಿಯೋಗಳ ಮೇಲೂ ಸಾಧ್ಯವಾದ ಎಲ್ಲ ನಿರ್ಬಂಧ ಹೇರಿತು. ಇಂಟರ್‌ನೆಟ್ ಮುಚ್ಚುವಂತಹ ಉಗ್ರ ಕ್ರಮ ಸಹ ಕೈಗೊಂಡಿತು. ಅಲ್ಲದೆ ನಾಯಕತ್ವ ವಹಿಸಿದ ಬುದ್ಧ ಸನ್ಯಾಸಿಗಳು ಮತ್ತು ಇತರರನ್ನು ದೊಡ್ಡ ಪ್ರಮಾಣದಲ್ಲಿ ಬಂಧಿಸಿತು. ಸರಕಾರದ ಉಗ್ರ ಕ್ರಮಗಳ ನಂತರ ಸಾವಿರಾರು ಜನ ಕಾಣೆಯಾಗಿದ್ದಾರೆ ಎನ್ನಲಾಗಿದೆ. ಸೆಪ್ಟೆಂಬರ್ 22 ರಂದು ಗೃಹ ಬಂಧನದಲ್ಲಿರುವ ಪ್ರಜಾಪ್ರಭುತ್ವ-ಪರ ಚಳುವಳಿಯ ನಾಯಕಿ ಸೂ ಕಿ ನಾಲ್ಕು ವರ್ಷಗಳ ನಂತರ ಮೊದಲ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡು, ಪ್ರತಿಭಟನಾಕಾರರಿಗೆ ಕೈ ಬೀಸಿ ಬೆಂಬಲ ವ್ಯಕ್ತಪಡಿಸಿದರು.

ಪ್ರತಿಭಟನೆಯ ತೀವ್ರತೆ ಇತ್ತೀಚೆಗೆ - ಅಮೆರಿಕ ಹೇಳಿದ್ದು ಮಾಡುವುದು ಬಿಟ್ಟರೆ - ನಿಷ್ಕ್ರಿಯವಾಗಿರುವ ವಿಶ್ವಸಂಸ್ಥೆಯನ್ನೂ ಬಡಿದೆಬ್ಬಿಸಿತು. ಮಹಾಕಾರ್ಯದರ್ಶಿ ವಿಶೇಷ ಪ್ರತಿನಿಧಿಯೊಬ್ಬರನ್ನು ಮಾತುಕತೆಗೆ ಬರ್ಮಾಕ್ಕೆ ಕಳುಹಿಸಿದರು. ಆಸಿಯನ್(ಆಗ್ನೇಯ ಏಶ್ಯಾ ದೇಶಗಳ ಪ್ರಾದೇಶಿಕ ಸಂಘಟನೆ - ಬರ್ಮಾ ಇದರ ಸದಸ್ಯ) ಬರ್ಮಾ ಸರಕಾರದ ಮೇಲೆ ಹೆಚ್ಚಿನ ಪ್ರಭಾವ ಇರುವ ಭಾರತ, ಚೀನಾ, ಜಪಾನ್ ಸರಕಾರಗಳಿಗೆ ತಮ್ಮ ಪ್ರಭಾವ ಬಳಸಿ ಬಿಕ್ಕಟ್ಟು ಬಗೆಹರಿಸುವಂತೆ ಮನವಿ ಮಾಡಿದೆ. ಅಮೆರಿಕ ಮುಂತಾದ ಪಾಶ್ಚಿಮಾತ್ಯ ದೇಶಗಳು ಯಥಾಪ್ರಕಾರ ಪ್ರಜಾಪ್ರಭುತ್ವದ ಭಾಷಣ ಬಿಗಿದು ಸುಮ್ಮಗಾಗಿವೆ. ಬೀದಿ ಪ್ರತಿಭಟನೆಗಳು ಕಡಿಮೆಯಾಗಿದ್ದರೂ, ಬರ್ಮಾದಿಂದ ಬರುತ್ತಿರುವ ವರದಿಗಳು ಪ್ರತಿಭಟನೆಯ ನಾಯಕರು, ಕಾರ್ಯಕರ್ತರ ಮೇಲೆ ದಮನ ಸತತವಾಗಿ ನಡೆದಿದೆ ಎಂದು ಹೇಳಿವೆ. ವಿಶ್ವದಾದ್ಯಂತ ಪ್ರಜಾಪ್ರಭುತ್ವ-ಪರ ಚಳುವಳಿಗಳು ಬರ್ಮಾದ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿವೆ. ಸಿ.ಪಿ.ಐ(ಎಂ) ಬರ್ಮಾದ ಪ್ರಜಾಪ್ರಭುತ್ವ-ಪರ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿ, ಮಿಲಿಟರಿ ಸರಕಾರದ ದಮನ ಕ್ರಮಗಳನ್ನು ಬಲವಾಗಿ ಖಂಡಿಸಿದೆ.



ಬರ್ಮಾದ ಸರಕಾರದ ಮುಖ್ಯಸ್ಥ ಸೂಕಿ ಅವರಿಗೆ ಮಾತುಕತೆಗೆ ಆಹ್ವಾನ ನೀಡಿದ್ದಾರೆ. ಸೂ ಕಿ ಮಾತುಕತೆಗೆ ಆಹ್ವಾನ ಸ್ವೀಕಾರ ಇನ್ನೂ ಮಾಡಿಲ್ಲವಾದರೂ, ಸ್ವೀಕಾರ ಮಾಡುವ ಸೂಚನೆಗಳಿವೆ. ಬರ್ಮಾದಲ್ಲಿ ಬೇರೆ ಬ್ರಿಟಿಶ್ ವಸಾಹತುಗಳಂತೆ, ಹಲವು ರಾಜಕೀಯ ಶಕ್ತಿಗಳು ವಿಮೋಚನಾ ಹೋರಾಟದಲ್ಲಿ ತೊಡಗಿದ್ದವು. ಬರ್ಮಾ ಸ್ವತಂತ್ರವಾದ ಮೇಲೆ ಪ್ರಜಾಪ್ರಭುತ್ವ ಸ್ಥಾಪಿತವಾಗಲೇ ಇಲ್ಲ. ಮೊದಲ ಕೆಲವು ವರ್ಷಗಳು ಬಿಟ್ಟರೆ ಸತತವಾಗಿ ಮಿಲಿಟರಿ ಸರಕಾರಗಳು ಆಳುತ್ತಿವೆ. ದೇಶದ ಹಲವು ಭಾಗಗಳಲ್ಲಿ ಸರಕಾರದ ಅಧಿಕಾರ ನಡೆಯುತ್ತಿಲ್ಲ. ಹಲವು ಸಶಸ್ತ್ರ ಚಳುವಳಿಗಳು ಸಕ್ರಿಯವಾಗಿದ್ದು, ಹಲವು ಪ್ರದೇಶಗಳು ಅವುಗಳ ನಿಯಂತ್ರಣದಲ್ಲಿವೆ. ಮಿಲಿಟರಿ ಸರಕಾರದ ವಿರುದ್ಧ ಆಗಾಗ ಚಳುವಳಿಗಳು ನಡೆಯುತ್ತಲೇ ಬಂದಿವೆ. 1988 ರಲ್ಲಿ ನಡೆದ ಭಾರೀ ಪ್ರಜಾಪ್ರಭುತ್ವ-ಪರ ಚಳುವಳಿಯ ನಾಯಕರಾಗಿ ಸೂ ಕಿ ಹೊಮ್ಮಿದರು. 1989 ರಲ್ಲಿ ಅವರನ್ನು ಗೃಹ ಬಂಧನದಲ್ಲಿ ಇರಿಸಲಾಯಿತು. ಆಗಿನಿಂದ ಹೆಚ್ಚಿನ ಅವಧಿಯನ್ನು ಗೃಹ ಬಂಧನದಲ್ಲಿ ಕಳೆದಿದ್ದಾರೆ. 1990 ರಲ್ಲಿ ಅವರ ನಾಯತ್ವದ 'ನ್ಯಾಶನಲ್ ಲೀಗ್ ಫಾರ್ ಡೆಮೊಕ್ರಸಿ' ಚುನಾವಣೆಯಲ್ಲಿ ಭಾರೀ ಬಹುಮತದಿಂದ ಗೆದ್ದರೂ, ಮಿಲಿಟರಿ ಸರಕಾರ ಅದನ್ನು ಮಾನ್ಯ ಮಾಡಲಿಲ್ಲ. 2003ರಿಂದ ಸತತವಾಗಿ ಅವರು ಗೃಹ ಬಂಧನದಲ್ಲಿ ಇದ್ದಾರೆ. ಕಳೆದ ಕೆಲವು ವಾರಗಳ ಚಳುವಳಿಯ ತೀವ್ರತೆ, ಅಂತರ್‍ರಾಷ್ಟ್ರೀಯ ಒತ್ತಡ ಬರ್ಮಾದಲ್ಲಿ ಬದಲಾವಣೆಗೆ ಹಾದಿ ಮಾಡಬಹುದೇ ಎಂದು ಕಾದು ನೋಡಬೇಕಾಗಿದೆ.

# ಕೊರಿಯಾದಲ್ಲಿ ಶಾಂತಿ, ಐಕ್ಯತೆ, ಸಮೃದ್ಧಿಗೆ ಚಾರಿತ್ರಿಕ ಒಪ್ಪಂದ


ಅಮೆರಿಕ ಕೊರಿಯಾದ ಮೇಲೆ ಕಳೆದ ಐವತ್ತು ವರ್ಷಕ್ಕೂ ಹೆಚ್ಚಿನ ಕಾಲ ಹೇರಿದ್ದ - ವಿಭಜನೆ, ಶಾಶ್ವತ ಯುದ್ಧ-ಸ್ಥಿತಿ, ಅಣು ಯುದ್ಧದ ಬೆದರಿಕೆ, ಬೆಳವಣಿಗೆಗೆ ಅಡೆ-ತಡೆಗಳನ್ನು - ನಿವಾರಿಸುವ ಚಾರಿತ್ರಿಕ ಒಪ್ಪಂದಕ್ಕೆ, ಉತ್ತರ ಮತ್ತು ದಕ್ಷಿಣ ಕೊರಿಯಾಗಳ ನಾಯಕರು ಸಹಿ ಹಾಕಿದ್ದಾರೆ. ಉತ್ತರ ಕೊರಿಯಾದ ರಾಜಧಾನಿ ಪ್ಯೊಂಗ್ಯಾಂಗ್ ನಲ್ಲಿ ನಡೆದ ಶೃಂಗಸಭೆಯಲ್ಲಿ ಭಾಗವಹಿಸಲು ದಕ್ಷಿಣ ಕೊರಿಯದ ನಾಯಕರು, ಎರಡು ಕೊರಿಯಾಗಳ ಗಡಿಯನ್ನು ನಡೆದು ದಾಟಿದಾಗ ಉತ್ತರ ಕೊರಿಯಾದ ನಾಯಕರು ಅವರನ್ನು ಸ್ವಾಗತಿಸಿ ಇತಿಹಾಸ ಸೃಷ್ಟಿಸಿದರು. 1953 ರ ಕದನ ವಿರಾಮ ಒಪ್ಪಂದದ ಬದಲಿಗೆ, ಶಾಶ್ವತ ಶಾಂತಿ ಒಪ್ಪಂದದ ಕರಡಿಗೆ ಮಾತುಕತೆಗೆ ಕರೆ ಕೊಡಲಾಗಿದೆ. ಇದಕ್ಕಾಗಿ 1953 ಒಪ್ಪಂದದ ಭಾಗಿಗಳಾದ ಚೀನಾ, ಅಮೆರಿಕ ಮತ್ತು ವಿಶ್ವಸಂಸ್ಥೆ ಜತೆ ಮಾತುಕತೆ ನಡೆಸಲಾಗುವುದು. (ಆಗ ಇನ್ನೂ ಅಸ್ತಿತ್ವದಲ್ಲಿಲ್ಲದ ದಕ್ಷಿಣ ಕೊರಿಯಾ ಈ ಒಪ್ಪಂದದ ಭಾಗಿಯಲ್ಲ). ಒಪ್ಪಂದದ ಹಿಂದಿನ ದಿನ ಉತ್ತರ ಕೊರಿಯಾ ತನ್ನ ಅಣು-ಸಂಬಂಧಿ ಕಾರ್ಯಕ್ರಮಗಳನ್ನು ನಿಲ್ಲಿಸುವ ಘೋಷಣೆ ಮಾಡಿದೆ. ಎಂಟು ಅಂಶಗಳ ಒಪ್ಪಂದ ಕೊರಿಯಾ ಉಪದ್ವೀಪವನ್ನು ಅಣ್ವಸ್ತ್ರ-ರಹಿತ ಪ್ರದೇಶವಾಗಿಸುವ ಇಂಗಿತ ವ್ಯಕ್ತ ಪಡಿಸಿದೆ. ಯಾವುದೇ ಭವಿಷ್ಯದ ಯುದ್ಧವನ್ನು ಜಂಟಿಯಾಗಿ ವಿರೋಧಿಸುವುದಾಗಿ ಹೇಳಿದ್ದಾರೆ. ಕೊರಿಯನ್ನರ ಜನತೆಯ ಆಶಯದ ಮೇರೆಗೆ ಎರಡೂ ಕೊರಿಯಾಗಳ ಐಕ್ಯತೆಯತ್ತ ಸಾಗುವುದು ಒಪ್ಪಂದದ ಪ್ರಮುಖ ಅಂಶಗಳಲ್ಲಿ ಒಂದು. ಇದಕ್ಕಾಗಿ 'ಸಿದ್ಧಾಂತ ಮತ್ತು ಸಾಮಾಜಿಕ ವ್ಯವಸ್ಥೆ'ಯನ್ನು ಮೀರಿ ನಿಲ್ಲುವ ಆಶಯ ವ್ಯಕ್ತಪಡಿಸಿದೆ. ಐಕ್ಯ ಕೊರಿಯಾದ ಸ್ಥಾಪನೆಗಾಗಿ 'ಒಂದು ದೇಶ, ಎರಡು ವ್ಯವಸ್ಥೆಗಳು' ಎಂಬ ನೀತಿಯನ್ನು ಕೊರಿಯಾದ ಕ್ರಾಂತಿಯ ನಾಯಕ ಕಿಮ್-ಉಲ್-ಸಂಗ್ ರೂಪಿಸಿದ್ದರು. ಹಾಂಗ್ ಕಾಂಗ್ ಅನ್ನು ಚೀನಾದಲ್ಲಿ ಸೇರಿಸಿಕೊಳ್ಳಲು, ಇದೇ ನೀತಿಯನ್ನು ಚೀನಾ ಸಫಲವಾಗಿ ಜಾರಿ ಮಾಡಿತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಎರಡೂ ದೇಶಗಳ ಮತ್ತು ಐಕ್ಯ ಕೊರಿಯಾದ ಸಮಾನ ಸಮೃದ್ಧಿ ಒಪ್ಪಂದದ ಆಧಾರ ಶಿಲೆ ಎನ್ನಲಾಗಿದೆ. ಎರಡೂ ಕೊರಿಯಾಗಳ ನಡುವೆ ಕಳೆದ ಐವತ್ತು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಬೆಳೆದಿರುವ ಕಂದಕ ಕಹಿ ಕಡಿಮೆ ಮಾಡಲು, ಸ್ವಾಭಾವಿಕ ಸಂಬಂಧ ಬೆಳೆಸಲು ಹಲವು ಕ್ರಮಗಳ ಬಗ್ಗೆ ಶೃಂಗಸಭೆ ನಿರ್ಧರಿಸಿದೆ. ಕಡಲ ವ್ಯಾಪಾರ ಮತ್ತು ಮೀನುಗಾರಿಕೆ ಪ್ರದೇಶ ಬೆಳವಣಿಗೆ, ಜಂಟಿ ಕೈಗಾರಿಕಾ ಪಾರ್ಕ್ ವಿಸ್ತರಣೆ, ನೇರ ರೈಲು, ವಿಮಾನ ಮತ್ತು ಹೆದ್ದಾರಿ ರಸ್ತೆ ಸಾಗಾಣಿಕೆಯನ್ನು ಜನತೆ ಮತ್ತು ಸರಕುಗಳಿಗೆ ತೆರೆದು ವಿಸ್ತರಿಸುವುದು, ಒಡೆದ ಕುಟುಂಬಗಳ ಪುನರ್ಮಿಲನಕ್ಕೆ ಸಹಾಯ, ಬೀಜಿಂಗ್ ಒಲಿಂಪಿಕ್ಸ್‌ಗೆ ಒಂದೇ ರೈಲಿನಲ್ಲಿ ಸ್ಪರ್ಧಿಗಳು, ಸ್ಪರ್ಧಿಗಳ ಜಂಟಿ ಬೆಂಬಲಿಗರನ್ನು ಕಳಿಸುವುದು - ಮುಂತಾದ ಹಲವು 'ಮೊದಲ ಬಾರಿಯ' ಕ್ರಮಗಳ ಘೋಷಣೆ ಮಾಡಲಾಯಿತು.

ಈ ಒಪ್ಪಂದ ಇತ್ತೀಚಿನ ದಿನಗಳಲ್ಲಿ ಅತ್ಯಂತ ಸಕಾರಾತ್ಮಕ ಬೆಳವಣಿಗೆ ಎಂಬುದಕ್ಕೆ ಅನುಮಾನ ಇಲ್ಲ. ಅಮೆರಿಕನ್ ಏಕಚಕ್ರಾಧಿಪತ್ಯಕ್ಕೆ ಸವಾಲು ಹಾಕಿದ, ಅದರ ಇಷ್ಟದ ವಿರುದ್ಧ ಆದ ಬೆಳವಣಿಗೆ, ಇದು ಏಶ್ಯಾದಲ್ಲಿ ಅಮೆರಿಕದ ಶೀತಸಮರದ ಪಳೆಯುಳಿಕೆಯ ಕೊನೆಯ ಆರಂಭವನ್ನು ಪ್ರತಿನಿಧಿಸುತ್ತದೆ. ಇದನ್ನು ತನ್ನ ಹಿತಕ್ಕೆ ಅನುಗುಣವಾಗಿ ತಿರುಚಲು ವಿಕೃತಗೊಳಿಸಲು ಅಮೆರಿಕನ್ ಸಾಮ್ರಾಜ್ಯಶಾಹಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ ಎಂಬುದರಲ್ಲೂ ಏನೂ ಅನುಮಾನವಿಲ್ಲ. ಐಕ್ಯ ಕೊರಿಯಾ ಜರ್ಮನ್ ಪುನರೈಕ್ಯತೆಯ ದುರಂತದ ಹಾದಿಗಿಂತ ಭಿನ್ನವಾದ ಹಾದಿ ಹಿಡಿಯುವ ಭರವಸೆ ಮೂಡಿಸಿದೆ. ಅದಕ್ಕೆ ಬೇಕಾದ ಸನ್ನಿವೇಶ, ಪರಿಸರವೂ ಇದೆ. ಐಕ್ಯ ಕೊರಿಯಾ ನಿಜವಾಗಿಯೂ 'ಶಾಂತಿ, ಸಮೃದ್ಧಿ'ಗಳ ಸಾಮ್ರಾಜ್ಯಶಾಹಿ-ವಿರೋಧಿ ಹಾದಿಯನ್ನು ಹಿಡಿಯಲಿ ಎಂದು ಎಲ್ಲರ ಹಾರೈಕೆ.

# ಮುಶರಫ್ ಮತ್ತೆ ಪಾಕಿಸ್ತಾನದ ಅಧ್ಯಕ್ಷ ?

ಈ ಸಂಚಿಕೆ ಓದುಗರನ್ನು ಮುಟ್ಟುವ ಹೊತ್ತಿಗೆ ಮುಶರಫ್ ಮತ್ತೆ ಪಾಕಿಸ್ತಾನದ ಅಧ್ಯಕ್ಷರಾಗಿ ಚುನಾಯಿತರಾಗುವ ಎಲ್ಲಾ ಸಾಧ್ಯತೆಗಳು ಇವೆ. ಎರಡು ಪ್ರಮುಖ ಬೆಳವಣಿಗೆಗಳು ಕೆಲವು ದಿನಗಳ ಹಿಂದೆ ಅಸಾಧ್ಯವೆನಿಸಿದ್ದ ಇದನ್ನು ಸಾಧ್ಯ ಮಾಡಿವೆ. ಮುಶರಫ್ ಬೆನಝಿರ್ ಜತೆ ಮಾಡಿದ ಕೊನೆಗಳಿಗೆ ಒಪ್ಪಂದ ಪ್ರಮುಖವಾದದ್ದು. ಮಾಜಿ ಮಂತ್ರಿಗಳು, ಶಾಸಕರುಗಳ ವಿರುದ್ಧ ಭ್ರಷ್ಟಾಚಾರ ಮುಂತಾದ ಕೇಸುಗಳ ಬಗ್ಗೆ ಕಾನೂನನ್ನು ಸಡಿಲಗೊಳಿಸುವ ಮತ್ತು ಬೆನಝಿರ್ ಕುಟುಂಬದ ವಿರುದ್ಧ ಕೇಸುಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಭರವಸೆ - ಈ ಒಪ್ಪಂದದಲ್ಲಿ ಸೇರಿದೆ ಎನ್ನಲಾಗಿದೆ. ಇದಕ್ಕೆ ಬದಲಾಗಿ ಪ್ರಮುಖ ವಿರೋಧ ಪಕ್ಷಗಳಲ್ಲಿ ಒಂದಾದ ಬೆನಝಿರ್ ಪಕ್ಷ, ಅಧ್ಯಕ್ಷೀಯ ಚುನಾವಣೆಯನ್ನು ಬಹಿಷ್ಕರಿಸಿ ಸಾಮೂಹಿಕ ರಾಜೀನಾಮೆ ಕೊಡುವ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಮುಶರಫ್-ಬೆನಝಿರ್ ಕೊನೆಗಳಿಗೆ ಒಪ್ಪಂದದಲ್ಲಿ ಅಮೆರಿಕನ್ ಸರಕಾರ ಪ್ರಮುಖ ಪಾತ್ರ ವಹಿಸಿತು ಎನ್ನಲಾಗಿದೆ. ಸುಪ್ರೀಂ ಕೋರ್ಟು ಎರಡು ಪ್ರತ್ಯೇಕ ತೀರ್ಪುಗಳಲ್ಲಿ ಮುಶರಫ್ ಚುನಾವಣೆಗೆ ಅಭ್ಯರ್ಥಿಯಾಗಲು ಕಾನೂನು ತಡೆ ಇಲ್ಲ ಎಂದಿತು.



ಆದರೆ ಮುಶರಫ್ ರ ಎಲ್ಲಾ ಸಂಕಟಗಳು ನಿವಾರಣೆಯಾಗಿಲ್ಲ. ಸುಪ್ರೀಂ ಕೋರ್ಟು ತೀರ್ಪು ಮಧ್ಯಂತರ ತೀರ್ಪು ಆಗಿದ್ದು, ಚುನಾವಣೆ ನಡೆಸುವುದಕ್ಕೆ ಸೀಮಿತವಾಗಿದೆ. ಅಂತಿಮ ತೀರ್ಪು ಬರುವವರೆಗೆ ಫಲಿತಾಂಶ ಪ್ರಕಟಿಸುವಂತಿಲ್ಲ ಎಂದು ವಿಧಿಸುವ ಮೂಲಕ ಪಾಕಿಸ್ತಾನದ ಸಸ್ಪೆನ್ಸ್ ಮುಂದುವರೆಯಲಿದೆ. ಚುನಾವಣೆಯ ದಿನ ಭಾರಿ ಜನತಾ ಪ್ರತಿಭಟನೆ ಅಥವಾ ಇತರ ಬೆಳವಣಿಗೆಗಳು ಮುಶರಫ್ ಲೆಕ್ಕಾಚಾರ ತಲೆಕೆಳಗು ಮಾಡಿದರೆ ಆಶ್ಚರ್ಯವಿಲ್ಲ. ಚುನಾವಣೆಯ ಮತ ಗಳಿಕೆಯಲ್ಲಿ ಭಾರೀ ಆಶ್ಚರ್ಯ ನಿರೀಕ್ಷಿತವಲ್ಲ. ಮುಶರಫ್ ಗೆ ಸರಳ ಬಹುಮತ ದೊರೆಯುವ ಬಗ್ಗೆ ಅನುಮನವಿಲ್ಲ.

# ಬೆಂಗಳೂರು ಗ್ರಾಮಾಂತರ : ಭ್ರಮೆಗಳ ಅಲೆಯಲ್ಲಿ ಬದುಕಿನ ಸಣ್ಣ ಸೆಲೆಯ ಅಡಕ

ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜೆಡಿ(ಎಸ್) ಪ್ರಾಬಲ್ಯ ಪಡೆದಿದೆ. ದೇವನಹಳ್ಳಿ, ಕನಕಪುರ, ಚನ್ನಪಟ್ಟಣ, ಮಾಗಡಿಗಳಲ್ಲಿ ಸ್ಥಳೀಯ ಸಂಸ್ಥೆಯ ಆಡಳಿತ ಜೆಡಿ(ಎಸ್) ವಶವಾಗಿದೆ. ಅಂತೆಯೇ ಆನೇಕಲ್‌ನಲ್ಲಿ ಬಿಜೆಪಿ, ಹಾಗೂ ಹೊಸಕೋಟೆ ಮತ್ತು ನೆಲಮಂಗಲದಲ್ಲಿ ಕಾಂಗ್ರೆಸ್ ವಶವಾಗಿದೆ. ಕಳೆದ 10 ವರ್ಷಗಳ ನಂತರ ಪ್ರಥಮ ಜಾರಿ ಹೊಸಕೋಟೆಯಲ್ಲಿ ಕಾಂಗ್ರೆಸ್ ಗೆಲುವು ಪಡೆದಿವೆ. ಆದರೆ ವಿಜಯಪುರ ಮತ್ತು ದೊಡ್ಡಬಳ್ಳಾಪುರದಲ್ಲಿ ಸ್ಪಷ್ಟ ಬಹುಮತ ಯಾರಿಗೂ ಬಾರದೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ದೊಡ್ಡಬಳ್ಳಾಪುರದಲ್ಲಿ ಸ್ಪರ್ದಿಸಿದ್ದ 3 ಸ್ಥಾನಗಳಲ್ಲಿ 1 ಸ್ಥಾನವನ್ನು ಗೆದ್ದಿರುವ ಸಿಪಿಐ(ಎಂ) ಮುಂದಿನ ಪುರಸಭೆಯ ಆಡಳಿತಕ್ಕೆ ನಿರ್ಣಯಕವಾಗಲಿದೆ. ಸಿಪಿಐ(ಎಂ) ಬೆಂಬಲದ ಮೇಲೆ ಅಲ್ಲಿನ ಆಡಳಿತ ಯಾರ ಕೈ ಸೇರಲಿದೆ ಎಂಬುದು ನಿರ್ಣಯವಾಗಲಿದೆ.

ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್ ಭಾರಿ ಹಿನ್ನಡೆ ಅನುಭವಿಸಿರುವಾಗಲೇ, ಅಧಿಕಾರದ ಮದದಲ್ಲಿ ರಾಜಧಾನಿಯ ಉಸ್ತುವಾರಿಯ ಅಹಂ, ಬೆಂಗಳೂರು ಅಭಿವೃದ್ಧಿ ಸಚಿವರ ಖಾತೆ ಹೊಂದಿದ್ದು ಇಡೀ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸಿದ್ದ ಬಿಜೆಪಿಗೆ ಆನೇಕಲ್‌ನಲ್ಲಿ 15 ಸ್ಥಾನಗಳು, ದೊಡ್ಡಬಳ್ಳಾಪುರದಲ್ಲಿ 4 ಸ್ಥಾನ ಹೊರತುಪಡಿಸಿ ಬೇರೆಲ್ಲೂ ಸ್ಥಾನ ಪಡೆಯಲು ಜನತೆ ಬಿಟ್ಟಿಲ್ಲ. ರಾಜಧಾನಿಯ ಸೆರಗಿನಂತಿರುವ ಈ 9 ನಗರಗಳ ಸ್ಥಳೀಯ ಸಂಸ್ಥೆಗಳಲ್ಲಿ ಏನಾದರೂ ಮಾಡಿ ಹಿಡಿತ ಸಾಧಿಸಬೇಕು, ಆ ಮೂಲಕ ಚಿನ್ನದ ಬೆಲೆಯುಳ್ಳ ಈ ಭೂಮಿಯ ಮೇಲೆ ಅಘೋಷಿತ ಅಧಿಕಾರ ಚಲಾಯಿಸಿ, ರಿಯಲ್ ಎಸ್ಟೇಟ್ ದಂಧೆಯ ಖಳನಾಯಕತ್ವಕ್ಕೆ ಪೈಪೋಟಿ ನಡೆಸುವಂತೆಯೇ ಜೆಡಿ(ಎಸ್), ಬಿಜೆಪಿ, ಕಾಂಗ್ರೆಸ್ ಜಿದ್ದಾಜಿದ್ದಿಯಾಗಿ ಸೆಣಸಿ, ಹಣ ಹೆಂಡ, ಸೀರೆ ಉಡುಗೊರೆಗಳ ಮಹಾಪೂರವನ್ನೇ ಹರಿಸಿದ್ದಾರೆ. ರಿಯಲ್ ಎಸ್ಟೇಟ್‌ನ ಹಣ ಹಾಗೂ ಬೆಂಗಳೂರಿಗೆ ಹರಿದು ಬರುತ್ತಿರುವ ಬಂಡವಾಳದ ಎಂಜಲು ಸವಿಯುವ ಆದರ ಭಟ್ಟಂಗಿಗಳಂತೆ ವರ್ತಿಸಲು ಸ್ಥಳೀಯ ಆಡಳಿತವನ್ನು ತಮ್ಮ ಕೈವಶಪಡಿಸಿಕೊಳ್ಳಲು, ಮಾಡದ ಯತ್ನಗಳೇ ಇಲ್ಲ ಎಂಬಂತೆ ಮೂರು ಪಕ್ಷಗಳು ಕಾದಾಡಿದವು. ಆದರೆ ಜನತೆ ಮಾತ್ರ ಇವರಿಗೆ ಪಾಠ ಕಲಿಸಲು ಶಕ್ತರಿರುವ ಶಕ್ತಿಗಳನ್ನು ಯಾವುದೇ ಹಣ, ಆಮಿಷ, ಹೆಂಡ, ಸೀರೆ ಪಾರೆ ಮುಂತಾದ ಆಸೆಗಳಿಗೆ ಬಲಿಯಾಗದೆ ಪ್ರಾಮಾಣಿಕವಾಗಿ ಮತ ಚಲಾಯಿಸಲು ಸಿದ್ದರಿದ್ದಾರೆ ಎಂಬುದರ ಸಂಕೇತವೇ ದೊಡ್ಡಬಳ್ಳಾಪುರ ನಗರಸಭೆಯ ವಾರ್ಡ್12 ರಲ್ಲಿನ ಸಿಪಿಐ(ಎಂ) ಅಭ್ಯರ್ಥಿ ಕಾಂ: ಹೇಮಂತ್‌ರಾಜ್‌ರವರ ಗೆಲುವು, ಅದರಲ್ಲೂ ಮುಂದಿನ ಆಡಳಿತದ ದಿಕ್ಕು ದೆಸೆ ನಿರ್ಧರಿಸುವಂತಾ ನಿರ್ಣಾಯಕ ಗೆಲುವು.

ಈ ನಡುವೆ ಅನುಕೂಲ ಸಿಂಧು ರಾಜಕಾರಣದ ಭಾಗವಾಗಿ ಕೆಲವೆಡೆ ಕಾಂಗ್ರೆಸ್ ಜೆಡಿ(ಎಸ್) ಇನ್ನೂ, ಕೆಲವೆಡೆ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಬಿಜೆಪಿ, ಹೊಂದಾಣಿಕೆಗಳು ಒಳಗೊಳಗೆ ನಡೆದಿವೆ. ಆದರೂ ಅಂತಹ ಅಪವಿತ್ರ ಮೈತ್ರಿಗಳನ್ನೆಲ್ಲಾ ಜನತೆ ತಿರಸ್ಕರಿಸಿದ್ದಾರೆ. ಬಿಎಸ್‌ಪಿಯೂ ಸಹ ಕೆಲವೆಡೆ ಸ್ಪರ್ಧಿಸಿದೆ, ಆದರೆ ಕನಕಪುರದ ಒಂದು ಕ್ಷೇತ್ರದಲ್ಲಿ ಮಾತ್ರ ಗೆಲುವು ಪಡೆದಿದೆ. ಬಹುತೇಕ ಕಡೆ ನಾಲ್ಕನೇ ಅಥವಾ ಕೆಲವೆಡೆ ಮೂರನೇ ಸ್ಥಾನಕ್ಕೆ ಸೀಮಿತವಾಗಿದೆ. ಆದರೆ ಕಾಂಗ್ರೆಸ್‌ಗೆ ಮಾತ್ರ ಗಂಭೀರ ಹೊಡೆತ ನೀಡಿದೆ.

**ಹೊಸಕೋಟೆ ಜೆಡಿ(ಎಸ್) ಭದ್ರಕೋಟೆ ಛಿದ್ರ**

ಕಳೆದ ಹತ್ತಾರು ವರ್ಷಗಳಿಂದ ಹೊಸಕೋಟೆ ಸ್ಥಳೀಯ ಸಂಸ್ಥೆಯ ಮೇಲೆ ಹಿಡಿತ ಸಾಧಿಸಿದ್ದ ಜೆಡಿ(ಎಸ್) ಬಚ್ಚೇಗೌಡರ ಭದ್ರಕೋಟೆ ಜಿಲ್ಲೆಯಾದ್ಯಂತ ಇರುವ ಜೆಡಿ(ಎಸ್) ಪರ ಅಲೆಯ ನಡುವೆಯೂ ಛಿದ್ರವಾಗಿದೆ. ಜೆಡಿ(ಎಸ್) ಹಾಗೂ ಬಚ್ಚೇಗೌಡರ ಪಟಾಲಂ ನಡೆಸಿದ ಗುಂಡಾಗಿರಿ, ಕಾರ್ಮಿಕರ ಮೇಲಿನ ದಾಳಿಗಳು, ಮಾಲೀಕರ ಪರ ವಹಿಸುವ ಅವರ ನಗ್ನ ವರ್ತನೆಯನ್ನು ಹೊಸಕೋಟೆ ಜನತೆ ತಿರಸ್ಕರಿಸಿರುವುದರ ಪ್ರತೀಕವಾಗಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಸ್ಥಳೀಯ ನಾಗರೀಕ ಸೌಲಭ್ಯಗಳಿರದೆ ವಂಚಿತರಾಗಿರುವ ಜನತೆ ಅವುಗಳಿಗಾಗಿ ಹಪಹಪಿಸುವಂತೆ, ಸೂರು ನೀರು, ರಸ್ತೆ, ಚರಂಡಿ ಮುಂದಾದರು ಕೊಡುವಂತಾಗಲಿ ಎಂಬಂತೆ ತಮ್ಮ ಜನಾದೇಶ ನೀಡಿದ್ದಾರೆ. ಅವುಗಳನ್ನು ನೀಡಲು ವಿಫಲರಾದವರನ್ನು ಸೋಲಿಸಿ ಅವರ ಬಿಟ್ಟರೆ ಉಳಿದವರಿವರೆ ಎಂಬಂತೆ ಆಯ್ಕೆ ಮಾಡಿದ್ದಾರೆ. ಎಲ್ಲರಿಗೂ ಸೂರು ನಿವೇಶನ ನೀಡುವ ಭರವಸೆಯ ಭ್ರಮೆ ಬಿತ್ತಿರುವ, ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮ ವಾಸ್ತವದ ಬಿಸಿಗೆ ಬೆಚ್ಚಾಗಿ ಜೆಡಿ(ಎಸ್) ಪರ ಮತ ನೀಡಿರುವಂತೆ ಗ್ರಾಮಾಂತರ ಜಿಲ್ಲೆಯ ನಗರಗಳ ಪುರಗಳ ಮತದಾರರ ಜನಾದೇಶ ವ್ಯಕ್ತವಾಗಿದೆ. ಆದರದೆ ಸಮಯದಲ್ಲೇ ಭ್ರಮೆಗಳಲ್ಲಿ ಬದುಕು ಮುಖ್ಯ ಎಂಬಂತೆ, ಸಣ್ಣಗೆ ಎದ್ದು ಆಳುವ ಮಂದಿಗೆ ಸವಾಲಾಗಿ ನಿಂತ ಹೊಸಕೋಟೆಯ ಕಾರ್ಮಿಕರ ಹೋರಾಟ, ಹೊಸಕೋಟೆಯ ಜೆಡಿ(ಎಸ್) ಭದ್ರಕೋಟೆಯನ್ನು ಛಿದ್ರಗೊಳಿಸಿದೆ. ಅಂತೆಯೇ ನೆಲಮಂಗಲದಲ್ಲೂ ನೆಲಯೂರ ಬಹುದಾಗಿದ್ದ ಜೆಡಿ(ಎಸ್) ಮುನ್ನಡೆಗೆ ಅಲ್ಲಿನ ಕಾರ್ಮಿಕರ ಹೋರಾಟ, ಅದರ ಮೇಲಿನ ಜೆಡಿ(ಎಸ್) ಪರ ವಹಿಸುವವರ ದಾಳಿಗಳೇ ತಡೆಯಾಗಿ ಪರಿಣಮಿಸಿವೆ. ಅಂತೆಯೇ ನಗ್ನವಾಗಿ ಕಾರ್ಮಿಕರಿಗೆ ಸವಾಲಾಗಿ ನಿಂತು ಗೂಂಡಾಗಿರಿ ನಡೆಸಿ ಮಾಲೀಕರ ಪರ ವಕಾಲತ್ತು ವಹಿಸಿದ ಜೆಡಿ(ಎಸ್) ಕಾಂಗ್ರೆಸ್ ಕುಳಗಳು ಒಂದಾಗಿ ನಿಂತರು, ಗೆಲುವು ಸಾಧಿಸಲಾಗದ ಬಿಜೆಪಿಗೆ ಹಿಂದಿದ್ದ 11 ಸ್ಥಾನಗಳನ್ನು 15 ಅನ್ನಾಗಿಸಿಕೊಳ್ಳಲು ಆನೇಕಲ್‌ನಲ್ಲಿ ಅನುವುಗೊಳಿಸಿವೆ. ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ 3 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸಿಪಿಐ(ಎಂ) ಒಂದರಲ್ಲಿ ಗೆಲುವು ಸಾಧಿಸಿ, ಉಳಿದೆಡೆ 3ನೇ ಸ್ಥಾನ ಪಡೆದಿವೆ. ಅಂತೆಯೇ ಆನೇಕಲ್‌ನ ಒಂದು ಸ್ಥಾನದಲ್ಲಿ ಸ್ಪರ್ಧಿಸಿ 3ನೇ ಸ್ಥಾನ ಪಡೆದಿದೆ. ಒಟ್ಟಾರೆ ಗ್ರಾಮಾಂತರ ಜಿಲ್ಲೆಯ ಮತದಾರರು ಭ್ರಮೆಗಳ ಅಲೆಯ ನಡುವೆಯೂ ಬದುಕಿನ ಸೆಲೆಯೊಂದನ್ನು ಸಣ್ಣಗೆ ತೋರಿದ್ದಾರೆ.

**- ಕೆ.ಎನ್.ಉಮೇಶ್**

## ...ಅನೈತಿಕ ಹಾದಿ ಹಿಡಿದ ರಾಜಕೀಯ ಪಕ್ಷಗಳು

ಪುಟ 13 ರಿಂದ

ಕಾರ್ಯ ನಿರ್ವಹಿಸಿದ್ದವು. ಮತ ಪಡೆಯಲಿಕ್ಕಾಗಿ ರಾಜಕಾರಣಿಗಳು ಎಂತಹ ನೀಚ ಮಟ್ಟಕ್ಕಾದರೂ ಇಳಿಯುತ್ತಾರೆ ಎಂಬುದು ಇದರಿಂದ ಸಾಬೀತಾಗಿದೆ.

ಬಾಗೇಪಲ್ಲಿಯ ಈ ಹಿಂದಿನ ಪಟ್ಟಣ ಪಂಚಾಯತಿಯಲ್ಲಿ ಮೂರು ಸ್ಥಾನಗಳನ್ನು ಹೊಂದಿದ್ದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸ್ಥಾನ ಬಲವನ್ನು ಆರಕ್ಕೆ ಹೆಚ್ಚಿಸಿಕೊಂಡಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶ ಎಂದರೆ ಸಿಪಿಎಂ ಗೆದ್ದಿರುವ ಎಲ್ಲ ಸ್ಥಾನಗಳೂ ಹೆಚ್ಚಾಗಿ ಬಡವರು, ದಲಿತರು ಮತ್ತು ದುಡಿಯುವ ಜನ ಹೆಚ್ಚಾಗಿ ವಾಸ ಮಾಡುವ ವಾರ್ಡ್‌ಗಳಿಂದ ಜಯಗಳಿಸಿದ್ದಾರೆ. ಇದನ್ನು ಹೊರತುಪಡಿಸಿದರೆ ಕೆಜಿಎಫ್‌ನಲ್ಲಿ ಒಂದು ಸ್ಥಾನ, ಗುಡಿಬಂಡೆಯಲ್ಲಿ ಒಂದು ಸ್ಥಾನವನ್ನು ಸಿಪಿಎಂ ಗಳಿಸಿದೆ. ಕೋಲಾರದ ಎರಡನೇ ವಾರ್ಡ್‌ನಲ್ಲಿ ಗಾಂಧಿನಗರ ನಾರಾಯಣ ಸ್ವಾಮಿ 69 ಮತಗಳಿಂದ ಸೋಲನುಭವಿಸಿದರು. ಈ ವಾರ್ಡ್‌ನಲ್ಲಿ ವರ್ತೂರ್ ಪ್ರಕಾಶ್ 20 ಲಕ್ಷ ರೂ.ಗಳನ್ನು ವೆಚ್ಚಮಾಡಿದ್ದಾನೆ. ಕೋಲಾರ ನಗರದ ಟಮಕ ವಾರ್ಡ್‌ನಲ್ಲಿ ಇದೇ ಮೊದಲ ಬಾರಿಗೆ ಪಕ್ಷದ ವತಿಯಿಂದ ಜೆಎಂಎಸ್ ಮುಖಂಡರಾದ ಕಲಾದೇವಿ(ಆಶಾ) ಸ್ಪರ್ಧಿಸಿ ಗಣನೀಯ ಪ್ರಮಾಣದ ಮತಗಳನ್ನು ಗಳಿಸಿದ್ದಾರೆ. ಇಷ್ಟೆಲ್ಲಾ ಭರಾಟೆಗಳ ನಡುವೆಯೂ ಮದ್ಯವಾಗಲಿ ಹಣವಾಗಲಿ ನೀಡದ ಸಿಪಿಎಂ ಪಕ್ಷದ ಅಭ್ಯರ್ಥಿಗಳು ಜನತೆಯ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಾಮಾಣಿಕವಾದ ದುಡಿಯುವ ವರ್ಗದ ಮತಗಳನ್ನು ಗಣನೀಯ ಪ್ರಮಾಣದಲ್ಲಿ ಪಡೆದು ಬಂಡವಾಳಶಾಹಿ ಪಕ್ಷಗಳು ಕೀಳು ರಾಜಕೀಯಕ್ಕೆ ಪರ್ಯಾಯವಿದೆ ಎಂಬುದನ್ನು ತೋರಿಸಿದ್ದಾರೆ.

ಶ್ರೀನಿವಾಸಪುರ ಪಟ್ಟಣ ಪಂಚಾಯ್ತಿಯಲ್ಲಿ ಹಾಲಿ ಶಾಸಕ ಕಾಂಗ್ರೆಸ್‌ನ ರಮೇಶ್ ಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಭಾರಿ ಹಿನ್ನಡೆ ಅನುಭವಿಸಿದೆ. ಇಲ್ಲಿ ಜೆಡಿಎಸ್ ಬಹುಮತ ಸಾಧಿಸಿದೆ. ಉಳಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಆಯಾ ಶಾಸಕರು ಪ್ರತಿನಿಧಿಸುವ ಪಕ್ಷಗಳ ಅಭ್ಯರ್ಥಿಗಳು ಬಹುಮತ ಗಳಿಸಿದ್ದಾರೆ.

ಕೋಲಾರ ನಗರಸಭೆ ಚುನಾವಣೆ ಶಾಸಕ ಶ್ರೀನಿವಾಸಗೌಡರ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಕಾಂಗ್ರೆಸ್‌ನಿಂದ ಅಮಾನತು ಗೊಂಡಿರುವ ವರ್ತೂರ್ ಪ್ರಕಾಶ್, ಶ್ರೀನಿವಾಸಗೌಡರಿಗೆ ಸೆಡ್ಡು ಹೊಡೆದು ನಿಂತಿದ್ದರು. ಅಧಿಕೃತವಾಗಿ ಹದಿಮೂರು ಮಂದಿಯನ್ನು ಜಯಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಪ್ರಕಾಶ್ ಕಾಂಗ್ರೆಸ್‌ನಿಂದ ಆಯ್ಕೆಯಾಗಿರುವ ಐದು ಮಂದಿಯನ್ನು ತಮ್ಮತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿ ಮರೆಯುತ್ತಿದ್ದ ಶ್ರೀನಿವಾಸಗೌಡರಿಗೆ ಚುರುಕು ಮುಟ್ಟಿಸಿದ್ದಾರೆ.

ಚಿಂತಾಮಣಿ ನಗರಸಭೆ ಚುನಾವಣೆ ಶಾಸಕ ಸುಧಾಕರ ರೆಡ್ಡಿ ಮತ್ತು ಕೆ.ಎಂ.ಕೃಷ್ಣಾರೆಡ್ಡಿ ಮತ್ತು ಸಂಸದ ಕೆ.ಎಚ್.ಮುನಿಯಪ್ಪ ನಡುವಣ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಕಾಂಗ್ರೆಸ್‌ನಿಂದ ನೀಡಿದ್ದ ಪಕ್ಷದ ಬಿ ಫಾರಂಗಳನ್ನು ಹಿಂದಿರುಗಿಸಿದ ಶಾಸಕರು ತಮ್ಮ ಅಭ್ಯರ್ಥಿಗಳು ಬಹುಮತ ಸಾಧಿಸುವ ಮೂಲಕ ಸಂಸದರಿಗೆ ಮಣ್ಣು ಮುಕ್ಕಿಸಿದ್ದಾರೆ. ಜೆಡಿಎಸ್ ಎರಡನೇ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಇದರಿಂದ ಕೆ.ಎಚ್.ಮುನಿಯಪ್ಪ ಗುಟುಕು ನೀರು ಕುಡಿಯುವಂತಾಗಿದೆ.

ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಮತ್ತು ಮುಳಬಾಗಿಲಿನಲ್ಲಿ ಜೆಡಿಎಸ್ ಜಯಭೇರಿ ಸಾಧಿಸಿದೆ. ಮತ್ತೊಂದು ದುರಂತದ ವಿಷಯ ಎಂದರೆ ಮಾಲೂರು ಪುರಸಭೆಯಲ್ಲಿ ಬಿಜೆಪಿ ಎಲ್ಲ ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಗೌರಿಬಿದನೂರು, ಕೆ.ಜಿ.ಎಫ್, ಬಂಗಾರಪೇಟೆ, ಗುಡಿಬಂಡೆ, ಬಾಗೇಪಲ್ಲಿಗಳಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ.

**- ಅಪ್ಪು**

## ಅವಕಾಶಕ್ಕಾಗಿ ಕಾದಿರುವ ರಣಹದ್ದುಗಳು

ಪುಟ 3 ರಿಂದ

ಆಡಮ್ಸ್ ಬಿಡ್ಜ್ ಎನ್ನಲಾಗುವ ಸೇತುವೆಯಂತಹ ರಚನೆಯನ್ನೇ ರಾಮ ಕಟ್ಟಿಸಿದ ದೆಂದು ಪ್ರತಿಪಾದಿಸುತ್ತಿರುವುದು. ಇದು ಮಾನವ ನಿರ್ಮಿತ ಎಂದೂ, ನಾಸಾದಂತಹ ಅಂತರಿಕ್ಷ ಭೂಗೋಳ ವಿಜ್ಞಾನಿಗಳು ಹೇಳಿದ್ದಾರೆಂದು ಪ್ರಸ್ತಾಪಿಸಿ ನಿರುದ್ದೇಶಕ್ಕೆ ವಿಜ್ಞಾನದ ಸಮರ್ಥನೆ ನೀಡಲು ಹೋಗಿ ನಾಸಾ ನಿರಾಕರಿಸಿದಾಗ ಅಪಹಾಸ್ಯಕ್ಕೆ ಈಡಾದುದು ಇದೆ. ಕಳೆದ ಚುನಾವಣೆಯಲ್ಲಿ ಸೋತು ಹೋದ ನಂತರವೂ ಸತತವಾಗಿ ತಿರಸ್ಕಾರಕ್ಕೆ ಒಳಗಾಗುತ್ತಿರುವ ಬಿಜೆಪಿ ಜನರ ಭಾವನೆ ಕೆರಳಿಸುವ ಒಂದು ಹರಣಕ್ಕಾಗಿ ಕಾಯುತ್ತಿತ್ತು. ರಾಮಸೇತುವಿನ ವಿವಾದ ದಕ್ಕೆ ಒಂದು ಕಾರಣ ಸಿಕ್ಕಿದೆ. ಕೇಂದ್ರ ಸರ್ಕಾರ ಕೋರ್ಟಿಗೆ ಸಲ್ಲಿಸಿದ ಅಫಿಡವಿಟ್ ಬಿಜೆಪಿಗೆ ವರದಾನವಾಗಿ ಜೀವ ನೀಡಿತು. ಕರುಣಾನಿಧಿಯವರ ಹೇಳಿಕೆಯ ಸುತ್ತಲೇ ದೇಶಾದ್ಯಂತ ಪ್ರತಿಭಟನೆಗಳನ್ನು ನಡೆಸಿತು.

ಈ ದೇಶದಲ್ಲಿ ದೇವರು, ಧರ್ಮ, ನಂಬಿಕೆ ಇರಿಸಿಕೊಳ್ಳಲು ಇರುವಂತೆ ನಂಬದವರಿಗೂ ಅವಕಾಶ ಇದೆ. ನಾಸ್ತಿಕವಾದ ಭಾರತೀಯ ತತ್ವ ಜ್ಞಾನದ ಭಾಗವೇ ಆಗಿದೆ. ಹೀಗಿರುವಾಗ ಕರುಣಾನಿಧಿಯವರ ತಲೆ ಕಡಿದು ತಂದರೆ ಕೋಟಿ ರೂಪಾಯಿಗಳನ್ನು ಘೋಷಿಸುವ ಭಜರಂಗ ದಳದ ನಾಯಕರ ಮಾತು ಅನಾಗರೀಕ, ಬರ್ಬರ ಮಾತ್ರವಲ್ಲ ತಾಲಿಬಾನ್‌ಗಳ ಅವೃತಿಯಲ್ಲೇ ಆಗಿದ್ದಾರೆ. ಹೀಗೆ ಕೊನೆಗೆ ಸುಪಾರಿ ನೀಡಿದರೂ ಅವರ ಮೇಲೆ ಕಾನೂನು ಕ್ರಮ ಜರುಗಿಸಿಲ್ಲ.

ಇದೇ ಸಂದರ್ಭದಲ್ಲಿಯೇ ನಮ್ಮ ನ್ಯಾಯಾಲಯಗಳ ಹೇಗೆ ವರ್ತಿಸುತ್ತಿವೆ ಎಂಬುದೂ ಕೂಡ ವಿಮರ್ಶಿಸಬೇಕಾಗಿದೆ. ಆರ್.ಎಸ್.ಎಸ್.ನ ಧಾಳಿ ಜೀವಂತದಹನ, ಪ್ರತಿಭಟನೆ ತಮಿಳುನಾಡಿನಲ್ಲಿ ಪ್ರತಿಭಟನೆ ಬಂದ್‌ಗೆ ಕರೆ ನೀಡಿದ್ದರ ಬಗ್ಗೆ ಸುಪ್ರಿಂಕೋರ್ಟ್ ತೀವ್ರ ಅಸಹನೆ ವ್ಯಕ್ತಪಡಿಸಿದ್ದಲ್ಲದೇ ಸರ್ಕಾರವನ್ನೇ ವಜಾ ಮಾಡಬೇಕೆಂದು ಹೇಳಿದ್ದು ನ್ಯಾಯಾಂಗ ತನ್ನ ವ್ಯಾಪ್ತಿಯನ್ನೇ ಮೀರಿದ ಕ್ರಮವಾಗಿದೆ.

ಹೀಗೆ ಉರಿಹಚ್ಚಿ ಸಂಘಪರಿವಾರ ಮೈಕಾಯಿಸಿಕೊಳ್ಳುತ್ತಿರುವಾಗ ಬಿಜೆಪಿಗೆ ಅಧಿಕಾರ ಹಸ್ತಾಂತರ ಚರ್ಚೆ ನಡೆಯುತ್ತಿರುವಾಗಲೇ ವಿಶ್ವ ಹಿಂದೂ ಪರಿಷತ್, ಭಜರಂಗದಳಗಳು ಬಾಬಾ ಬುಡನ್‌ಗಿರಿಗೆ ತೆರಳಿ ಹಿಂದೂ ಪದ್ಧತಿಯಂತೆ ಪೂಜೆ ಸಲ್ಲಿಸಬೇಕೆಂದು ರ್‍ಯಾಲಿ ನಡೆಸಿವೆ. 'ದತ್ತ ಜಯಂತಿ' ಆಚರಣೆಗೆ ಇರುಮುಡಿ ಸಲ್ಲಿಸಲು ಲಕ್ಷಾಂತರ ಜನರನ್ನು ಆಣಿ ನೆರೆಸುವುದಾಗಿಯೂ ಭಜರಂಗದಳದ ಪ್ರಕಟಿಸಿದೆ. ಈಗಾಗಲೇ ಮುಜರಾಯಿ ಇಲಾಖೆಯೇ(ನಾಗರಾಜಶೆಟ್ಟಿ ಸಚಿವ) ಅದು 1975 ರ ಹಿಂದಿನ ಆಚರಣೆಗೆ ಸೀಮಿತವಿರಬೇಕೆಂಬುದನ್ನು ಪುನರ್ ವಿಮರ್ಶಿಸಲು ನ್ಯಾಯಾಲಯಕ್ಕೆ ಹೋಗಿದೆ. ಅಂದರೆ ಬಾಬಾಬುಡನ್‌ಗಿರಿಯನ್ನು ಒಳಗೊಂಡು ವೈವಿಧ್ಯಮಯ, ಬಹು ಸಂಸ್ಕೃತಿ ಕೋಮು ಸೌಹಾರ್ದತೆಯನ್ನು ಒಪ್ಪಲು ಅದು ಸಿದ್ದವಿಲ್ಲ ಎಂಬುದನ್ನು ಮತ್ತೆ ಸಾಬೀತುಪಡಿಸುತ್ತಿದೆ. ಇದನ್ನೇ ಹಿಡಿದು ರಣರಂಗವನ್ನಾಗಿಸಬಯಸುತ್ತಿದೆ.

ರಕ್ತದಾಹದ ಈ ಪರಿವಾರಕ್ಕೆ ಅಧಿಕಾರ ಕೊಡಬೇಕೆಂದು ಬುದ್ಧಿಜೀವಿಗಳನ್ನು ಒಳಗೊಂಡು ವಾದಿಸುವುದು ಎಂತಹ ಹೊಣೆಗಾರಿಕೆ?




# 'ಕೃಷ್ಣ'ನಿಂದ ನಿರಾಸೆ

**ಎಂದಿನಂತೆ ಚುರುಕಾದ ಅಭಿನಯ, ಮನಮಿಡಿಯುವ ಭಾವಾಭಿನಯದಿಂದ ಗಣೇಶ್ ಗಮನಸೆಳೆದರೂ ನಾಯಕ ನಟನೊಬ್ಬನಿಂದಲೇ ಚಿತ್ರವನ್ನು ಮೇಲೆತ್ತಲು ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ 'ಕೃಷ್ಣ'.**

ಯಶಸ್ಸಿನ ಅಲೆಯ ಮೇಲೆ ತೇಲುತ್ತಿರುವ ಗಣೇಶ್‌ರ ಮತ್ತೊಂದು ಚಿತ್ರ ಬಿಡುಗಡೆಯಾಗಿದೆ. ಚಿತ್ರ 'ಕೃಷ್ಣ'. ಚಿತ್ರದ ನಾಯಕ ಟಿ.ವಿ. ಕಾರ್ಯಕ್ರಮವೊಂದರ ನಿರೂಪಕ. ಗಣೇಶ್ ಕೂಡಾ 'ಕಾಮಿಡಿ ಟೈಂ' ಕಾರ್ಯಕ್ರಮದ ಮೂಲಕ ನಿರೂಪಕರಾಗಿಯೇ ಯಶಸ್ಸು ಕಂಡವರು. ತಮ್ಮ ಹಿಂದಿನ ಈ ವೃತ್ತಿಯ ಮೇಲಿನ ಅಭಿಮಾನದಿಂದಲೇ ಈ ಚಿತ್ರದಲ್ಲಿ ಅಭಿನಯಿಸಿರುವ ಅವರು ಬಹುಶಃ ಮೊದಲ ಬಾರಿಗೆ ಸೋಲಿನ ರುಚಿ ನೋಡುವ ಸಾಧ್ಯತೆಯಿದೆ.

ಗಣೇಶ್‌ರವರನ್ನು ನಾಯಕ ನಟನನ್ನಾಗಿ 'ಚೆಲ್ಲಾಟ'ದ ಮೂಲಕ ಪರಿಚಯಿಸಿದ ಎಂ.ಡಿ.ಶ್ರೀಧರ್‌ರವರೇ ಈ ಚಿತ್ರದ ನಿರ್ದೇಶಕರು. ಸತ್ವವಿಲ್ಲದ ಕಥೆ, ವೇಗವಿಲ್ಲದ, ನಾವಿನ್ಯವಿಲ್ಲದ ನಿರೂಪಣೆಯಿಂದ 'ಕೃಷ್ಣ'ನನ್ನು ಸೊರಗಿಸಿದ್ದಾರೆ ಅವರು. ತ್ರಿಕೋನ ಪ್ರೇಮ ಕಥೆಯಾಗಿದ್ದರೂ, ಗಣೇಶ್‌ರ ಇಮೇಜ್ ಮೇಲುಗೈಯಾಗಿ, ಚಿತ್ರದ ತುಂಬಾ ಅವರೇ ಆವರಿಸಿಕೊಂಡಿದ್ದಾರೆ. ಎಂದಿನಂತೆ ಚುರುಕಾದ ಅಭಿನಯ, ಮನಮಿಡಿಯುವ ಭಾವಾಭಿನಯದಿಂದ ಗಣೇಶ್ ಗಮನಸೆಳೆದರೂ ನಾಯಕ ನಟನೊಬ್ಬನಿಂದಲೇ ಚಿತ್ರವನ್ನು ಮೇಲೆತ್ತಲು ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ 'ಕೃಷ್ಣ'.

ಟಿ.ವಿ. ಕಾರ್ಯಕ್ರಮವೊಂದರ ನಿರೂಪಕ ಕೃಷ್ಣ(ಗಣೇಶ್)ನನ್ನು ಅವನು ಬಾಡಿಗೆಗಿರುವ ಮನೆಯೊಡೆಯರ ಮಗಳು ಪೂಜಾ (ಪೂಜಾಗಾಂಧಿ) ಮೆಚ್ಚುತ್ತಾಳೆ. ಆದರೆ ಈಗಾಗಲೇ ಭಗ್ನ ಪ್ರೇಮಿಯಾಗಿದ್ದ ಕೃಷ್ಣ ಅವಳ ಪ್ರೀತಿಯನ್ನು ನಿರಾಕರಿಸುತ್ತಾನೆ. ಫ್ಲಾಶ್‌ಬ್ಯಾಕ್ ತೆರೆದುಕೊಳ್ಳುತ್ತದೆ. ಸಾಮಾನ್ಯ ನೌಕರನಾದ ಕೃಷ್ಣ ಬಡ ಹುಡುಗಿಯಾದ ಅಂಜಲಿ (ಶರ್ಮಿಳಾ)ಯನ್ನು ಪ್ರೀತಿಸುತ್ತಿರುತ್ತಾನೆ. ಅವರ ಮನೆಯ ಕಷ್ಟಸುಖಗಳಿಗೂ ನೆರವಾಗುತ್ತಾನೆ. ಆದರೆ ಶ್ರೀಮಂತ ವರನೊಬ್ಬ ಸಿಕ್ಕಿದನೆಂಬ ಕಾರಣಕ್ಕೆ ಮನೆಯವರು ಅಂಜಲಿಯನ್ನು ಅವನೊಂದಿಗೆ ಮದುವೆ ಮಾಡಲು ಸಿದ್ಧರಾಗುತ್ತಾರೆ. ಅಂಜಲಿಯೂ ಅದಕ್ಕೊಪ್ಪುತ್ತಾಳೆ. ಆ ವರ ಮಹಾಶಯನ ನಡತೆ ಸರಿಯಿಲ್ಲವೆಂದು ಕೃಷ್ಣ ಹೇಳಿದರೂ ಕೇಳದ ಅಂಜಲಿ ಕೃಷ್ಣನನ್ನು ನಿರಾಕರಿಸುತ್ತಾಳೆ. ಇದರಿಂದ



ದುಃಖಿತನಾದ ಕೃಷ್ಣ ಬೆಂಗಳೂರಿಗೆ ಬಂದು, ನಿರೂಪಕನಾಗಿ ಎಲ್ಲರನ್ನು ನಗಿಸುತ್ತಾ ತನ್ನ ನೋವು ಮರೆತಿರುತ್ತಾನೆ. ಕೃಷ್ಣನ ವಿಚಾರ ತಿಳಿದಮೇ[...] ಪೂಜಾ ಆತನನ್ನು ಪ್ರೀತಿಸುತ್ತಾಳೆ. ಆದರೆ ಹ[...] ಪ್ರೇಮಿ ಅಂಜಲಿ ಮತ್ತೆ ಪ್ರತ್ಯಕ್ಷಳಾಗುತ್ತಾಳೆ. ಶ್ರೀಮ[...] ವರ ಅಯೋಗ್ಯನೆಂದು ತಿಳಿದು ಅವನನ್ನು ಅಂ[...] ತಿರಸ್ಕರಿಸಿರುತ್ತಾಳೆ. ಜೀವನ ನಿರ್ವಹಣೆ[...] ಅಂಗಡಿಯೊಂದರಲ್ಲಿ ಸೇಲ್ಸ್‌ಗರ್ಲ್ [...] ಸೇರಿರುತ್ತಾಳೆ. ಅವಳ ಸ್ಥಿತಿಯನ್ನು ನೋಡಿ ಮರು[...] ಕೃಷ್ಣ ಮತ್ತೆ ಅವಳು ಓದಲು ಸಹಾಯ ಮಾಡು[...] ಮತ್ತು ಅವಳು ಡಾಕ್ಟರ್ ಆಗುವುದಕ್ಕೆ [...] ವ್ಯಯಿಸುತ್ತಾನೆ. ಮತ್ತೆ ಅವನನ್ನು ಮೆಚ್ಚುವ ಅ[...] ತನ್ನ ಪ್ರೇಮವನ್ನು ನಿವೇದಿಸಿಕೊಳ್ಳುತ್ತಾಳೆ. [...] ಇಲ್ಲಿ ಇನ್ನೊಂದು ಟ್ವಿಸ್ಟ್.

'ತಾನು ಮೆಚ್ಚಿದ ಹುಡುಗಿ ತನಗೆ ದಕ್ಕ[...] ಮಾತ್ರಕ್ಕೆ ಆಕೆ ಏನಾದರೂ ಆ[...] ಎಂದು ಬಿಡಲು ಮನಸ್ಸು ಒ[...] ನಿನಗೆ ಸಹಾಯ ಮಾಡಿದೆ. ನೀ[...] ಡಾಕ್ಟರ್ ಆಗಿರುವುದರಿಂದ ಕಾಲಮೇಲೆ ನಿಲ್ಲಲು ಶಕ್ತಿಯಿದೆ. ಜೀವನ ನೀನು ನೋಡಿಕೋ - [...] ನನಗೆ ನಿರಾಶೆ ಮಾಡಿದಂತೆ, [...] ಪೂಜಾಳಿಗೆ ನಿರಾಶೆ ಮಾಡಲ[...] ಎಂದು ನಾಯಕ ಅಂತಿಮ[...] ಪೂಜಾಳನ್ನು ಅ[...] ಮಾಡಿಕೊಳ್ಳುತ್ತಾನೆ. ಇಲ್ಲಿಗೆ [...] ಅಂತ್ಯ.

ಚಿತ್ರ ಅಸಹನೀಯವಾ[...] ಸಂಗೀತ ನಿರ್ದೇಶಕ ಹರಿಕೃಷ್ಣ ಅವರ ಕೊಡುಗೆ[...] ಸಾಕಷ್ಟಿದೆ. ಗುರುಕಿರಣ್ ಕೂಡಾ ಒಂದು ಹಾ[...] ಹಾಡಿದ್ದಾರೆ - ಅವರು ಹಾಡುವ ಚಪಲ[...] ಕೈಬಿಡುವುದು ಒಳ್ಳೆಯದು! ಸಂಭಾಷಣ[...] ಧಾಟಿಯಲ್ಲಿ 'ಮುಂಗಾರುಮಳೆ' ಛಾಪು ಕಾಣಿಸು[...] ಆ ಚಿತ್ರದ ಯಶಸ್ಸನ್ನು ಎನ್‌ಕ್ಯಾಶ್ ಮಾಡಿಕೊ[...] ಪ್ರಯತ್ನ! ನಾಯಕಿಯೂ ಆಕೆಯೇ! ಪೂಜಾಗಾ[...] ಮತ್ತೆ ತನ್ನ ಕೆಟ್ಟ ಮೇಕಪ್‌ನ[...] ಅಂದಗೆಡಿಸಿಕೊಂಡಿದ್ದಾರೆ ಆಕೆ. ಶರ್ಮಿಳಾ[...] ಪರವಾಗಿಲ್ಲ. ಹಾಸ್ಯದೃಶ್ಯಗಳಲ್ಲಿ ಚರಣ್ [...] ನಗಿಸುತ್ತಾರೆ, ಹೆಚ್ಚೇನೂ ಅಲ್ಲ!

# ಸಾಮಾಜಿಕ ಸಂದೇಶವಿಲ್ಲದ ನಾಟಕಗಳು

70ರ ದಶಕದಲ್ಲಿ ಮಂಗಳೂರು ರಂಗ ಚಟುವಟಿಕೆಗಳ ಕೇಂದ್ರ, ಆಗ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ 'ಸಮುದಾಯ' ಸಂಘಟನೆ ಒಂದು ಸಂಚಲನ ಮೂಡಿಸಿತ್ತು. ಸಮುದಾಯದ ನೇತೃತ್ವದಲ್ಲಿ ನಡೆದ ನಾಟಕ, ಸಾಂಸ್ಕೃತಿಕ ಗತಿಯನ್ನು ನಿರ್ದೇಶಿಸಿತ್ತು. ಆಗಿನ ನಾಟಕಗಳಿಗೆ ಸಾಮಾಜಿಕ ಪ್ರಜ್ಞೆ ಇತ್ತು. ಗುರಿ ಇತ್ತು.

**ನಾಟಕೋತ್ಸವ ನಾಟಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಎಂಬುದು ಸಂಘಟಕರ ವಾದ. ಆದರೆ ಈ ಸಂಸ್ಕೃತಿ ಉಳಿಸುವುದು ಇಂತಹ ಕೇಳ ಅಭಿರುಚಿಯ ನಾಟಕಗಳಿಂದಲ್ಲ.**

ಕಲೆ ಕೇವಲ ಕಲೆಗಾಗಿ ಅಲ್ಲ. ಅದು ಜನರ ಅಭಿವ್ಯಕ್ತಿಯ ಪ್ರಭಾವಿ ಮಾಧ್ಯಮ, ಜನರ ಭಾವನೆಗಳ ಪ್ರತೀಕ ಎಂಬ ಪರಿಕಲ್ಪನೆ ಇತ್ತು. ಹಾಗಾಗಿ ಸಮುದಾಯದ ನಾಟಕಗಳು ಇತರ ನಾಟಕಗಳಿಗೆ ಮಾದರಿ ಆಗಿತ್ತು.

'ಸಮುದಾಯ' ದ ತಾಯಿ, ಬೆಲ್ಚಿ ನಾಟಕ, ಇಲ್‌ದೆತ್ತಿಮಗೆ, ಬಯ್ಯಮಲ್ಲಿಗೆ ಸಾಮಾಜಿಕ ಸಂಘಟನೆಗೆ ಪ್ರೇರಕ ಶಕ್ತಿಯಾಯಿತು. ಸಂಜೀವ ದಂಡಕೇರಿ, ರಾಮಕಿರೋಡಿಯನ್, ಕೆ.ಆರ್. ಶ್ರೀಯಾನ್‌ರಂತಹ ನಾಟಕಕಾರರು, ರಂಗಭೂಮಿಯಂತಹ ಮಾಧ್ಯಮವನ್ನೇ ಪರಿಣಾಮಕಾರಿಯಾಗಿ ಬಳಕೆ ಮಾಡಿದ್ದರು. ಇತ್ತೀಚಿನ ವರ್ಷಗಳಲ್ಲೂ ಅಲ್ಲೊಂದು ಇಲ್ಲೊಂದು ಪ್ರಯತ್ನ ನಡೆದಿದೆ. ಸದಾನಂದ ಸುವರ್ಣ ಅವರ 'ಕೋರ್ಟ್ ಮಾರ್ಷಲ್','ಉರುಳು' ಈ ನಿಟ್ಟಿನಲ್ಲಿ ಉಲ್ಲೇಖಾರ್ಹ ಪ್ರಯತ್ನ.

**ರಂಗಮಿಲನದ ಪ್ರಯತ್ನ**

ಕಾಸರಗೋಡು ಚಿನ್ನಾ ನೇತೃತ್ವದ ರಂಗ ಮಿಲನ ತಂಡ ಮಂಗಳೂರಿನಲ್ಲಿ ತ್ರಿಭಾಷಾ ನಾಟಕೋತ್ಸವ ಹಮ್ಮಿಕ್ಕೊಂಡಿತು. ಕೊಂಕಣಿಯ ದಾಂಟಿ, ನಿನ್ನಮೋಕೆದಾ!? ಎಂಬ ತುಳು ನಾಟಕ ಹಾಗೂ ದೃಷ್ಟಿ ಎಂಬ ಕನ್ನಡ ನಾಟಕ ಪುರಭವನದಲ್ಲಿ ಪ್ರದರ್ಶನಗೊಂಡಿತು. ಈ ಮೂರು ನಾಟಕದ ನಿರ್ದೇಶಕರು ಕಾಸರಗೋಡು ಚಿನ್ನಾ.

ಸುಮಾರು 50 ಕಲಾವಿದರನ್ನು ಒಂದುಗೂಡಿಸಿ ಇಂತಹ ಪ್ರಯತ್ನಕ್ಕೆ ಕೈ ಹಾಕಿದ್ದು ಒಂದು ಸಾಧನೆಯೇ. ಜಯಂತ್ ಕಾಯ್ಕಿಣಿ, ಶ್ರೀನಿವಾಸ್ ಜಿ.ಕಪ್ಪಣ, ನಾದಾಶೆಟ್ಟಿ ಸೇರಿದಂತೆ ರಂಗಭೂಮಿಯ ಹಲವು ಗಣ್ಯರು ಈ ಕಾರ್ಯಕ್ರಮಕ್ಕೆ ಹಾರೈಸಿದರು. ಪ್ರಶಂಸೆ ಮಾಡಿದರು.

ಆದರೆ, ಈ ಮೂರು ನಾಟಕದಲ್ಲಿ ಯಾವುದೇ ಸಾಮಾಜಿಕ ಸಂದೇಶ ಇರಲಿಲ್ಲ. ಎಲ್ಲಕ್ಕೂ ಮಿಗಿಲಾಗಿ ಕುಟುಂಬ ಸಮೇತರಾಗಿ ನೋಡುವಂತಹ ನಾಟಕಗಳು ಇದಾಗಿರಲಿಲ್ಲ. ಸಾಮಾಜಿಕ ಪರಿಸ್ಥಿತಿಗಳು, ಜ್ವಲಂತ ಸಮಸ್ಯೆಗಳ ಬಗ್ಗೆ, ಪ್ರಸ್ತಾಪವೂ ಇರಲಿಲ್ಲ. ನಾಟಕಗಳು ಉತ್ತಮ ಅಭಿರುಚಿಯಿಂದ ಕೂಡಿರಲಿಲ್ಲ.

ಇವೆಲ್ಲವೂ ಕೆಟ್ಟ ಸಂದೇಶದಿಂದ ಕೂಡಿದ್ದವು. 'ನಿನ್ನ ಮೋಕೆದಾ?!' ನಾಟಕದಲ್ಲಿ ಕಣ್ಣು ಕಳೆದುಕೊಂಡ ಗಂಡನನ್ನು ತೊರೆದು ತನ್ನ ಹಳೆ ಪ್ರಿಯಕರರನ್ನು ಸೇರುವ, ಕೀಳು ಅಭಿರುಚಿಯ ಸಂದೇಶ ನೀಡಲಾಯಿತು. ಭಯ ಹುಟ್ಟಿಸುವ ಮೂಢನಂಬಿಕೆಯನ್ನು ಸಾರುವ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಕಾಸರಗೋಡು ಚಿನ್ನಾ ಯಾವ ಪುರುಷಾರ್ಥ ಸಾಧನೆ ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಮೂಡಿದರೆ ಅಚ್ಚರಿ ಇಲ್ಲ.

ನಾಟಕೋತ್ಸವ ನಾಟಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಎಂಬುದು ಸಂಘಟಕರ ವಾದ. ಆದರೆ ಈ ಸಂಸ್ಕೃತಿ ಉಳಿಸುವುದು ಇಂತಹ ಕೇಳ ಅಭಿರುಚಿಯ ನಾಟಕಗಳಿಂದಲ್ಲ.

ಇನ್ನೊಂದು ದೃಷ್ಟಿಯಲ್ಲಿ ನೋಡುವುದಾರೆ, ದಶಕಗಳ ಕಾಲ ಹಾಸ್ಯಮಯ ನಾಟಕ ನೀಡುತ್ತಾ ಬಂದಿರುವ ದೇವದಾಸ್ ಕಾಪಿಕಾಡ್, ವಿಜಯಕುಮಾರ್ ಕೋಡಿಯಾಲ್‌ಬೈಲ್ ಸೇರಿದಂತೆ ನಾಟಕಕಾರರು ತುಳು ನಾಟಕರಂಗವನ್ನು ಉಳಿಸಿಕೊಂಡು ಬಂದು ಉತ್ತಮ ಸೇವೆ ಸಲ್ಲಿಸಿದ್ದಾರೆ.

ದೊಡ್ಡ ದೊಡ್ಡ ಬ್ಯಾನರ್ ಕಟೌಟ್ ಹಾಕಿ, ಪ್ರಚಾರ ಗಿಟ್ಟಿಸಿ ಇಂತಹ ಮೇನಿಯಾ ಸೃಷ್ಟಿಸುವ ಮೂಲಕ ನಾಟಕ ಸಂಸ್ಕೃತಿಯನ್ನು ಉಳಿಸಿದಂತೆ ಆಗುವುದಿಲ್ಲ. ಸಮಾಜದ ಗುಣಾತ್ಮಕ ಬದಲಾವಣೆಗೆ ಇದು ಯಾವುದೇ ಕೊಡುಗೆ ನೀಡುವುದಿಲ್ಲ.

ಮಂಗಳೂರಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಇಷ್ಟೊಂದು ನಿರ್ವಾತ ಇದೆ ಎಂಬುದನ್ನು ಈ ನಾಟಕೋತ್ಸವ ತೋರಿಸಿಕೊಟ್ಟಿದೆ. ಸಮುದಾಯ ಈ ಬೆಳವಣಿಗೆಗಳನ್ನು ಗಂಭೀರವಾಗಿ ಅಧ್ಯಯನ ನಡೆಸಿ ಮತ್ತೊಮ್ಮೆ ರಂಗ ಚಟುವಟಿಕೆಯತ್ತ ಹೆಜ್ಜೆ ಹಾಕಬೇಕು. ಮಂಗಳೂರಿನ ಚಿಂತಕರು, ಬುದ್ಧಿಜೀವಿಗಳೂ ಇವನ್ನೇ ನಿರೀಕ್ಷಿಸುತ್ತಿದ್ದಾರೆ.

**ಸಿಮಿಸ್ಸಿ**

## ಎ.ಕೆ. ಗೋಪಾಲನ್ ಕುರಿತ ಚಲನಚಿತ್ರ

ದೇಶದ ಕಮ್ಯುನಿಷ್ಟ್ ಚಳುವಳಿ[...] ಅಪ್ರತಿಮ ನೇತಾರ, ಜನಚಳುವಳಿಗ[...] ಪುಟಿದೆದ್ದಲ್ಲೆಲ್ಲಾ ಹಾಜರಿ ಹಾಕಿ ಸ್ಫೂ[...] ತುಂಬುತ್ತಿದ್ದ ಬಂಡಾಯಗಾರ ಎ.[...] ಗೋಪಾಲನ್ ಅವರ ಬದುಕೇ ಒಂ[...] ರೋಚಕ ಕಾದಂಬರಿಯಂತೆ. ಕಾಂ. ಎ.[...] ಗೋಪಾಲನ್ ಅವರ ಕುರಿತು ಇದೀಗ ಒಂ[...] ಚಲನಚಿತ್ರ ಬಿಡುಗಡೆಯಾಗಿದೆ.

ಶಾಜಿ ಉನ್ ಕರುನ್ ಒಬ್ಬ ಪ್ರತಿಭಾ[...] ನಿರ್ದೇಶಕ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ[...] ಇವರು ಈ ಚಿತ್ರವನ್ನು ನಿರ್ದೇಶಿಸಿದ್ದಾ[...] ಎ.ಕೆ.ಜಿ ಯವರನ್ನೇ ಹೋಲ[...] ಪಾತ್ರಧಾರಿಯೊಬ್ಬರು ಚಿತ್ರದ[...] ಎ.ಕೆ.ಜಿ.ಯವರ ಪಾತ್ರವನ್ನು ನಿರ್ವಹಿಸಿದ್ದಾ[...] ಚಿತ್ರದ ಹೆಸರು 'ಎ.ಕೆ.ಜಿ. ಅತಿಜೀವನ[...] ಕನಲ್ಪಜಿಕಲ್' ಅಂತ. ದೆಹಲಿ ಕಾರ್ಯನಿ[...] ಪತ್ರಕರ್ತರ ಸಂಘ ಹಾಗೂ ಜನಶಕ್ತಿ[...] ಜಂಟಿಯಾಗಿ ನವದೆಹಲಿಯಲ್ಲಿ ಈ [...] ಪ್ರದರ್ಶನ ಏರ್ಪಡಿಸಿದ್ದಾಗ ಸಿಕ್ಕ ಜನಬೆಂ[...] ಎ.ಕೆ.ಜಿ. ಅಭಿಮಾನಿಗಳಲ್ಲಿ ಉತ್ಸಾ[...] ಮೂಡಿಸಿದೆ.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No-12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH

ಜನಶಕ್ತಿ ಬೀರು -15